**2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 20**

**ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ ಬೆಂಗಳೂರು, 2018**

**ಪ್ರಕರಣಗಳ ಪಟ್ಟಿ**

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ
4. ವಿಶ್ವವಿದ್ಯಾಲಯದ ಉದ್ದೇಶಗಳು
5. ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳು
6. ವಿಶ್ವವಿದ್ಯಾಲಯಕ್ಕೆ ಪ್ರವೇಶ
7. ನಿರ್ದೇಶನಗಳನ್ನು ನೀಡಲು ಅಧಿಕಾರ
8. ವಿಶ್ವವಿದ್ಯಾಲಯದ ಆದೇಶಗಳನ್ನು ರದ್ದುಗೊಳಿಸಲು ಅಧಿಕಾರ
9. ವಿಶ್ವವಿದ್ಯಾಲಯದ ಅಧಿಕಾರಿಗಳು
10. ಕುಲಾಧಿಪತಿಯವರು
11. ಪರಿಶೀಲನೆ
12. ಸಹ-ಕುಲಾಧಿಪತಿ
13. ಕುಲಪತಿ
14. ಕುಲಪತಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು
15. ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯವ್ಯವಸ್ಥೆ
16. ಕುಲಸಚಿವರು
17. ಪರೀಕ್ಷೆಗಳ ನಿಯಂತ್ರಕ
18. ಹಣಕಾಸು ಅಧಿಕಾರಿ
19. ಡೀನ್
20. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು
21. ಕಾರ್ಯನಿರ್ವಾಹಕ ಪರಿಷತ್ತು
22. ಕಾರ್ಯನಿರ್ವಾಹಕ ಪರಿಷತ್ತಿನ ಪದಾವಧಿ
23. ಕಾರ್ಯನಿರ್ವಾಹಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು
24. ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳು
25. ವಿದ್ಯಾವಿಷಯಕ ಪರಿಷತ್ತು
26. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು
27. ಹಣಕಾಸು ಸಮಿತಿ
28. ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿ
29. ಇತರ ಮಂಡಲಿಗಳು, ಸಮಿತಿಗಳು ಮತ್ತು ಪರಿಷತ್ತುಗಳು
30. ಪರಿನಿಯಮಗಳು
31. ಪರಿನಿಯಮಗಳ ರಚನೆ ಮತ್ತು ಅವುಗಳ ಅಧಿನಿಯಮಿತಿ
32. ಆರ್ಡಿನೆನ್ಸ್‌ಗಳು
33. ಆರ್ಡಿನೆನ್ಸ್‌ಗಳ ರಚನೆಯ ಕಾರ್ಯವಿಧಾನ
34. ವಿನಿಯಮಗಳು
35. ನಿಯಮಗಳ ರಚನಾಧಿಕಾರ
36. ರಚನೆ, ರಿಕ್ತಸ್ಥಾನ, ಇತ್ಯಾದಿಗಳಲ್ಲಿನ ದೋಷದ ಆಧಾರದ ಮೇಲೆ ಮಾತ್ರವೇ ಕಾರ್ಯವು ಅಸಿಂಧುವಾಗತಕ್ಕದ್ದಲ್ಲ
37. ವಿಶ್ವವಿದ್ಯಾನಿಲಯದ ನಿಧಿಗಳು
38. ವಿಶ್ವವಿದ್ಯಾನಿಲಯದ ವಿಘಟನೆ ಅಥವಾ ಸಮಾಪ್ತಿ
39. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ
40. ಹಣಕಾಸು ಅಂದಾಜುಗಳು

41. ಲೆಕ್ಕಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ
42. ವಾರ್ಷಿಕ ವರದಿ
43. ಖರೀದಿಗಳ ಕಾರ್ಯಗತಗೊಳಿಸುವಿಕೆ
44. ತಾತ್ಕಾಲಿಕ ಉಪಬಂಧಗಳು
45. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಹಾಗೂ ಇತರ ವಿಷಯಗಳು
46. ನಷ್ಟಭರ್ತಿ
47. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ
48. ಪ್ರಾರಂಭದಲ್ಲಿ ತೊಂದರೆಗಳನ್ನು ನಿವಾರಿಸಲು ಅಧಿಕಾರ


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2019ರ ಅಧಿನಿಯಮ ಸಂಖ್ಯೆ 20.–** ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸಂಸ್ಥೆಗಳು ಅರ್ಥಶಾಸ್ತ್ರ ಮತ್ತು ಇತರ ಸಮಾಜ ವಿಜ್ಞಾನಗಳ ಕ್ಷೇತ್ರಗಳಲ್ಲಿಯ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚುತ್ತಿರುವ ಸಂಕೀರ್ಣತೆಯನ್ನು ಹಾಗೂ ತಂತ್ರಜ್ಞಾನದ ಮೂಲಕ ನಿರ್ದಿಷ್ಟವಾಗಿ ಹೆಸರಾಂತ ಮತ್ತು ಗುಣಮಟ್ಟದ ಅರ್ಥಶಾಸ್ತ್ರಜ್ಞರನ್ನು ತಯಾರಿಸಲು ಜಾಗತಿಕವಾಗಿ ಒಟ್ಟುಗೂಡಿ ಬೆಳೆಯುತ್ತಿರುವ ವಿಶ್ವದ ಪರಿಣಾಮವಾಗಿರುವ ಅನಿಶ್ಚಿತತೆಗಳನ್ನು ಪೂರೈಸಲು ಸಾಧ್ಯವಾಗದಿರುವುದರಿಂದ ಮತ್ತು ಸರ್ಕಾರದ, ಅರ್ಥಶಾಸ್ತ್ರ, ಉದ್ಯಮ ಶೈಕ್ಷಣಿಕ ಕ್ಷೇತ್ರಗಳ ಮತ್ತು ಸಮಾಜದ ಅಗತ್ಯತೆಗಳನ್ನು ದೊಡ್ಡ ಮಟ್ಟದಲ್ಲಿ ಪೂರೈಸುವುದಕ್ಕೆ ಶೈಕ್ಷಣಿಕ, ಸಂಶೋಧನಾ, ಸಮಾಲೋಚನಾ, ವೈಚಾರಿಕ ವೇದಿಕೆ (Think Tank), ತರಬೇತಿ ಮತು ಜ್ಞಾನ ಪ್ರಸಾರಗಳಲ್ಲಿ ಬಹುವಿಧದ ಕಾರ್ಯಗಳನ್ನು ನಿರ್ವಹಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕ ವಿಷಯಗಳಿಗಾಗಿ ಮತ್ತು ಈ ವಿಷಯಗಳಲ್ಲಿ ಶ್ರೇಷ್ಠತೆಯ ವಿದ್ಯಾಲಯವನ್ನಾಗಿ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಎಂದು ಕರೆಯಲಾಗುವ ಬೆಂಗಳೂರಿನಲ್ಲಿ ಕೇಂದ್ರ ಕಾರ್ಯಸ್ಥಾನವಿರುವ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಈ ವಿಧೇಯಕ.

[2018ರ ವಿಧಾನಸಭೆಯ ವಿಧೇಯಕ ಸಂಖ್ಯೆ 56, ಕಡತ ಸಂಖ್ಯೆ:ಸಂವ್ಯಶಾಇ 03 ಶಾಸನ 2018]
[ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೆಯ ನಮೂದನೆಯಡಿಯಲ್ಲಿ ಬರುತ್ತದೆ.]

## II

**2021ರ ತಿದ್ದುಪಡಿ ಅಧಿನಿಯಮ ಸಂಖ್ಯೆ 05.**–ಡಾ. ಬಿ. ಆರ್. ಅಂಬೇಡ್ಕರ್‌ರವರ ಕೀರ್ತಿಯನ್ನು ಗೌರವಿಸುವುದಕ್ಕಾಗಿ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯವನ್ನು "ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು" ಎಂದು ಮರುನಾಮಕಾರಣ ಮಾಡಲು, ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ, 2018ನ್ನು (2019ರ ಕರ್ನಾಟಕ ಅಧಿನಿಯಮ 20) ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2021ರ ವಿಧಾನಸಭೆಯ ವಿಧೇಯಕ ಸಂಖ್ಯೆ: 10, ಕಡತ ಸಂಖ್ಯೆ: ಸಂವ್ಯಶಾಇ 05 ಶಾಸನ 2021]
[ಭಾರತ ಸಂವಿಧಾನದ 7ನೇ ಅನುಸೂಚಿಯ 3ನೇ ಪಟ್ಟಿಯ 25ನೇಯ ನಮೂದನೆಯಡಿಯಲ್ಲಿ ಬರುತ್ತದೆ]
[ಕರ್ನಾಟಕ ರಾಜ್ಯ ಪತ್ರದ ಭಾಗ–IVA, ವಿಶೇಷ ಪತ್ರಿಕೆ ಸಂಖ್ಯೆ: 195 ದಿನಾಂಕ: 19.02.2021ರಲ್ಲಿ ಪ್ರಕಟಣೆಗೊಂಡಿದೆ]

**2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 20**

(2019ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ ಬೆಂಗಳೂರು, 2018**

(2019ರ ಸೆಪ್ಟೆಂಬರ್ 21ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರಿಂದ ಅನುಮತಿಯನ್ನು ಪಡೆಯಲಾಗಿದೆ)

(2021ರ ಅಧಿನಿಯಮ ಸಂಖ್ಯೆ 05ರಂತೆ ತಿದ್ದುಪಡಿಯಾಗಿರುವಂತೆ)

[1][ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು][1]ನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಮತ್ತು ನಿಗಮಿತಗೊಳಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಲು ಒಂದು ಅಧಿನಿಯಮ.

ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸಂಸ್ಥೆಗಳು ಅರ್ಥಶಾಸ್ತ್ರ ಮತ್ತು ಇತರ ಸಮಾಜ ವಿಜ್ಞಾನಗಳ ಕ್ಷೇತ್ರಗಳಲ್ಲಿಯ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಹೆಚ್ಚುತ್ತಿರುವ ಸಂಕೀರ್ಣತೆಯನ್ನು ಹಾಗೂ ತಂತ್ರಜ್ಞಾನದ ಮೂಲಕ ನಿರ್ದಿಷ್ಟವಾಗಿ ಹೆಸರಾಂತ ಮತ್ತು ಗುಣಮಟ್ಟದ ಅರ್ಥಶಾಸ್ತ್ರಜ್ಞರನ್ನು ತಯಾರಿಸಲು ಜಾಗತಿಕವಾಗಿ ಒಟ್ಟುಗೂಡಿ ಬೆಳೆಯುತ್ತಿರುವ ವಿಶ್ವದ ಪರಿಣಾಮವಾಗಿರುವ ಅನಿಶ್ಚಿತತೆಗಳನ್ನು ಪೂರೈಸಲು ಸಾಧ್ಯವಾಗದಿರುವುದರಿಂದ ಮತ್ತು ಸರ್ಕಾರದ, ಅರ್ಥಶಾಸ್ತ್ರ, ಉದ್ಯಮ ಶೈಕ್ಷಣಿಕ ಕ್ಷೇತ್ರಗಳ ಮತ್ತು ಸಮಾಜದ ಅಗತ್ಯತೆಗಳನ್ನು ದೊಡ್ಡ ಮಟ್ಟದಲ್ಲಿ ಪೂರೈಸುವುದಕ್ಕೆ ಶೈಕ್ಷಣಿಕ, ಸಂಶೋಧನಾ, ಸಮಾಲೋಚನಾ, ವೈಚಾರಿಕ ವೇದಿಕೆ (Think Tank), ತರಬೇತಿ ಮತು ಜ್ಞಾನ ಪ್ರಸಾರಗಳಲ್ಲಿ ಬಹುವಿಧದ ಕಾರ್ಯಗಳನ್ನು ನಿರ್ವಹಿಸಲು ಮತ್ತು ಈ ವಿಷಯಗಳಲ್ಲಿ ಶ್ರೇಷ್ಠತೆಯ ವಿದ್ಯಾಲಯವನ್ನಾಗಿ [1][ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು][1] ಎಂದು ಕರೆಯಲಾಗುವ ಹೊಸ ವಿಶ್ವವಿದ್ಯಾಲಯವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವುದು ಮತ್ತು ನಿಗಮಿತಗೊಳಿಸುವುದು ಹಾಗೂ ಅದಕ್ಕೆ ಸಂಬಂಧಿಸಿದ ಅಥವಾ ಆನುಷಂಗಿಕ ವಿಷಯಗಳಿಗಾಗಿ ಉಪಬಂಧವನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೊಂಬತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. 2021ರ ಅಧಿನಿಯಮ ಸಂಖ್ಯೆ 05ರ ಮೂಲಕ 19.02.2021 ರಿಂದ ಪ್ರತ್ಯಾಯೋಜಿಸಲಾಗಿದೆ. ಹಿಂದಿನ ಪಠ್ಯ.-"ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ"

## ಅಧ್ಯಾಯ I

### ಪ್ರಾಥಮಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [2][ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು][2] ಅಧಿನಿಯಮ, 2018 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸುವ ಅಂಥ [1][ದಿನಾಂಕ][1] ದಿಂದ ಜಾರಿಗೆ ಬರತಕ್ಕದ್ದು.

1. ಈ ಅಧಿನಿಯಮವು ಅಧಿಸೂಚನೆ ಸಂಖ್ಯೆ: ಇಡಿ 41 ಯುಬಿವಿ 2018 (ಭಾಗ-2) ದಿ:30.10.2019ರ ಮೂಲಕ ದಿ:30.10.2019ರಿಂದ ಜಾರಿಗೆ ಬಂದಿದೆ
2. 2021ರ ಅಧಿನಿಯಮ ಸಂಖ್ಯೆ 05ರ ಮೂಲಕ 19.02.2021 ರಿಂದ ಪ್ರತ್ಯಾಯೋಜಿಸಲಾಗಿದೆ. ಹಿಂದಿನ ಪಠ್ಯ.-"ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ"

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯಪಡಿಸಿದ ಹೊರತು,-

(1) "ಶೈಕ್ಷಣಿಕ ಪರಿಷತ್ತು" ಎಂದರೆ, ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಷತ್ತು;

(2) "ಗೊತ್ತುಪಡಿಸಿದ ದಿನಾಂಕ" ಎಂದರೆ, ಈ ಅಧಿನಿಯಮವನ್ನು ಪ್ರಾರಂಭಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕ;

(3) "ಪ್ರಾಧಿಕಾರಗಳು" ಎಂದರೆ, ವಿಶ್ವವಿದ್ಯಾಲಯದ ಪ್ರಾಧಿಕಾರಗಳು;

(4) "ಕುಲಾಧಿಪತಿ" ಎಂದರೆ ವಿಶ್ವವಿದ್ಯಾಲಯದ ಕುಲಾಧಿಪತಿ;

(5) "ಕಾರ್ಯನಿರ್ವಾಹಕ ಪರಿಷತ್ತು" ಎಂದರೆ, ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತು;

(6) "ಅಧಿಕಾರಿಗಳು" ಎಂದರೆ, ವಿಶ್ವವಿದ್ಯಾಲಯದ ಅಧಿಕಾರಿಗಳು;

(7) "ಸಹ ಕುಲಾಧಿಪತಿ" ಎಂದರೆ, ವಿಶ್ವವಿದ್ಯಾಲಯದ ಸಹ ಕುಲಾಧಿಪತಿ;

(8) "ಕುಲಸಚಿವ" ಎಂದರೆ, ವಿಶ್ವವಿದ್ಯಾಲಯದ ಕುಲಸಚಿವ;

(9) "ವಿನಿಯಮಗಳು" ಎಂದರೆ, ಈ ಅಧಿನಿಯಮದ 30ನೇ ಪ್ರಕರಣಗಳ ಅಡಿಯಲ್ಲಿ ಮಾಡಿದ ವಿಶ್ವವಿದ್ಯಾಲಯದ ವಿನಿಯಮಗಳು;

(10) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಲಗತ್ತಿಸಲಾದ ಅನುಸೂಚಿ;

(11) "ಸೊಸೈಟಿ" ಎಂದರೆ, ಕರ್ನಾಟಕ ಸೊಸೈಟಿಗಳ ನೋಂದಣಿ ಅಧಿನಿಯಮ 1960ರ (1960ರ ಕರ್ನಾಟಕ ಅಧಿನಿಯಮ 17) ಅಡಿಯಲ್ಲಿ ನೋಂದಾಯಿಸಿದ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ಸೊಸೈಟಿ;

(12) "ಅಧ್ಯಾಪಕರು" ಎಂದರೆ, ಒಂದು ವಿಶ್ವವಿದ್ಯಾಲಯದ ಅಥವಾ ಬೋಧನೆಯನ್ನು ನೀಡುವ ವಿಶ್ವವಿದ್ಯಾಲಯದಲ್ಲಿನ ಘಟಕ ಕಾಲೇಜಿನ ಗೌರವ/ವಿಶ್ರಾಂತ/ಹಂಗಾಮಿ (adjunct) ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು/ಗ್ರಂಥಪಾಲಕರು/ಉಪ ಗ್ರಂಥ ಪಾಲಕರು/ಸಹಾಯಕ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಣದ ನಿರ್ದೇಶಕರು/ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು ಇವರುಗಳನ್ನು ಒಳಗೊಂಡ ಪ್ರಾಧ್ಯಾಪಕರು;

(13) "ವಿಶ್ವವಿದ್ಯಾಲಯ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ [1][ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು][1];

(14) "ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ (ಯುಜಿಸಿ)" ಎಂದರೆ, ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ ಅಧಿನಿಯಮ, 1956ರ (1956ರ ಕೇಂದ್ರ ಅಧಿನಿಯಮ 3) ಅನುಸಾರವಾಗಿ ಕೇಂದ್ರ ಸರ್ಕಾರವು ಸ್ಥಾಪಿಸಿದ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗ; ಮತ್ತು

(15) "ಕುಲಪತಿ" ಎಂದರೆ ವಿಶ್ವವಿದ್ಯಾಲಯದ ಕುಲಪತಿ.

1. 2021ರ ಅಧಿನಿಯಮ ಸಂಖ್ಯೆ 05ರ ಮೂಲಕ 19.02.2021 ರಿಂದ ಪ್ರತ್ಯಾಯೋಜಿಸಲಾಗಿದೆ. ಹಿಂದಿನ ಪಠ್ಯ.-ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ

## ಅಧ್ಯಾಯ II
## ವಿಶ್ವವಿದ್ಯಾಲಯ

3. **ವಿಶ್ವವಿದ್ಯಾಲಯದ ಸ್ಥಾಪನೆ ಮತ್ತು ನಿಗಮನ.–** (1) 4ನೇ ಪ್ರಕರಣದಲ್ಲಿ ಹೇಳಲಾದ ವಿಶ್ವವಿದ್ಯಾಲಯದ ಉದ್ದೇಶಗಳ ಮುಂದುವರಿಕೆಗಾಗಿ [1][ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು][1] ಎಂದು ಕರೆಯಲಾಗುವ ಏಕಾತ್ಮಕ, ಸಂಯೋಜನೆಯನ್ನು ನೀಡದಿರುವ ವಿಶ್ವವಿದ್ಯಾಲಯವನ್ನು ಕರ್ನಾಟಕ ರಾಜ್ಯದಲ್ಲಿ ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾಲಯವು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಸ್ವತ್ತನ್ನು ಆರ್ಜಿಸುವ ಮತ್ತು ಧಾರಣ ಮಾಡುವ, ಕರಾರು ಮಾಡಿಕೊಳ್ಳುವ ಹಾಗೂ ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯಕವಾದ ಅಂಥ ಇತರ ಕಾರ್ಯಗಳನ್ನು ಕೈಗೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ, ವಾದಪತ್ರಗಳಿಗೆ ರಿಜಿಸ್ಟ್ರಾರರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂತಹ ದಾವೆಗಳಲ್ಲಿನ ಮತ್ತು ವ್ಯವಹರಣೆಗಳಲ್ಲಿನ ಎಲ್ಲ ಆದೇಶಿಕೆಗಳನ್ನು ರಿಜಿಸ್ಟ್ರಾರರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

(4) ವಿಶ್ವವಿದ್ಯಾಲಯದ ಕೇಂದ್ರ ಸ್ಥಾನವು ಬೆಂಗಳೂರಿನಲ್ಲಿ ಇರತಕ್ಕದ್ದು.

1. 2021ರ ಅಧಿನಿಯಮ ಸಂಖ್ಯೆ 05ರ ಮೂಲಕ 19.02.2021 ರಿಂದ ಪ್ರತ್ಯಾಯೋಜಿಸಲಾಗಿದೆ. ಹಿಂದಿನ ಪಠ್ಯ.-ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ

4. **ವಿಶ್ವವಿದ್ಯಾಲಯದ ಉದ್ದೇಶಗಳು.– (1)** ಅರ್ಥಶಾಸ್ತ್ರಗಳು ಮತ್ತು ಸಂಬಂಧಿತ ವಿಷಯಗಳ ಕಲಿಕೆ ಮತ್ತು ಜ್ಞಾನದ ಮುನ್ನಡೆ ಮತ್ತು ಪ್ರಸಾರ (disseminate) ಹಾಗೂ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಅವುಗಳ ಪಾತ್ರವು ವಿಶ್ವವಿದ್ಯಾಲಯದ ಉದ್ದೇಶಗಳಾಗಿರತಕ್ಕದ್ದು. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡಮಟ್ಟದಲ್ಲಿ ಸಮಾಜ ಸೇವೆಗೈಯ್ಯಲು ಜವಾಬ್ದಾರಿ ಪ್ರಜ್ಞೆಯನ್ನು ವಿದ್ಯಾರ್ಥಿಗಳಲ್ಲಿ ಮತ್ತು ಸಂಶೋಧನಾ ವಿದ್ವಾಂಸರಲ್ಲಿ ಬೆಳೆಸುವುದು ಹಾಗೂ ಜ್ಞಾನವನ್ನು ಅಭಿವೃದ್ಧಿಗೊಳಿಸಲು ಉಪನ್ಯಾಸಗಳು, ವಿಚಾರಸಂಕೀರ್ಣಗಳು, ಚರ್ಚಾ ಗೋಷ್ಠಿಗಳು ಮತ್ತು ಸಮಾವೇಶಗಳನ್ನು ಆಯೋಜಿಸುವುದು ಮತ್ತು ಅರ್ಥಶಾಸ್ತ್ರೀಯ ಕಾರ್ಯ ತಂತ್ರಗಳನ್ನು ಸಾಮಾಜಿಕ ಅಭಿವೃದ್ಧಿಯ ಸಮರ್ಥ ಸಾಧನಗಳನ್ನಾಗಿ ಮಾಡುವುದು, ಪರೀಕ್ಷೆಗಳನ್ನು ನಡೆಸುವುದು ಹಾಗೂ ಪದವಿಗಳು ಮತ್ತು ಇತರ ಶೈಕ್ಷಣಿಕ ಮನ್ನಣೆಗಳನ್ನು ನೀಡುವುದು ಹಾಗೂ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಮತ್ತು ಭಾರತದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾದ ಮೌಲ್ಯಗಳನ್ನು ಈಡೇರಿಸುವುದಕ್ಕೆ ಆನುಷಂಗಿಕ, ಅವಶ್ಯಕ ಅಥವಾ ನೆರವಾಗುವ ಅಂಥ ಎಲ್ಲಾ ಕಾರ್ಯಗಳನ್ನು ಮಾಡುವುದು.

(2) ವಿಶ್ವವಿದ್ಯಾನಿಲಯವು, ಎಲ್ಲಾ ವ್ಯಕ್ತಿಗಳಿಗೆ, ಎಲ್ಲಾ ಧರ್ಮದವರಿಗೂ ಅವರು ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ ಮತ್ತು ಯಾವುದೇ ಜನಾಂಗ, ಪಂಥ, ಜಾತಿ ಅಥವಾ ವರ್ಗಕ್ಕೆ ಸೇರಿರಲಿ, ಮುಕ್ತವಾಗಿರತಕ್ಕದ್ದು ಮತ್ತು ಅದಕ್ಕೆ ಅಧ್ಯಾಪಕನಾಗಿ ಅಥವಾ ವಿದ್ಯಾರ್ಥಿಯಾಗಿ ಪ್ರವೇಶ ಪಡೆಯಲು ಅಥವಾ ಅದರಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಲು ಅಥವಾ ಅದರಲ್ಲಿ ಪದವೀಧರನಾಗಲು ಅಥವಾ ಅದರ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು

ಅಥವಾ ಚಲಾಯಿಸಲು ಹಕ್ಕುಳ್ಳವನಾಗಿರುವುದಕ್ಕೆ ಯಾವುದೇ ಧಾರ್ಮಿಕ ನಂಬಿಕೆ ಅಥವಾ ನಿಷ್ಠೆಯ ಬಗ್ಗೆ ಯಾವೊಬ್ಬ ವ್ಯಕ್ತಿಯ ಮೇಲೆ ಯಾವುದೇ ಅರ್ಹತೆಯನ್ನು ವಿಶ್ವವಿದ್ಯಾನಿಲಯವು ವಿಧಿಸುವುದು ಕಾನೂನು ಬದ್ಧವಾಗಿರತಕ್ಕದ್ದಲ್ಲ.

(3) ವಿಶ್ವವಿದ್ಯಾಲಯದ ಗುರಿಗಳು ಮತ್ತು ಉದ್ದೇಶಗಳು ಈ ಮುಂದಿನಂತೆ ಇರತಕ್ಕದ್ದು,-

(ಎ) ಅರ್ಥಶಾಸ್ತ್ರಗಳು ಮತ್ತು ಸಂಬಂಧಿತ ವಿಷಯಗಳ ಮೇಲೆ ಕೇಂದ್ರೀಕರಿಸಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಜಾಗತಿಕವಾಗಿ ಗುರುತಿಸುವ ಶ್ರೇಷ್ಠ ಸಂಸ್ಥೆಯಾಗುವುದು;

(ಬಿ) ಬೋಧನೆ, ಸಂಶೋಧನೆ, ತರಬೇತಿ ಮತ್ತು ನೀತಿ ಸಮರ್ಥನೆಗಾಗಿ ಸ್ವಾಯತ್ತ ಸಂಸ್ಥೆಯನ್ನು ಮುಂದುವರಿಕೆ ಶಿಕ್ಷಣ ಕೇಂದ್ರವಾಗಿ ಅಭಿವೃದ್ಧಿಗೊಳಿಸುವುದು;

(ಸಿ) ಸಾರ್ವಜನಿಕ ಮತ್ತು ಖಾಸಗಿ ವಲಯದಿಂದ ನೀತಿ ರಚನೆಕಾರರಿಗೆ ಮತ್ತು ಇತರರಿಗೆ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು;

(ಡಿ) ಅರ್ಥಶಾಸ್ತ್ರಗಳು ಮತ್ತು ಇತರ ಸಮಾಜ ವಿಜ್ಞಾನಗಳ ಕ್ಷೇತ್ರಗಳಲ್ಲಿ ಸಮಾಲೋಚನೆಯನ್ನು ನೀಡುವುದು ಮತ್ತು ಪ್ರಾಯೋಜಿತ ಕಾರ್ಯಕ್ರಮಗಳನ್ನು ಅಂಗೀಕರಿಸುವುದು;

(ಇ) ಜರ್ನಲುಗಳು, ಸಂಶೋಧನಾ ಲೇಖನಗಳು, ಕಾರ್ಯನಿರ್ವಹಣಾ ಪತ್ರಗಳು, ನೀತಿ ಸಂಕ್ಷೇಪಗಳು ಮತ್ತು ಲೇಖನಗಳು ಇವುಗಳನ್ನು ಒಳಗೊಂಡಂತೆ ಸಾಂದರ್ಭಿಕ ಪತ್ರಿಕೆಗಳು, ಜರ್ನಲುಗಳು, ನಿಯತಕಾಲಿಕೆಗಳು ಮತ್ತು ಪುಸ್ತಕಗಳ ಪ್ರಕಟಣೆಯನ್ನು ತಾವಾಗಿಯೇ ಕೈಗೊಳ್ಳುವುದು ಹಾಗೂ ನೆರವನ್ನು ಕಲ್ಪಿಸುವುದು; ಅದರ ಯಾವುದೇ ಗುರಿಗಳು ಮತ್ತು ಉದ್ದೇಶಗಳ ಮುಂದುವರಿಕೆಗಾಗಿ ಮತ್ತು ಮುನ್ನಡೆಯ ಚಟುವಟಿಕೆಗಳು ಮತ್ತು ಗ್ರಂಥಾಲಯ ಮಾಹಿತಿ ಸೇವೆಗಳನ್ನು ವರ್ಧಿಸಲು (augmenting) ಡಿಜಿಟಲ್ ಮಾಧ್ಯಮಗಳು, ದೃಶ್ಯ ಮಾಧ್ಯಮಗಳು, ಮುದ್ರಣ ಮಾಧ್ಯಮಗಳನ್ನು ಬಳಸಿಕೊಳ್ಳುವುದು.

(ಎಫ್) ಬೋಧನೆ, ಸಂಶೋಧನೆ, ತರಬೇತಿ ಮತ್ತು ನೀತಿ ಸಮರ್ಥನೆ ಕ್ಷೇತ್ರಗಳಲ್ಲಿ ಅರ್ಥಶಾಸ್ತ್ರ ಮತ್ತು ಇತರ ಸಂಬಂಧಿತ ಶಿಕ್ಷಣ ವಿಷಯಗಳಲ್ಲಿ ಮತ್ತು ವಿದ್ಯಾರ್ಥಿಗಳು, ವಸ್ತುಗಳು ಮತ್ತು ದತ್ತಾಂಶಗಳನ್ನು ವಿನಿಮಯ ಮಾಡುವಲ್ಲಿ ಏರ್ಪಾಡುಗಳನ್ನು ಮಾಡುವುದು, ಗೋಷ್ಠಿಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಚರ್ಚೆಗಳನ್ನು ಆಯೋಜಿಸುವುದು ಮತ್ತು ಸಂಶೋಧನೆ ಮತ್ತು ಯೋಜನಾ ಸಮಾಲೋಚನೆಯನ್ನು ಕೈಗೊಳ್ಳುವುದು ಇವುಗಳಲ್ಲಿ ಅಂತರರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮತ್ತು ಇತರ ಸ್ಥಳೀಯ ಏಜೆನ್ಸಿಗಳು ಅಥವಾ ಸಂಸ್ಥೆಗಳೊಂದಿಗೆ ಸಹಕರಿಸುವುದು, ಜೊತೆಗೂಡಿ ಕೆಲಸ ಮಾಡುವುದು ಮತ್ತು ಕಾರ್ಯನಿರ್ವಹಿಸುವುದು;

(ಜಿ) ವಿಶ್ವವಿದ್ಯಾನಿಲಯದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸರ್ಕಾರಗಳು, ವಿಶ್ವವಿದ್ಯಾನಿಲಯಗಳು, ಸಂಸ್ಥೆಗಳು, ನೀತಿ ಸಮರ್ಥನೆ ಸಮೂಹಗಳು ಮತ್ತು ಅಂಥ ಇತರ ಭಾರತೀಯ ಮತ್ತು ವಿದೇಶಗಳ ಸಂಘಟನೆಗಳ ಪ್ರತಿನಿಧಿಗಳನ್ನು ಆಹ್ವಾನಿಸುವುದು ಮತ್ತು ಶೈಕ್ಷಣಿಕ, ನೀತಿ ರಚನೆ ಹಾಗೂ ವ್ಯವಹಾರ ಕ್ಷೇತ್ರಗಳಲ್ಲಿ ಶ್ರೇಷ್ಠರಾದ ಹಾಗೂ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಖ್ಯಾತರಾದ ವ್ಯಕ್ತಿಗಳನ್ನು ಆಹ್ವಾನಿಸುವುದು;

(ಎಚ್) ಮೇಲೆ ಉಲ್ಲೇಖಿಸಲಾದ ಅಥವಾ ಒಳಗೊಂಡಿರುವ ವಿಶ್ವವಿದ್ಯಾಲಯದ ಯಾವುದೇ ಅಥವಾ ಎಲ್ಲಾ ಧ್ಯೇಯೋದ್ದೇಶಗಳನ್ನು ಸಾಧಿಸಲು ಅವಶ್ಯವಾದ ಪ್ರಾಸಂಗಿಕ ಮತ್ತು ಅತ್ಯಗತ್ಯ ಅಥವಾ ಸಹಾಯಕವೆಂದು ವಿಶ್ವವಿದ್ಯಾನಿಲಯವು ಪರಿಗಣಿಸಬಹುದಾದ ಅಂಥ ಎಲ್ಲಾ ಕಾನೂನಾತ್ಮಕ ಕ್ರಮಗಳು ಮತ್ತು ಕೆಲಸಗಳನ್ನು ತಾನಾಗಿಯೇ ಅಥವಾ ಜಂಟಿಯಾಗಿ ಇತರ ಸಂಸ್ಥೆಗಳೊಂದಿಗೆ (entities) ಅಥವಾ ಸಂಘಟನೆಗಳೊಂದಿಗೆ ಅಥವಾ ವ್ಯಕ್ತಿಗಳೊಂದಿಗೆ ಸೇರಿ ಮಾಡುವುದು;

(ಐ) ಸಮಾಜ ಮತ್ತು ಆರ್ಥಿಕ ಅಭಿವೃದ್ಧಿಯ ಸಂಬಂಧದಲ್ಲಿ ಸಂಶೋಧನೆಯನ್ನು ಉತ್ತೇಜಿಸುವುದಕ್ಕಾಗಿ ವಿಶ್ವವಿದ್ಯಾನಿಲಯವು ಸಕ್ಷಮವಾಗಿರುವ ಮಿತಿಯೊಳಗೆ ಅಂಥ ಎಲ್ಲಾ ಕ್ರಮಗಳನ್ನು ಸಾಮಾನ್ಯವಾಗಿ ಕೈಗೊಳ್ಳುವುದು ಮತ್ತು ಕಾರ್ಯನಿರ್ವಾಹಕ ಪರಿಷತ್ತು ಅನುಮೋದಿಸಬಹುದಾದ ಅಂಥ ಎಲ್ಲಾ ಶೈಕ್ಷಣಿಕ ಪ್ರಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಅಂಥ ಶೈಕ್ಷಣಿಕ ಚಟುವಟಿಕೆಗಳನ್ನು ಕೈಗೊಳ್ಳುವುದು; ಮತ್ತು

(ಜೆ) ಅರ್ಥಶಾಸ್ತ್ರ, ಶಿಕ್ಷಣ ಮತ್ತು ಸಂಬಂಧಪಟ್ಟ ವಿಷಯಗಳ ಕ್ಷೇತ್ರಗಳಲ್ಲಿ, ಕಾರ್ಯನಿರ್ವಾಹಕ ಪರಿಷತ್ತು, ಕಾಲಕಾಲಕ್ಕೆ ಇಚ್ಛಿಸುವ ಇತರ ಕಾರ್ಯಗಳು ಮತ್ತು ಕಾಲಕಾಲಕ್ಕೆ, ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಇತರ ಸರ್ಕಾರಿ ಏಜೆನ್ಸಿಗಳು, ಕಾರ್ಪೊರೇಟ್ ನಿಕಾಯಗಳು ಸರ್ಕಾರಿ ಅಥವಾ ಖಾಸಗಿ ವಹಿಸಿಕೊಡುವ ಕಾರ್ಯಗಳನ್ನು ಕೈಗೊಳ್ಳುವುದು.

**5. ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳು.**- ಈ ಮುಂದಿನವು ವಿಶ್ವವಿದ್ಯಾಲಯದ ಅಧಿಕಾರಗಳು ಮತ್ತು ಕರ್ತವ್ಯಗಳಾಗಿರತಕ್ಕದ್ದು, ಎಂದರೆ:-

(i) ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳನ್ನು ಉತ್ತೇಜಿಸುವುದಕ್ಕಾಗಿ ವಿಶ್ವವಿದ್ಯಾನಿಲಯದ ಮತ್ತು ಸಂಶೋಧನೆ, ಶಿಕ್ಷಣ ಹಾಗೂ ಬೋಧನೆಗಾಗಿನ ಅಂಥ ಕೇಂದ್ರಗಳ ಆಡಳಿತ ನಡೆಸುವುದು ಮತ್ತು ಮೇಲ್ವಿಚಾರಣೆ ಮಾಡುವುದು;

(ii) ಅರ್ಥಶಾಸ್ತ್ರ ಮತ್ತು ಇತರ ಸಮಾಜ ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದಂತೆ ಅರಿವು ಅಥವಾ ಕಲಿಕೆಯ ಅಂಥ ವಿಭಾಗಗಳಲ್ಲಿ, ವಿಶ್ವವಿದ್ಯಾನಿಲಯವು ಸೂಕ್ತವೆಂದು ಭಾವಿಸಬಹುದಾದಂತೆ ಬೋಧನೆಗೆ ಅವಕಾಶವನ್ನು ಕಲ್ಪಿಸುವುದು ಮತ್ತು ಈ ವಿಷಯಗಳಲ್ಲಿ ಸಂಶೋಧನೆಗಾಗಿ ಜ್ಞಾನದ ಪ್ರಗತಿ ಮತ್ತು ಪ್ರಸಾರಕ್ಕಾಗಿ ಅವಕಾಶವನ್ನು ಕಲ್ಪಿಸುವುದು;

(iii) ವಿಶೇಷಾಧಿಕ (extra-mural) ಕಲಿಕೆ ಮತ್ತು ವಿಸ್ತರಣಾ ಸೇವೆಗಳನ್ನು ಏರ್ಪಡಿಸುವುದು ಮತ್ತು ಕೈಗೊಳ್ಳುವುದು;

(iv) ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂತೆ ಅಂಥ ಷರತ್ತುಗಳಿಗೆ ಒಳಪಟ್ಟು ಪರೀಕ್ಷೆಗಳನ್ನು ನಡೆಸುವುದು ಮತ್ತು ಡಿಪ್ಲೊಮಾಗಳು ಅಥವಾ ಪ್ರಮಾಣಪತ್ರಗಳನ್ನು ನೀಡುವುದು, ವ್ಯಕ್ತಿಗಳಿಗೆ ಪದವಿಗಳು ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು ಮತ್ತು ಉತ್ತಮ ಹಾಗೂ ಯುಕ್ತ ಕಾರಣಕ್ಕಾಗಿ ಯಾವುದೇ ಅಂಥ ಡಿಪ್ಲೋಮಾಗಳು, ಪ್ರಮಾಣ ಪತ್ರಗಳು, ಪದವಿಗಳು ಅತವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಹಿಂತೆಗೆದುಕೊಳ್ಳುವುದು;

(v) ವಿನಿಯಮಗಳಲ್ಲಿ ಹೇಳಲಾದ ರೀತಿಯಲ್ಲಿ ವ್ಯಕ್ತಿಗಳಿಗೆ ಗೌರವ ಪದವಿಗಳು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(vi) ಶುಲ್ಕಗಳು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ಕೇಳಿಪಡೆದುಕೊಳ್ಳುವುದು ಮತ್ತು ಸ್ವೀಕರಿಸುವುದು;

(vii) ವಿಶ್ವವಿದ್ಯಾನಿಲಯವು, ತನ್ನ ಧ್ಯೇಯೋದ್ದೇಶಗಳ ಪ್ರಗತಿಗಾಗಿ ಅವಶ್ಯವೆಂದು ಅಭಿಪ್ರಾಯಪಡುವ ಅಂಥ ವಿಶೇಷ ಕೇಂದ್ರಗಳು, ವಿಶೇಷವಾದ ವ್ಯಾಸಂಗ ಕೇಂದ್ರಗಳು ಅಥವಾ ಸಂಶೋಧನೆ ಮತ್ತು ಬೋಧನೆಗಾಗಿ ಇತರ ಘಟಕಗಳನ್ನು ಸ್ಥಾಪಿಸುವುದು;

(viii) ನಿವಾಸಗಳ ಸಭಾಂಗಣಗಳು ಮತ್ತು ವಸತಿನಿಲಯಗಳನ್ನು ಪ್ರಾರಂಭಿಸುವುದು ಮತ್ತು ನಿರ್ವಹಿಸುವುದು ಹಾಗೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗಾಗಿ ನಿವಾಸದ ಸ್ಥಳಗಳನ್ನು ಮಾನ್ಯ ಮಾಡುವುದು ಮತ್ತು ಅಂಥ ಯಾವುದೇ ನಿವಾಸದ ಸ್ಥಳಕ್ಕೆ ನೀಡಲದ ಅಂಥ ಮಾನ್ಯತೆಯನ್ನು ಹಿಂಪಡೆಯುವುದು;

(ix) ನಿವಾಸದ ಸಭಾಂಗಣಗಳನ್ನು ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಮತ್ತು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಶಿಸ್ತನ್ನು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ವೃದ್ಧಿಗಾಗಿ ಏರ್ಪಾಡುಗಳನ್ನು ಮಾಡುವುದು;

(x) ಮಹಿಳಾ ವಿದ್ಯಾರ್ಥಿಗಳಿಗೆ ನಿವಾಸ, ಶಿಸ್ತು ಮತ್ತು ಬೋಧನೆಯ ಸಂಬಂಧದಲ್ಲಿ ಅಂಥ ಏರ್ಪಾಡುಗಳನ್ನು ಮಾಡುವುದು;

(xi) ಶೈಕ್ಷಣಿಕ, ತಾಂತ್ರಿಕ, ಆಡಳಿತಾತ್ಮಕ, ಲಿಪಿಕ ಮತ್ತು ಇತರ ಹುದ್ದೆಗಳನ್ನು ಸೃಷ್ಟಿಸುವುದು ಮತ್ತು ಅವುಗಳಿಗೆ ನೇಮಕಗಳನ್ನು ಮಾಡುವುದು;

(xii) ವಿಶ್ವವಿದ್ಯಾನಿಲಯದ ಸಿಬ್ಬಂದಿಯಲ್ಲಿ ಶಿಸ್ತನ್ನು ನಿಯಂತ್ರಿಸಿ ಜಾರಿಗೊಳಿಸುವುದು ಹಾಗೂ ಅವಶ್ಯವೆಂದು ಭಾವಿಸಬಹುದಾದ ಅಂಥ ಶಿಸ್ತು ಕ್ರಮಗಳನ್ನು ತೆಗೆದುಕೊಳ್ಳುವುದು;

(xiii) ವಿಶ್ವವಿದ್ಯಾನಿಲಯವು ಅಗತ್ಯಪಡಿಸುವ ಪ್ರೊಫೆಸರ್‌ಷಿಪ್‌ಗಳು, ಅಸೋಸಿಯೇಟ್ ಪ್ರೊಫೆಸರ್ ಶಿಪ್‌ಗಳು, ಅಸಿಸ್ಟೆಂಟ್ ಪ್ರೊಫೆಸರ್‌ಷಿಪ್‌ಗಳು ಮತ್ತು ಯಾವುದೇ ಇತರ ಬೋಧಕ, ಶೈಕ್ಷಣಿಕ ಅಥವಾ ಸಂಶೋಧನಾ ಹುದ್ದೆಗಳನ್ನು ಪ್ರಾರಂಭಿಸುವುದು;

(xiv) ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರುಗಳನ್ನಾಗಿ ಅಥವಾ ಅನ್ಯಥಾ ಶಿಕ್ಷಕರು ಮತ್ತು ಸಂಶೋಧಕರನ್ನಾಗಿ ವ್ಯಕ್ತಿಗಳನ್ನು ನೇಮಿಸುವುದು;

(xv) ಪ್ರಶಂಸನೀಯ (meritorious) ವಿದ್ಯಾರ್ಥಿಗಳಿಗಾಗಿ ಫೆಲೋಷಿಪ್‌ಗಳು, ವಿದ್ಯಾರ್ಥಿವೇತನಗಳು, ಬಹುಮಾನಗಳು ಮತ್ತು ಪದಕಗಳನ್ನು ಪ್ರಾರಂಭಿಸುವುದು ಮತ್ತು ನೀಡುವುದು. ಸಂಶೋಧನೆ ಹಾಗೂ ಇತರ ಕೃತಿಗಳ ಮುದ್ರಣ, ನಕಲು ಮಾಡುವುದು ಮತ್ತು ಪ್ರಕಣೆಗೆ ಅವಕಾಶ ಕಲ್ಪಿಸುವುದು ಹಾಗೂ ಪ್ರದರ್ಶನಗಳನ್ನು ಆಯೋಜಿಸುವುದು;

(xvi) ಅರ್ಥಶಾಸ್ತ್ರ ಮತ್ತು ಸಮಾಜ ವಿಜ್ಞಾನದ ಎಲ್ಲಾ ಅಂಶಗಳಲ್ಲಿಯೂ ಸಂಶೋಧನೆಯನ್ನು ಪ್ರಾಯೋಜಿಸುವುದು ಮತ್ತು ಕೈಗೊಳ್ಳುವುದು;

(xvii) ರಾಜ್ಯದ ಇತರ ಭಾಗಗಳಲ್ಲಿ ಅರ್ಥಶಾಸ್ತ್ರ ಮತ್ತು ಇತರ ವಿಷಯಗಳಲ್ಲಿ ಸಂಶೋಧನೆ ಮತ್ತು ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸುವುದು;

(xviii) ವಿಶ್ವವಿದ್ಯಾನಿಲಯವು ಕಾಲಕಾಲಕ್ಕೆ ನಿರ್ಧರಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಒಪ್ಪಂದವಾದ ಅಂಥ ಉದ್ದೇಶಗಳಿಗಾಗಿ ಅರ್ಥಶಾಸ್ತ್ರ, ಸಮಾಜ ವಿಜ್ಞಾನಗಳು ಮತ್ತು ಇತರ ಸಂಬಂಧಿಕ

ವಿಷಯಗಳಲ್ಲಿ ಶಿಕ್ಷಣ, ಬೋಧನೆ ಮತ್ತು ಸಂಶೋಧನೆಯ ವಿಷಯದಲ್ಲಿ ಯಾವುದೇ ಇತರ ಸಂಘಟನೆಯೊಡನೆ ಸಹಕರಿಸುವುದು;

(xix) ವಿಶ್ವವಿದ್ಯಾನಿಲಯದ ಧ್ಯೇಯೋದ್ದೇಶಗಳಿಗೆ ಪೂರ್ಣವಾಗಿ ಅಥವಾ ಭಾಗಶಃ ಸದೃಶವಾಗಿರುವ ವಿಶ್ವದ ಯಾವುದೇ ಭಾಗದಲ್ಲಿನ ಉನ್ನತ ಕಲಿಕೆ ಸಂಸ್ಥೆಗಳೊಡನೆ, ಶಿಕ್ಷಕರು ಮತ್ತು ವಿದ್ವಾಂಸರನ್ನು ವಿನಿಮಯಗೊಳಿಸುವ ಮೂಲಕ, ಸಾಮಾನ್ಯವಾಗಿ ಸಮಾನ ಧ್ಯೇಯೋದ್ದೇಶಿಗೆ ಅನುಕೂಲವಾಗಬಹುದಾದ ಅಂಥ ವಿಧಾನದಲ್ಲಿ ಸಹಕರಿಸುವುದು;

(xx) ವಿಶ್ವವಿದ್ಯಾನಿಲಯದ ವೆಚ್ಚಗಳನ್ನು ನಿಯಂತ್ರಿಸುವುದು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸುವುದು;

(xxi) ವಿಶ್ವವಿದ್ಯಾನಿಲಯವು ಅವಶ್ಯವೆಂದು ಪರಿಗಣಿಸಬಹುದಾದ ಅಂಥ ತರಗತಿ ಕೊಠಡಿಗಳು ಮತ್ತು ವ್ಯಾಸಂಗ ಸಭಾಂಗಣಗಳನ್ನು ವಿಶ್ವವಿದ್ಯಾನಿಲಯದ ಆವರಣದೊಳಗೆ ಅಥವಾ ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಎಲ್ಲಿಯಾದರೂ ಸ್ಥಾಪಿಸಿ ನಿರ್ವಹಿಸುವುದು ಹಾಗೂ ಅದಕ್ಕೆ ಸಮರ್ಪಕವಾಗಿ ಪೀಠೋಪಕರಣಗಳನ್ನು ಸಜ್ಜುಗೊಳಿಸುವುದು ಮತ್ತು ವಿಶ್ವವಿದ್ಯಾನಿಲಯಕ್ಕೆ ಅನುಕೂಲಕರ ಅಥವಾ ಅವಶ್ಯವೆಂದು ಕಂಡುಬರುವ ಅಂಥ ಗ್ರಂಥಾಲಯಗಳು ಮತ್ತು ವಾಚನಾಲಯಗಳನ್ನು ಸ್ಥಾಪಿಸಿ ನಿರ್ವಹಿಸುವುದು;

(xxii) ವಿಶ್ವವಿದ್ಯಾನಿಲಯವು ಸ್ಥಾಪನೆಯಾದ ಉದ್ದೇಶಗಳಿಗೆ ಸಂಗತವಾಗುವ ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಅನುದಾನಗಳು, ದತ್ತಿಗಳು, ದೇಣಿಗಳು, ಕೊಡಗೆಗಳು ಮತ್ತು ಕಾಣಿಕೆಗಳನ್ನು ಸ್ವೀಕರಿಸುವುದು;

(xxiii) ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದ ಅಥವಾ ಅನುಕೂಲವಾಗಬಹುದಾದ ಯಾವುದೇ ಭೂಮಿ ಅಥವಾ ಕಟ್ಟಡ ಅಥವಾ ಕಾಮಗಾರಿಗಳನ್ನು ತಾನು ಸೂಕ್ತ ಮತ್ತು ಕ್ರಮಬದ್ಧವೆಂದು ಭಾವಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಖರೀದಿಸುವುದು, ಗುತ್ತಿಗೆಯ ಮೇಲೆ ತೆಗೆದುಕೊಳ್ಳುವುದು ಅಥವಾ ದಾನವಾಗಿ ಅಥವ ಅನ್ಯಥಾ ಸ್ವೀಕರಿಸುವುದು ಮತ್ತು ಅಂಥ ಕಟ್ಟಡಗಳು ಅಥವಾ ಕಾಮಗಾರಿಗಳನ್ನು ನಿರ್ಮಿಸುವುದು ಅಥವಾ ಬದಲಾಯಿಸುವುದು ಮತ್ತು ನಿರ್ವಹಿಸುವುದು;

(xxiv) ವಿಶ್ವವಿದ್ಯಾನಿಲಯದ ಹಿತಾಸಕ್ತಿಗಳು ಮತ್ತು ಚಟುವಟಿಕೆಗಳಿಗೆ ಬಾಧಕವಾಗದಂತೆ ತಾನು ಸೂಕ್ತ ಮತ್ತು ಕ್ರಮಬದ್ಧವೆಂದು ಭಾವಿಸಬಹುದಾದಂತೆ ಅಂಥ ನಿಬಂಧನೆಗಳ ಮೇಲೆ, ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ವಿಶ್ವವಿದ್ಯಾನಿಲಯದ ಚರ ಸ್ವತ್ತುಗಳ ಎಲ್ಲಾ ಅಥವಾ ಯಾವುದೇ ಭಾಗವನ್ನು ಮಾರಾಟ ಮಾಡುವುದು, ವಿನಿಯಮ ಮಾಡುವುದು, ಗುತ್ತಿಗೆ ನೀಡುವುದು ಅಥವಾ ಅನ್ಯಥಾ ವಿಲೇವಾರಿ ಮಾಡುವುದು;

(xxv) ಭಾರತ ಸರ್ಕಾರದ ಮತ್ತು ಇತರ ಪ್ರಾಮಿಸರಿ ನೋಟುಗಳು, ಬಿಲ್ಸ್ ಆಫ್ ಎಕ್ಸ್‌ಚೇಂಜ್, ಚೆಕ್‌ಗಳು ಅಥವಾ ಇತರ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್‌ಗಳನ್ನು ಡ್ರಾ ಮಾಡುವುದು ಮತ್ತು ಸ್ವೀಕರಿಸುವುದು, ತಯಾರು ಮಾಡುವುದು ಮತ್ತು ಎಂಡಾರ್ಸ್ ಮಾಡುವುದು, ಡಿಸ್ಕೌಂಟ್ ಮಾಡುವುದು ಮತ್ತು ನೆಗೋಷಿಯೇಟ್ ಮಾಡುವುದು;

(xxvi) ವಿಶ್ವವಿದ್ಯಾನಿಲಯಕ್ಕೆ ಸೇರಿದ ಅಥವಾ ವಿಶ್ವವಿದ್ಯಾನಿಲಯದ ಉದ್ದೇಶಗಳಿಗಾಗಿ ಆರ್ಜಿಸಬೇಕಾದ ಸರ್ಕಾರದ ಭದ್ರತೆಗಳನ್ನೂ ಒಳಗೊಂಡಂತೆ ಸ್ಥಿರ ಅಥವಾ ಚರ ಸ್ವತ್ತಿನ ಸಂಬಂಧದಲ್ಲಿನ ಹಸ್ತಾಂತರಗಳು, ವರ್ಗಾವಣೆಗಳು, ಮರು-ಹಸ್ತಾಂತರಣಗಳು, ಅಡಮಾನಗಳು, ಗುತ್ತಿಗೆಗಳು, ಪರವಾನಗಿಗಳು ಮತ್ತು ಒಪ್ಪಂದಗಳನ್ನು ಕಾರ್ಯಗತಗೊಳಿಸುವುದು;

(xxvii) ವಿಶ್ವವಿದ್ಯಾನಿಲಯದ ಯಾವುದೇ ಲಿಖಿತ ಅಥವಾ ವ್ಯವಹಾರವನ್ನು ವ್ಯವಹರಿಸುವುದಕ್ಕಾಗಿ ತಾನು ಸೂಕ್ತವೆಂದು ಭಾವಿಸುವ ಯಾವೊಬ್ಬ ವ್ಯಕ್ತಿ ಅಥವಾ ಏಜೆನ್ಸಿಯನ್ನು ನೇಮಿಸುವುದು;

(xxviii) ಅನುದಾನಗಳನ್ನು ಪಡೆಯುವುದಕ್ಕಾಗಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಯುಜಿಸಿ ಅಥವಾ ಇತರ ನಿಕಾಯಗೊಂದಿಗೆ ಯಾವುದೇ ಒಪ್ಪಂದವನ್ನು ಮಾಡಿಕೊಳ್ಳುವುದು;

(xxix) ತಾನು ಯುಕ್ತವೆಂದು ಭಾವಿಸಬಹುದಾದ ಅಂಥ ನಿಬಂಧನೆಗಳ ಮೇಲೆ ಹಣದ ಅನುದಾನಗಳು, ಯಾವುದೇ ರೂಪದ ಭದ್ರತೆಗಳು ಅಥವಾ ಸ್ವತ್ತನ್ನು ಸ್ವೀಕರಿಸುವುದು;

(xxx) ವಿಶ್ವವಿದ್ಯಾನಿಲಯದ ಎಲ್ಲಾ ಅಥವಾ ಯಾವುದೇ ಸ್ವತ್ತುಗಳು ಅಥವಾ ಆಸ್ತಿಗಳ ಮೇಲೆ ಹಣ ಹೂಡಲಾದ ಅಥವಾ ಆಧರಿಸಿದ ಬಾಂಡುಗಳ ಅಡಮಾನಗಳ, ಪ್ರಾಮಿಸರಿ ನೋಟುಗಳ ಅಥವಾ ಇತರ ಹೊಣೆಗಾರಿಕೆಗಳ ಅಥವಾ ಭದ್ರತೆಗಳ ಮೇಲೆ ಅಥವಾ ಯಾವುದೇ ಭದ್ರತೆಗಳಿಲ್ಲದೇ ಮತ್ತು ತಾನು ಸೂಕ್ತವೆಂದು ಭಾವಿಸುವ ಅಂಥ ನಿಬಂಧನೆಗಳು ಹಾಗೂ ಷರತ್ತುಗಳ ಮೇಲೆ ಹಣವನ್ನು ಎತ್ತುವುದು ಮತ್ತು ಸಾಲ ಪಡೆಯುವುದು ಮತ್ತು ನಿಧಿಯನ್ನು ಎತ್ತುವುದಕ್ಕೆ ಪ್ರಾಸಂಗಿಕವಾದ ಎಲ್ಲಾ ವೆಚ್ಚಗಳಿಗೆ, ವಿಶ್ವವಿದ್ಯಾನಿಲಯದ ನಿಧಿಯಿಂದ

ಪಾವತಿಸುವುದು ಮತ್ತು ಯಾವುದೇ ಸಾಲ ಪಡೆದ ಹಣವನ್ನು ಮರುಪಾವತಿ ಮಾಡುವುದು ಮತ್ತು ಪುನ: ಪಡೆದುಕೊಳ್ಳುವುದು;

(xxxi) ಅಂಥ ಭದ್ರತೆಗಳಲ್ಲಿ ಅಥವಾ ಅವುಗಳ ಮೇಲೆ ಮತ್ತು ಕಾಲಕಾಲಕ್ಕೆ ಪರಿನಿಯಮಗಳಲ್ಲಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ವಿಶ್ವವಿದ್ಯಾನಿಲಯದ ನಿಧಿಗಳನ್ನು ಹೂಡುವುದು ಅಥವಾ ವಿಶ್ವವಿದ್ಯಾನಿಲಯಕ್ಕೆ ಹಣವನ್ನು ವಹಿಸಿಕೊಡುವುದು ಮತ್ತು ಯಾವುದೇ ಅಂಥ ಹೂಡಿಕೆಯನ್ನು ಸ್ಥಳಾಂತರಿಸುವುದು;

(xxxii) ವಿಶ್ವವಿದ್ಯಾನಿಲಯದ ವ್ಯವಹಾರಗಳು ಮತ್ತು ವ್ಯವಸ್ಥಾಪನೆಗಳನ್ನು ನಿಯಂತ್ರಿಸುವುದಕ್ಕಾಗಿ ಮತ್ತು ಅವುಗಳನ್ನು ಬದಲಾವಣೆ ಮಾಡುವುದಕ್ಕಾಗಿ ಪರಿವರ್ತಿಸುವುದಕ್ಕಾಗಿ ಹಾಗೂ ತೆಗೆದುಹಾಕುವುದಕ್ಕಾಗಿ ಅವಶ್ಯಕವೆಂದು ಪರಿಗಣಿಸುವ, ಅಂಥ ಪರಿನಿಯಮಗಳನ್ನು, ಕಾಲಕಾಲಕ್ಕೆ ರಚಿಸುವುದು;

(xxxiii) ಪರಿನಿಯಮಗಳಲ್ಲಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ಶೈಕ್ಷಣಿಕ, ತಾಂತ್ರಿಕ, ಆಡಳಿತಾತ್ಮಕ ಮತ್ತು ಇತರ ಸಿಬ್ಬಂದಿಯ ಪ್ರಯೋಜನಕ್ಕಾಗಿ ತಾನು ಸೂಕ್ತವೆಂದು ಭಾವಿಸುವ ಅಂಥ ವಿಶ್ರಾಂತಿ ವೇತನ, ವಿಮಾ, ಭವಿಷ್ಯನಿಧಿ ಮತ್ತು ಗ್ರ್ಯಾಚುಟಿಯಂಥವುಗಳನ್ನು ಸ್ಥಾಪಿಸುವುದು ಮತ್ತು ವಿಶ್ವವಿದ್ಯಾನಿಲಯದ ಸಿಬ್ಬಂದಿಯ ಪ್ರಯೋಜನಕ್ಕಾಗಿ ತಾನು ಸೂಕ್ತವೆಂದು ಭಾವಿಸುವ ಅಂಥ ಅನುದಾನಗಳನ್ನು ಮಾಡುವುದು ಮತ್ತು ಸಂಸ್ಥೆಗಳಲ್ಲಿ ನೆರವು ನೀಡುವುದು ಮತ್ತು ಸಂಘಗಳು, ಸಂಸ್ಥೆಗಳು, ನಿಧಿಗಳು, ನ್ಯಾಸಗಳಿಗೆ ನೆರವಾಗಲು ಮತ್ತು ವಿಶ್ವವಿದ್ಯಾನಿಲಯದ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವಂತೆ ಸಾಗಣೆಯನ್ನು (conveyance) ಲೆಕ್ಕ ಹಾಕುವುದು;

(xxxiv) ಕುಲಪತಿ ಅಥವಾ ಯಾವುದೇ ಸಮಿತಿ ಅಥವಾ ಯಾವುದೇ ಉಪ-ಸಮಿತಿ ಅಥವಾ ತನ್ನ ಪ್ರಾಧಿಕಾರಗಳ ಯಾವೊಬ್ಬ ಅಥವಾ ಹೆಚ್ಚಿನ ಸದಸ್ಯರಿಗೆ ಅಥವಾ ತನ್ನ ಅಧಿಕಾರಿಗಳಿಗೆ ಪರಿನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊರತುಪಡಿಸಿ, ತನ್ನ ಎಲ್ಲಾ ಅಥವಾ ಯಾವುದೇ ಅಧಿಕಾರಗಳನ್ನು ಪ್ರತ್ಯಾಯೋಜಿಸುವುದು;

(xxxv) ಮೇಲೆ ಹೇಳಿದ ಧ್ಯೇಯೋದ್ದೇಶಗಳು ಅಥವಾ ಅವುಗಳಲ್ಲಿ ಯಾವುದಾದರೂ ಒಂದನ್ನು ಸಾಧಿಸಲು ಅಥವಾ ವಿಸ್ತರಿಸಲು ಅವಶ್ಯವಾದುದು, ನೆರವಾದುದು ಅಥವಾ ಪ್ರಾಸಂಗಿಕವಾದುದು ಎಂದು ವಿಶ್ವವಿದ್ಯಾನಿಲಯವು ಪರಿಗಣಿಸುವ ಅಂಥ ಎಲ್ಲಾ ಇತರ ಕ್ರಮಗಳು ಮತ್ತು ಕಾರ್ಯಗಳನ್ನು ಮಾಡುವುದು.

**6. ವಿಶ್ವವಿದ್ಯಾಲಯಕ್ಕೆ ಪ್ರವೇಶ.–** (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯವು ಎಲ್ಲ ವ್ಯಕ್ತಿಗಳ ಪ್ರವೇಶಕ್ಕೆ ಮುಕ್ತವಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿರುವುದಾವುದೂ,–

(ಎ) ನಿಯಮಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಅಥವಾ ಗುಣಮಟ್ಟವನ್ನು ಹೊಂದಿರದ ಯಾವೊಬ್ಬ ವ್ಯಕ್ತಿಗೆ ಯಾವುದೇ ಅಧ್ಯಯನ ಕ್ರಮಕ್ಕೆ ಪ್ರವೇಶ ನೀಡಲು;

(ಬಿ) ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಯನ್ನು ನೀಡಲು ಅಗತ್ಯವಿರುವ ಕನಿಷ್ಠ ಮಟ್ಟಕ್ಕಿಂತ ಕಡಿಮೆಯ ಶೈಕ್ಷಣಿಕ ಪ್ರಗತಿಯನ್ನು ತೋರಿಸುವ ಯಾವೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಹಾಜರಿಪಟ್ಟಿಯಲ್ಲಿ ಉಳಿಸಿಕೊಳ್ಳಲು; ಅಥವಾ

(ಸಿ) ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಅಥವಾ ಇತರ ವಿದ್ಯಾರ್ಥಿಗಳ ಮತ್ತು ಅಧ್ಯಾಪಕ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಪ್ರತಿಕೂಲವಾದ ನಡತೆಯುಳ್ಳ ಯಾವೊಬ್ಬ ವ್ಯಕ್ತಿಗೆ ಪ್ರವೇಶ ನೀಡಲು ಅಥವಾ ಯಾವೊಬ್ಬ ವಿದ್ಯಾರ್ಥಿಯನ್ನು ಉಳಿಸಿಕೊಳ್ಳಲು,

– ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ.

(3) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಸರ್ಕಾರವು ಆದೇಶದ ಮೂಲಕ, ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗಾಗಿ ಅದರಲ್ಲಿನ ಅಂಥ ಶೇಕಡಾವಾರು ಸೀಟುಗಳನ್ನು ಮೀಸಲಿಡತಕ್ಕದ್ದು ಎಂದು ವಿಶ್ವವಿದ್ಯಾನಿಲಯಕ್ಕೆ ನಿರ್ದೇಶಿಸತಕ್ಕದ್ದು ಮತ್ತು ಅಂಥ ನಿರ್ದೇಶನವನ್ನು ನೀಡಿರುವಲ್ಲಿ ವಿಶ್ವವಿದ್ಯಾನಿಲಯವು ಅದಕ್ಕನುಸಾರವಾಗಿ ಮೀಸಲಾತಿಯನ್ನು ಮಾಡತಕ್ಕದ್ದು.

**7. ನಿರ್ದೇಶನಗಳನ್ನು ನೀಡಲು ಅಧಿಕಾರ.–** ಕುಲಾಧಿಪತಿಯು, ತಾನಾಗಿಯೇ ಆಗಲೀ ಅಥವಾ ಸರ್ಕಾರದ ಶಿಫಾರಸಿನ ಮೇಲಾಗಲೀ ವಿಶ್ವವಿದ್ಯಾಲಯದ ಆಡಳಿತ ಮತ್ತು ಶೈಕ್ಷಣಿಕ ಕಾರ್ಯನಿರ್ವಹಣೆಯ ಮತ್ತು ವಿಶೇಷವಾಗಿ ಶಾಂತಿ ಮತ್ತು ನೆಮ್ಮದಿಯನ್ನು ಕಾಯ್ದುಕೊಂಡುಬರುವ ದೃಷ್ಟಿಯಿಂದ ಹಾಗೂ ಸ್ವತ್ತು ಮತ್ತು ಹಣಕಾಸು ವ್ಯವಸ್ಥೆಯನ್ನು ಸಂರಕ್ಷಿಸುವುದಕ್ಕಾಗಿ ಅವಶ್ಯಕ ಅಥವಾ ಯುಕ್ತವಾಗಬಹುದಾದ ಅಂಥ ನಿರ್ದೇಶನಗಳನ್ನು ನೀಡಬಹುದು.

**8. ವಿಶ್ವವಿದ್ಯಾಲಯದ ಆದೇಶಗಳನ್ನು ರದ್ದುಗೊಳಿಸಲು ಅಧಿಕಾರ.–** ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹರಣೆಗಳು, ಈ ಅಧಿನಿಯಮ ಅಥವಾ ಪರಿನಿಯಮಗಳು, ವಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಉಪಬಂಧಗಳಿಗೆ ಸುಸಂಗತವಾಗಿಲ್ಲವೆಂದು ಅಥವಾ ಅನ್ಯಥಾ ಸರ್ಕಾರದ ಕಾರ್ಯನೀತಿಗೆ ಅಸಂಗತವಾಗಿದೆಯೆಂದು ಅಭಿಪ್ರಾಯಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು.

## ಅಧ್ಯಾಯ –III

## ವಿಶ್ವವಿದ್ಯಾಲಯದ ಅಧಿಕಾರಿಗಳು

**9. ವಿಶ್ವವಿದ್ಯಾಲಯದ ಅಧಿಕಾರಿಗಳು.–** ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಕುಲಾಧಿಪತಿಯವರು;

(2) ಸಹ–ಕುಲಾಧಿಪತಿಯವರು;

(3) ಕುಲಪತಿಯವರು;

(4) ಕುಲಸಚಿವರು;

(5) ಪರೀಕ್ಷೆಗಳ ನಿಯಂತ್ರಕರು ;

(6) ಹಣಕಾಸು ಅಧಿಕಾರಿ;

(7) ಡೀನ್ (ಡೀನರು);

ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಪರಿನಿಯಮಗಳಿಂದ ಘೋಷಿತರಾಗಬಹುದಾದ ಅಂಥ ಇತರ ಅಧಿಕಾರಿಗಳು.

**10. ಕುಲಾಧಿಪತಿಯವರು.–** (1) ಕರ್ನಾಟಕದ ರಾಜ್ಯಪಾಲರು ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು. ಅವರು ತಮ್ಮ ಪದದ ಆಧಾರದಿಂದ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಾಗಿದ್ದಾಗ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷರಾಗಿರತಕ್ಕದ್ದು ಮತ್ತು ಪದವಿಗಳು, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು.

(2) ಪ್ರಾಧಿಕಾರಗಳಿಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲು ಕುಲಾಧಿಪತಿಯವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಿರುವಲ್ಲಿ, ಕುಲಾಧಿಪತಿಯವರು ಅವಶ್ಯಕವಿರುವಷ್ಟರಮಟ್ಟಿಗೆ ಸಾಕಷ್ಟು ಪ್ರಾತಿನಿಧ್ಯ ಪಡೆಯದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕದ್ದು.

(3) ಕುಲಾಧಿಪತಿಯವರು ಸ್ವತಃ ತಾವಾಗಿಯೇ ಆಗಲೀ ಅಥವಾ ಅರ್ಜಿಯ ಮೇಲಾಗಲೀ ಯಾವುದೇ ವ್ಯವಹರಣೆಗಳ ಸಂಬಂಧದಲ್ಲಿ ಅಂಥ ವ್ಯವಹರಣೆಗಳ ಸಕ್ರಮತೆ ಅಥವಾ ಯಥಾರ್ಥತೆ, ಕೈಗೊಳ್ಳಲಾದ ಯಾವುದೇ ತೀರ್ಮಾನ ಅಥವಾ ಅದರಲ್ಲಿ ಜಾರಿ ಮಾಡಲಾದ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾವೇ ಮನದಟ್ಟು ಮಾಡಿಕೊಳ್ಳಲು ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರದ ದಾಖಲೆಗಳನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಸಂದರ್ಭದಲ್ಲಿ ಯಾವುದೇ ಅಂಥ ತೀರ್ಮಾನ ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕು, ರದ್ದುಗೊಳಿಸಬೇಕು, ಪರಿಷ್ಕರಣಗೊಳಿಸಬೇಕು ಅಥವಾ ಪುನರ್ ಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸಬೇಕೆಂದು ಕುಲಾಧಿಪತಿಯವರಿಗೆ ತೋರಿದರೆ ಅವರು ತದನುಸಾರವಾಗಿ ಆದೇಶಗಳನ್ನು ಜಾರಿ ಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಪ್ರತಿಯೊಂದು ಅರ್ಜಿಯನ್ನು, ಅರ್ಜಿಯ ಸಂಬಂಧದಲ್ಲಿನ ವ್ಯವಹರಣೆ, ತೀರ್ಮಾನ ಅಥವಾ ಆದೇಶವನ್ನು ಅರ್ಜಿದಾರರಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು:

ಮತ್ತು ಪರಂತು, ಯಾವೊಬ್ಬ ವ್ಯಕ್ತಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಅಂಥ ವ್ಯಕ್ತಿಗೆ ತನ್ನ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದ ಹೊರತು, ಜಾರಿ ಮಾಡತಕ್ಕದ್ದಲ್ಲ.

**11. ಪರಿಶೀಲನೆ.– (1)** ಕುಲಾಧಿಪತಿಯವರು ತಾವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾಲಯದ, ಅದರ ಕಟ್ಟಡಗಳ, ವಿಶ್ವವಿದ್ಯಾಲಯದ ಗ್ರಂಥಾಲಯಗಳ, ವಸ್ತುಸಂಗ್ರಹಾಲಯಗಳ ಮತ್ತು ಉಪಕರಣಗಳ ಹಾಗೂ ವಿಶ್ವವಿದ್ಯಾಲಯದಿಂದ ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ಯಾವುವೇ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯದಿಂದ ನಡೆಸಲಾದ ಅಥವಾ ಮಾಡಲಾದ ಸಂಶೋಧನೆ, ಬೋಧನೆ ಮತ್ತು ಇತರೆ ಕೆಲಸದ ಪರಿಶೀಲನೆ ನಡೆಸುವಂತೆ ಮಾಡಲು ಅಥವಾ ವಿಚಾರಣೆ ಮಾಡುವಂತೆ ಮಾಡಲು ಹಕ್ಕನ್ನು ಹೊಂದಿರತಕ್ಕದ್ದು ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು. ಕುಲಾಧಿಪತಿಯವರು, ಪ್ರತಿಯೊಂದು ಸಂದರ್ಭದಲ್ಲೂ ಅಂಥ ಪರಿಶೀಲನೆ ಅಥವಾ ವಿಚಾರಣೆ ನಡೆಸುವ ತಮ್ಮ ಆಶಯದ

ಬಗ್ಗೆ ವಿಶ್ವವಿದ್ಯಾಲಯಕ್ಕೆ ನೋಟೀಸನ್ನು ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಲ್ಲಿ ಪ್ರಾತಿನಿಧ್ಯ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಕುಲಾಧಿಪತಿಯವರು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ತಿಳಿಸತಕ್ಕದ್ದು ಮತ್ತು ಅದರ ಮೇಲಣ ಕಾರ್ಯನಿರ್ವಾಹಕ ಪರಿಷತ್ತಿನ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆಯನ್ನು ನೀಡಿ ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ಕಾಲಮಿತಿಯನ್ನು ನಿಗದಿಪಡಿಸಬಹುದು.

(3) ಕಾರ್ಯನಿರ್ವಾಹಕ ಪರಿಷತ್ತು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಬಗ್ಗೆ ತಾನು ತೆಗೆದುಕೊಳ್ಳಬೇಕೆಂದು ಉದ್ದೇಶಿಸಲಾದ ಅಥವಾ ತೆಗೆದುಕೊಳ್ಳಲಾದ ಕ್ರಮ, ಯಾವುದಾದರೂ ಇದ್ದಲ್ಲಿ, ಆ ಬಗ್ಗೆ ಕುಲಾಧಿಪತಿಯವರಿಗೆ ವರದಿ ಸಲ್ಲಿಸತಕ್ಕದ್ದು. ಅಂಥ ವರದಿಯನ್ನು ಕುಲಾಧಿಪತಿಯವರು ನಿರ್ದೇಶಿಸಬಹುದಾದ ಅಂಥ ಕಾಲದೊಳಗೆ ಸಲ್ಲಿಸತಕ್ಕದ್ದು.

(4) (2)ನೇ ಉಪಪ್ರಕರಣದ ಅಡಿಯಲ್ಲಿ ನಿಗದಿಪಡಿಸಬಹುದಾದ ಕಾಲಮಿತಿಯೊಳಗೆ ಕಾರ್ಯನಿರ್ವಾಹಕ ಪರಿಷತ್ತು, ಕುಲಾಧಿಪತಿಯವರಿಗೆ ಸಮಾಧಾನವಾಗುವಂತೆ ಕ್ರಮ ಕೈಗೊಳ್ಳದಿರುವಲ್ಲಿ, ಕುಲಾಧಿಪತಿಯವರು, ಕಾರ್ಯನಿರ್ವಾಹಕ ಪರಿಷತ್ತಿನಿಂದ ಸಲ್ಲಿಸಲಾದ ವಿವರಣೆ ಅಥವಾ ಮಾಡಿಕೊಳ್ಳಲಾದ ಮನವಿಯನ್ನು ಪರಿಗಣಿಸಿದ ತರುವಾಯ, ತಾವು ಉಚಿತವೆಂದು ಭಾವಿಸಬಹುದಾದ ಅಂಥ ನಿರ್ದೇಶನಗಳನ್ನು ಹೊರಡಿಸಬಹುದು ಮತ್ತು ಕಾರ್ಯನಿರ್ವಾಹಕ ಪರಿಷತ್ತು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಕುಲಾಧಿಪತಿಯವರ ಅಂಥ ನಿರ್ದೇಶನಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಪಾಲಿಸದಿದ್ದ ಪಕ್ಷದಲ್ಲಿ, ಕುಲಾಧಿಪತಿಯವರು ಅಂಥ ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ ಯಾವೊಬ್ಬ ವ್ಯಕ್ತಿ ಅಥವಾ ನಿಕಾಯವನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಬಗೆಗಿನ ವೆಚ್ಚಗಳಿಗಾಗಿ ಅವಶ್ಯಕವಾಗಬಹುದಾದ ಅಂಥ ಆದೇಶಗಳನ್ನು ಹೊರಡಿಸಬಹುದು.

(5) ಕುಲಾಧಿಪತಿಯವರು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತಗೊಳಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**12. ಸಹ-ಕುಲಾಧಿಪತಿ.–** ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣ ಖಾತೆಯ ಪ್ರಭಾರವನ್ನು ಹೊಂದಿರುವ ಸಚಿವರು, ವಿಶ್ವವಿದ್ಯಾಲಯದ ಸಹ ಕುಲಾಧಿಪತಿಯಾಗಿರತಕ್ಕದ್ದು.

**13. ಕುಲಪತಿ.–** (1) ಕುಲಪತಿಯು ಪೂರ್ಣಕಾಲಿಕ ವಿಶ್ವವಿದ್ಯಾನಿಲಯದ ಅಧಿಕಾರಿಯಾಗಿರತಕ್ಕದ್ದು ಮತ್ತು ಪ್ರಧಾನ ಶೈಕ್ಷಣಿಕ ಮತ್ತು ಕಾರ್ಯನಿರ್ವಾಹಕ ಅಧಿಕಾರಿಯಾಗಿತಕ್ಕದ್ದು.

(2) ಆತನು ಅತ್ಯುನ್ನತ ಮಟ್ಟದ ಸಾಮರ್ಥ್ಯ, ಪ್ರಾಮಾಣಿಕತೆ, ನೈತಿಕತೆ ಮತ್ತು ಸಾಂಸ್ಥಿಕ ಬದ್ಧತೆಯನ್ನುಳ್ಳ ವ್ಯಕ್ತಿಯಾಗಿರತಕ್ಕದ್ದು. ಹಾಗೂ, ಕುಲಪತಿಯು, ಅರ್ಥಶಾಸ್ತ್ರ, ಹಣಕಾಸು ನಿರ್ವಹಣೆ, ಸಮಾಜವಿಜ್ಞಾನ, ಗಣಿತ, ಅಂಕಿಅಂಶಗಳು, ಬ್ಯಾಂಕಿಂಗ್ ಅಥವಾ ಇತರ ಸಂಬಂಧಿತ ವಿಷಯಗಳಲ್ಲಿ ಕನಿಷ್ಠ ಇಪ್ಪತ್ತೈದು ವರ್ಷಗಳ ಬೋಧನಾ ಅನುಭವವನ್ನು ಹೊಂದಿರತಕ್ಕದ್ದು. ಅದರಲ್ಲಿ ಕನಿಷ್ಠ ಹತ್ತು ವರ್ಷಗಳು ಯು.ಜಿ.ಸಿ. ಪ್ರಮಾಣಕಗಳ ಅನುಸಾರವಾಗಿ ಪ್ರಾಧ್ಯಾಪಕನಾಗಿ ಅಥವಾ ಪ್ರತಿಷ್ಠಿತ ಸಂಶೋಧನೆ ಮತ್ತು ಅಭಿವೃದ್ಧಿ ಅಥವಾ ಆಡಳಿತಾತ್ಮಕ ಸಂಘಟನೆಗಳಲ್ಲಿ ಸಮಾನವಾದ ಹುದ್ದೆಯನ್ನು ಹೊಂದಿರುವ ಶ್ರೇಷ್ಠ ಶೈಕ್ಷಣಿಕ ತಜ್ಞನಾಗಿರತಕ್ಕದ್ದು.

(3) ಕುಲಪತಿಯ ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(4) ಕುಲಪತಿಯು, ಕುಲಾಧಿಪತಿಯವರಿಂದ ಈ ಮುಂದಿನ ಕಾರ್ಯವಿಧಾನದ ಅನುಸಾರವಾಗಿ ನೇಮಕಗೊಳ್ಳತಕ್ಕದ್ದು, ಎಂದರೆ:–

(i) ಸಾಮಾನ್ಯವಾಗಿ ಸ್ಥಾನಿಕ ಕುಲಪತಿಯ ಪದಾವಧಿಯು ಮುಕ್ತಾಯಗೊಳ್ಳುವ ಮೂರು ತಿಂಗಳುಗಳ ಮೊದಲು ಕುಲಪತಿಯ ನೇಮಕಕ್ಕಾಗಿ ರಾಜ್ಯ ಸರ್ಕಾರವು ಶೋಧನಾ ಮತ್ತು ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು;

(ii) ಶೋಧನಾ ಮತ್ತು ಆಯ್ಕೆ ಸಮಿತಿಯು ಪ್ರತಿಯೊಬ್ಬರೂ ಶ್ರೇಷ್ಠ ಶಿಕ್ಷಣ ತಜ್ಞರಾಗಿರುವ, ವಿಶ್ವವಿದ್ಯಾಲಯದ ಕುಲಪತಿ ಅಥವಾ ರಾಷ್ಟ್ರೀಯ ಪ್ರಾಮುಖ್ಯತೆಯುಳ್ಳ ಸಂಸ್ಥೆಯ ಕುಲಪತಿ ದರ್ಜೆಗೆ ಕಡಿಮೆಯಲ್ಲದ ದರ್ಜೆಯ ಐವರು ಸದಸ್ಯರನ್ನು ಒಳಗೊಂಡಿರತಕ್ಕದ್ದು. ಈ ಸದಸ್ಯರಲ್ಲಿ ಒಬ್ಬರನ್ನು ಕುಲಾಧಿಪತಿಯು, ಒಬ್ಬರನ್ನು ಯು.ಜಿ.ಸಿ.ಯು ಇಬ್ಬರನ್ನು ರಾಜ್ಯ ಸರ್ಕಾರವು ಮತ್ತು ಒಬ್ಬರನ್ನು ಕಾರ್ಯನಿರ್ವಾಹಕ ಪರಿಷತ್ತು ನಾಮನಿರ್ದೇಶನ ಮಾಡತಕ್ಕದ್ದು. ರಾಜ್ಯ ಸರ್ಕಾರವು ಈ ಸದಸ್ಯರಲ್ಲಿ ಒಬ್ಬರನ್ನು ಶೋಧನಾ ಮತ್ತು ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡತಕ್ಕದ್ದು:

ಪರಂತು, ಸಭೆಯ ಕೋರಂ ಮೂರು ಸಸ್ಯರಾಗಿರತಕ್ಕದ್ದು:

ಮತ್ತು ಪರಂತು, ನಾಮನಿರ್ದೇಶಿತರಾದ ಅಂಥ ಸದಸ್ಯರಲ್ಲಿ, ಅವರು ನೇಮಕವಾಗಿರುವುದನ್ನು ತಿಳಿಸಿದ ಒಂದು ತಿಂಗಳೊಳಗಾಗಿ ಪೂರಕವಾಗಿ ಸ್ಪಂದಿಸದಿದ್ದರೆ, ಸ್ವಯಂಚಾಲಿತವಾಗಿ ಬೇರೊಬ್ಬ ನಾಮನಿರ್ದೇಶಿತರಿಂದ ಅವರನ್ನು ಬದಲಿಸತಕ್ಕದ್ದು.

(iii) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ರಾಜ್ಯ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ನಾಮನಿರ್ದೇಶಿತನು ಶೋಧನಾ ಮತ್ತು ಆಯ್ಕೆ ಸಮಿತಿಯ ಸಂಚಾಲಕನಾಗಿರತಕ್ಕದ್ದು. ಸಂಚಾಲಕನು, ಶೋಧನಾ ಮತ್ತು ಆಯ್ಕೆ ಸಮಿತಿಗೆ ಅದಕ್ಕೆ ವಹಿಸಿದ ಕೆಲಸದಲ್ಲಿ ನೆರವಾಗತಕ್ಕದ್ದು ಮತ್ತು ಖ್ಯಾತ ವ್ಯಕ್ತಿಗಳಿಂದ ಸ್ವೀಕೃತವಾದ ನಾಮನಿರ್ದೇಶನಗಳ ಆಧಾರದ ಮೇಲೆ ಕುಲಪತಿಯ ಸ್ಥಾನಕ್ಕೆ ಅರ್ಜಿಗಳನ್ನು ಆಹ್ವಾನಿಸಿದ ತರುವಾಯ ಎಲ್ಲಾ ಅರ್ಹ ಅಭ್ಯರ್ಥಿಗಳ ಲಭ್ಯವಿರುವ ದತ್ತಾಂಶಗಳನ್ನು ಕೂಡಾ ಅದರ ಮುಂದೆ ಮಂಡಿಸತಕ್ಕದ್ದು ಹಾಗೂ ಅಂಥ ದತ್ತಾಂಶದಿಂದ ಶೋಧನಾ ಮತ್ತು ಆಯ್ಕೆ ಸಮಿತಿಯು ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(5) ರಾಜ್ಯ ಸರ್ಕಾರದ ಅಥವಾ ವಿಶ್ವವಿದ್ಯಾಲಯದ ವ್ಯವಹಾರಗಳೊಂದಿಗೆ ಪ್ರಸ್ತುತ ಸಂಬಂಧವಿರುವ ಯಾವೊಬ್ಬ ವ್ಯಕ್ತಿಯನ್ನೂ ಶೋಧನಾ ಮತ್ತು ಆಯ್ಕೆ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

(6) ಶೋಧನಾ ಮತ್ತು ಆಯ್ಕೆ ಸಮಿತಿಯು, ತಾನು ರಚನೆಯಾದ ದಿನಾಂಕದಿಂದ ಎರಡು ತಿಂಗಳೊಳಗೆ, (2)ನೇ ಉಪಪ್ರಕರಣದ ಅಡಿಯಲ್ಲಿನ ಅಗತ್ಯತೆಗಳನ್ನು ಪೂರೈಸುವ ಮತ್ತು ಅರ್ಥಶಾಸ್ತ್ರ ಮತ್ತು/ ಅಥವಾ ಸಮಾಜ ವಿಜ್ಞಾನಗಳ ಕ್ಷೇತ್ರದಿಂದ ಖ್ಯಾತ ಶಿಕ್ಷಣ ತಜ್ಞರಾದ ಮೂರು ವ್ಯಕ್ತಿಗಳ ಹೆಸರಿನ ಒಂದು ಪಟ್ಟಿಯನ್ನು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಹೆಸರುಗಳ ಪಟ್ಟಿಯನ್ನು ಅಕಾರಾದಿ ಕ್ರಮದಲ್ಲಿ ಜೋಡಿಸತಕ್ಕದ್ದು. ರಾಜ್ಯ ಸರ್ಕಾರವು ಅವರ ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಆ ಪಟ್ಟಿಯಲ್ಲಿನ ಒಬ್ಬರ ಹೆಸರನ್ನು ವಿಶ್ವವಿದ್ಯಾನಿಲಯದ ಕುಲಪತಿಯನ್ನಾಗಿ ನೇಮಿಸಲು ಕುಲಾಧಿಪತಿಯವರಿಗೆ ಶಿಫಾರಸ್ಸು ಮಾಡತಕ್ಕದ್ದು:

ಪರಂತು, ರಾಜ್ಯ ಸರ್ಕಾರವು ಶಿಫಾರಸ್ಸು ಮಾಡಿದ ಹೆಸರು ಕುಲಾಧಿಪತಿಯವರಿಗೆ ತೃಪ್ತಿಕರವಾಗದಿದ್ದಲ್ಲಿ, ಕುಲಾಧಿಪತಿಯವರು, ಕಾರಣಗಳನ್ನು ದಾಖಲಿಸಿ, ಸಲ್ಲಿಸಲಾದ ಶಿಫಾರಸ್ಸನ್ನು ಮರುಪರಿಗಣಿಸಲು ಕೋರಬಹುದು. ರಾಜ್ಯ ಸರ್ಕಾರವು, ಯುಕ್ತ ಪರಿಗಣನೆಯ ತರುವಾಯ, ಕುಲಪತಿಯವರ ನೇಮಕಕ್ಕಾಗಿ ಅಂತಿಮ ಶಿಫಾರಸ್ಸನ್ನು ಸಲ್ಲಿಸತಕ್ಕದ್ದು ಹಾಗೂ ಶಿಫಾರಸ್ಸು ಸಲ್ಲಿಕೆಯಾದ ಮೂವತ್ತು ದಿನಗಳೊಳಗೆ ಕುಲಾಧಿಪತಿಯವರು ಅಂಥ ವ್ಯಕ್ತಿಯನ್ನು ಕುಲಪತಿಯನ್ನಾಗಿ ನೇಮಿಸತಕ್ಕದ್ದು:

ಮತ್ತು ಪರಂತು, ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯದ ಮೊದಲ ಕುಲಪತಿಯನ್ನು, ರಾಜ್ಯ ಸರ್ಕಾರವು, ತಾನು ನಿರ್ದಿಷ್ಟಪಡಿಸಬಹುದಾದ ಅಂಥ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟು ನೇಮಕ ಮಾಡತಕ್ಕದ್ದು.

(7) ಕುಲಪತಿಯಾಗಿ ನೇಮಕವಾಗಬೇಕಾದ ವ್ಯಕ್ತಿಯು ಕುಲಪತಿಯಾಗಿ ಸ್ಪಷ್ಟ ನಾಲ್ಕು ವರ್ಷಗಳ ಪದಾವಧಿಯನ್ನು ಹೊಂದಿರತಕ್ಕದ್ದು ಮತ್ತು ಅರವತ್ತೇಳು ವರ್ಷಗಳ ವಯಸ್ಸಾದಾಗ ಪದವನ್ನು ಹೊಂದಿರುವುದು ರದ್ದಾಗತಕ್ಕದ್ದು.

(8) ಕುಲಪತಿಯವರು, ಕುಲಾಧಿಪತಿಯವರ ಮತ್ತು ರಾಜ್ಯ ಸರ್ಕಾರದ ಇಷ್ಟಪರ್ಯಂತ ಗರಿಷ್ಠ ನಾಲ್ಕು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು. ಅವರು ಎರಡನೇ ಅವಧಿಗೆ ಪುನರ್‌ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ.

(9) ಕುಲಪತಿಯವರನ್ನು, ಈ ಅಧಿನಿಯಮದ ಉಪಬಂಧಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಡುವ ಅಥವಾ ನೆರವೇರಿಸಲು ನಿರಾಕರಿಸುವ ಅಥವಾ ಅವರಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡ ಕಾರಣದ ಮೇಲೆ ಅಥವಾ (10)ನೇ ಉಪಪ್ರಕರಣದ ಅಡಿಯಲ್ಲಿ ಕುಲಾಧಿಪತಿಯವರಿಂದ ಆದೇಶಿಸಲಾದ ವಿಚಾರಣೆಯ ವರದಿಯನ್ನು ಪರಿಗಣಿಸಿದ ತರುವಾಯದ ಹೊರತು ಪದದಿಂದ ತೆಗೆದು ಹಾಕತಕ್ಕದ್ದಲ್ಲ.

(10) ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ ಕುಲಾಧಿಪತಿಯು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯು ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ತನ್ನ ತೀರ್ಪುಗಳು ಮತ್ತು ಶಿಫಾರಸ್ಸುಗಳನ್ನು ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು. ಕುಲಾಧಿಪತಿಯವರು, ಅದನ್ನು ಪರಿಗಣಿಸಿದ ತರುವಾಯ ತನ್ನ ಅಭಿಪ್ರಾಯದಲ್ಲಿ ಅಗತ್ಯಪಡಿಸಬಹುದಾದಂತೆ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳನ್ನು ಒಳಗೊಂಡಂತೆ ವಿಷಯದ ಮೇಲೆ ಯುಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

(11) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು, ಕಾಲಕಾಲಕ್ಕೆ ವಿಶ್ವವಿದ್ಯಾನಿಲಯ ಅನುದಾನಗಳ ಆಯೋಗವು ಹೇಳಲಾದ ಅಂಥ ಷರತ್ತುಗಳಿಗೆ ಒಳಪಟ್ಟು ಕುಲಾಧಿಪತಿಯು ನಿರ್ಧರಿಸಬಹುದಾದಂತೆ ಇರತಕ್ಕದ್ದು:

ಪರಂತು, ರಾಜ್ಯ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಯವರ ಉಪಲಬ್ಧಿಗಳು ಏಕರೂಪ ರಚನೆಯಲ್ಲಿ ಇರತಕ್ಕದ್ದು.

(12) ನಿವೃತ್ತಿಹೊಂದಿದ ಒಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕಗೊಂಡರೆ, ಅವರು ಕುಲಪತಿಯಾಗಿ ನೇಮಕಗೊಂಡ ಮೇಲೆ ಉಪಲಬ್ಧಿಗಳು ಒಳಗೊಂಡಂತೆ ಸೇವಾ ನಿಬಂಧನೆ ಮತ್ತು ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಿದಂತೆ ಇರತಕ್ಕದ್ದು.

(13) ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವ ಪ್ರಾಧ್ಯಾಪಕರನ್ನು ಕುಲಪತಿಯಾಗಿ ನೇಮಿಸಿದಲ್ಲಿ, ನೇಮಕಾತಿಗೆ ಮೊದಲು ಆತನು ಹೊಂದಿದ ಹುದ್ದೆಯಲ್ಲಿ ಲೀನ್ ಅನ್ನು ಆತನು ಉಳಿಸಿಕೊಳ್ಳತಕ್ಕದ್ದು.

**14. ಕುಲಪತಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು.-** (1) ಕುಲಪತಿಯು ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ಮತ್ತು ವಿದ್ಯಾವಿಷಯಕ ಅಧಿಕಾರಿಯಾಗಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ಮೇಲೆ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು. ಅವನು ವಿಶ್ವವಿದ್ಯಾನಿಲಯದಲ್ಲಿ ಶಿಸ್ತುಪಾಲನೆಗೆ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಅವನು ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ ಹಾಗೂ ಅನುಸೂಚಿ ಮತ್ತು ಪರಿನಿಯಮಗಳ ಮೂಲಕ ಕಲ್ಪಿಸಲಾದ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳು ಮತ್ತು ನಿಕಾಯಗಳಿಗೆ ಸಹ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು. ಅವನು ಕುಲಾಧಿಪತಿಯ ಮತ್ತು ಸಹ-ಕುಲಾಧಿಪತಿಯ ಗೈರುಹಾಜರಿಯಲ್ಲಿ ಘಟಿಕೋತ್ಸವದ ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಅವನು ವಿಶ್ವವಿದ್ಯಾನಿಲಯದ ಇತರ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಅವನು ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಅವನು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಎಲ್ಲಾ ಉಪಬಂಧಗಳ ಪಾಲನೆಯನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು.

(4) ಅವನು ತಾನಾಗಿಯೇ ಆಗಲಿ ಅಥವಾ ತನ್ನಿಂದ ಲಿಖಿತದಲ್ಲಿ ಅಧಿಕೃತನಾದ ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿಯ ಮೂಲಕವೇ ಆಗಲಿ, ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ ಹಾಗೂ ಅವನು ಪದನಿಮಿತ್ತ ಅಧ್ಯಕ್ಷನಾಗಿರುವ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳು ಮತ್ತು ನಿಕಾಯಗಳ ಸಭೆಗಳನ್ನು ಕರೆಯಬಹುದು ಮತ್ತು ಈ ಪ್ರಾಧಿಕಾರಗಳ ತೀರ್ಮಾನಗಳನ್ನು ಜಾರಿಗೆ ತರಲು ಮತ್ತು ಕಾರ್ಯಗತಗೊಳಿಸಲು ಅವಶ್ಯವಾಗಬಹುದಾದ ಅಂಥ ಎಲ್ಲ ಕಾರ್ಯಗಳನ್ನು ನೆರವೇರಿಸತಕ್ಕದ್ದು.

(5) ಕುಲಪತಿಯು, ತ್ವರಿತ ಕ್ರಮವು ಅಗತ್ಯವೆಂದು ಅವನು ಅಭಿಪ್ರಾಯಪಡುವ ಯಾವುದೇ ತುರ್ತು ಸಂದರ್ಭದಲ್ಲಿ ಅವನು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅತಿ ಶೀಘ್ರ ಸಮಯದಲ್ಲಿ ಸಾಮಾನ್ಯವಾಗಿ ವ್ಯವಹರಿಸುತ್ತಿದ್ದಂಥ ಪ್ರಾಧಿಕಾರಕ್ಕೆ ಅಥವಾ ನಿಕಾಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ಮಾಡತಕ್ಕದ್ದು:

ಪರಂತು, ಕುಲಪತಿಯು ತೆಗೆದುಕೊಂಡ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರ ಅಥವಾ ನಿಕಾಯವು ಅನುಮೋದಿಸದಿದ್ದರೆ, ಅವರು ಆ ವಿಷಯವನ್ನು ಕುಲಾಧಿಪತಿಗೆ ಒಪ್ಪಿಸಬಹುದು, ಆ ಬಗ್ಗೆ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಮತ್ತು ಪರಂತು, ಈ ಉಪಪ್ರಕರಣದ ಮೇರೆಗೆ ಕುಲಪತಿಯ ವರದಿಯ ಆಧಾರದ ಮೇಲೆ ಪ್ರಾಧಿಕಾರ ಅಥವಾ ನಿಕಾಯವು ತೆಗೆದುಕೊಂಡ ತೀರ್ಮಾನದಿಂದ ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಬಾಧಿತನಾದರೆ, ಆ ವ್ಯಕ್ತಿಯು ಅವನಿಗೆ ತೀರ್ಮಾನವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕುಲಾಧಿಪತಿಯ ಮುಂದೆ ಅಪೀಲು ಹೂಡಬಹುದು ಮತ್ತು ಅಂಥ ಅಪೀಲಿನ ಮೇಲೆ ಕುಲಾಧಿಪತಿಯ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಅಲ್ಲದೆ ಪರಂತು, ಈ ಉಪಪ್ರಕರಣದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯದ ನೌಕರರ ವೇತನ ಶ್ರೇಣಿಯನ್ನು ಪರಿಷ್ಕರಿಸಲು ಚಲಾಯಿಸತಕ್ಕದ್ದಲ್ಲ ಮತ್ತು ಈ ಉಪ ಪ್ರಕರಣದ ಮೇರೆಗೆ ಅಧಿಕಾರಗಳನ್ನು ಚಲಾಯಿಸಿ ಪರಿನಿಯಮಗಳು ಅಥವಾ ವಿನಿಯಮಗಳನ್ನು ರಚಿಸಿದರೆ ಅವು ಈ ಅಧಿನಿಯಮದ ಸೂಕ್ತ ಉಪಬಂಧಗಳ ಮೇರೆಗೆ ಕುಲಾಧಿಪತಿಯ ಅನುಮೋದನೆಗೆ ಒಳಪಟ್ಟಿರತಕ್ಕದ್ದು ಮತ್ತು ಆರ್ಡಿನೆನ್ಸ್‌ಗಳನ್ನು ರಚಿಸಿದ್ದರೆ, ಅವುಗಳನ್ನು ಈ ಅಧಿನಿಯಮದ ಅನುಸಾರವಾಗಿ ಅಗತ್ಯಪಡಿಸಲಾದಂತೆ ಕುಲಾಧಿಪತಿಗೆ ಸಲ್ಲಿಸತಕ್ಕದ್ದು.

(6) ಕುಲಪತಿಯು ವಿಶ್ವವಿದ್ಯಾಲಯದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**15. ಕುಲಪತಿಯ ಹುದ್ದೆಯು ಖಾಲಿ ಇರುವ ಕಾಲದಲ್ಲಿ ಕಾರ್ಯವ್ಯವಸ್ಥೆ.-** ರಜೆ, ಅನಾರೋಗ್ಯ ಅಥವಾ ಕುಲಪತಿಯ ಪದದಲ್ಲಿನ ಖಾಲಿ ಸ್ಥಾನವನ್ನು ಭರ್ತಿ ಮಾಡದೆ ಉಳಿದ ಕಾರಣದಿಂದಾಗಿ ಕುಲಪತಿಯ ತಾತ್ಕಾಲಿಕ ಗೈರುಹಾಜರಿಯ ಅವಧಿಯಲ್ಲಿ, ಕುಲಾಧಿಪತಿಯು, ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ, ಖಾಯಂ

ಏರ್ಪಾಡುಗಳನ್ನು ಮಾಡುವವರೆಗೆ, ವಿಶ್ವವಿದ್ಯಾನಿಲಯದ ಅತ್ಯಂತ ಹಿರಿಯ ಪ್ರಾಧ್ಯಾಪಕರನ್ನು ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಯನ್ನಾಗಿ ನಿಯೋಜಿಸಬಹುದು.

**16. ಕುಲಸಚಿವರು.-** (1) ಕುಲಸಚಿವನನ್ನು ರಾಜ್ಯ ಸರ್ಕಾರವು ನೇಮಕಮಾಡತಕ್ಕದ್ದು.

(2) ವಿಶ್ವವಿದ್ಯಾನಿಲಯದ ಕುಲಸಚಿವನಾಗಿ ನೇಮಕಗೊಳ್ಳಬೇಕಾದ ವ್ಯಕ್ತಿಯು ಯಾವುದೇ ವಿಶ್ವವಿದ್ಯಾನಿಯದ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಪ್ರಾಧ್ಯಾಪಕನಾಗಿದ್ದು ಇಪ್ಪತ್ತೈದು ವರ್ಷಗಳ ಒಟ್ಟು ಬೋಧನಾ ಅನುಭವವನ್ನು ಹೊಂದಿದ್ದು ಅದರಲ್ಲಿ ಕನಿಷ್ಠ ಐದು ವರ್ಷಗಳು ಆಯ್ಕೆ (selected) ಪ್ರಾಧ್ಯಾಪಕನಾಗಿರತಕ್ಕದ್ದು ಅಥವಾ ಐಎಎಸ್ ಅಥವಾ ಕೆಎಎಸ್ (ಹಿರಿಯ ಶ್ರೇಣಿ) ವೃಂದಕ್ಕೆ ಸೇರಿರುವ ವ್ಯಕ್ತಿಯಾಗಿರತಕ್ಕದ್ದು.

(3) ಕುಲಸಚಿವನಾಗಿ ನೇಮಕಗೊಂಡ ವ್ಯಕ್ತಿಯ ಪದಾವಧಿಯು ಮೂರು ವರ್ಷಗಳ ಮಿತಿಯನ್ನು ಹೊಂದಿರತಕ್ಕದ್ದು.

(4) ಕುಲಸಚಿವನು ಕಾರ್ಯನಿರ್ವಾಹಕ ಪರಿಷತ್ತು ಮತ್ತು ವಿದ್ಯಾವಿಷಯಕ ಪರಿಷತ್ತಿನ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು. ಹಣಕಾಸು ಸಮಿತಿಯ, ವಾಸಂಗ ವಿಭಾಗದ ಸದಸ್ಯನಾಗಿರತಕ್ಕದ್ದು ಮತ್ತು ಇತರ ಪ್ರಾಧಿಕಾರಗಳ ಸದಸ್ಯನಾಗಿರುವನೆಂದು ಭಾವಿಸತಕ್ಕದ್ದು.

(5) ಈ ಮುಂದಿನವುಗಳು ಕುಲಸಚಿವನ ಕರ್ತವ್ಯಗಳಾಗಿರತಕ್ಕದ್ದು,-

(i) ವಿಶ್ವವಿದ್ಯಾನಿಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಕುಲಪತಿ ಅಥವಾ ಕಾರ್ಯನಿರ್ವಾಹಕ ಪರಿಷತ್ತು ಅವನ ವಶಕ್ಕೆ ಒಪ್ಪಿಸುವಂಥ ಇತರ ಸ್ವತ್ತಿನ ಅಭಿರಕ್ಷಕನಾಗಿರುವುದು;

(ii) ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತಿನ ಅಥವಾ ವ್ಯಾಸಂಗ ವಿಭಾಗಗಳ, ಅಧ್ಯಯನ ಮಂಡಲಿಯ ಮತ್ತು ವಿಶ್ವವಿದ್ಯಾನಿಲಯದ ಸಂಬಂಧಿತ ಯಾವುದೇ ಪ್ರಾಧಿಕಾರದ ಅಥವಾ ನಿಕಾಯಗಳ ಸಭೆಗಳನ್ನು ಕರೆಯುವ ನೋಟೀಸುಗಳನ್ನು ಹೊರಡಿಸುವುದು ಮತ್ತು ಅಂಥ ಎಲ್ಲ ಸಭೆಗಳ ನಡವಳಿಗಳನ್ನು ಇಡುವುದು;

(iii) ಅವನು ಕಾಯದರ್ಶಿಯಾಗಿರುವ ಪ್ರಾಧಿಕಾರಗಳ ಮತ್ತು ನಿಕಾಯಗಳ ಅಧಿಕೃತ ಪತ್ರವ್ಯವಹಾರವನ್ನು ನಡೆಸುವುದು;

(iv) ವಿಶ್ವವಿದ್ಯಾನಿಲಯದ ಸಂಬಂಧಿತ ಪ್ರಾಧಿಕಾರಗಳ ಮತ್ತು ನಿಕಾಯಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ, ಮತ್ತು ಸಭೆಗಳನ್ನು ನಡೆಸಿದ ಒಂದು ತಿಂಗಳೊಳಗಾಗಿ ಅವುಗಳ ನಡವಳಿಗಳನ್ನು ಕುಲಾಧಿಪತಿಗೆ ಮತ್ತು ರಾಜ್ಯಸರ್ಕಾರಕ್ಕೆ ಒದಗಿಸುವುದು;

(v) ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು, ಹಣಕಾಸು ಸಮಿತಿ, ವ್ಯಾಸಂಗ ವಿಭಾಗಗಳು ಮತ್ತು ಪ್ರಾಧಿಕಾರಗಳ ಮೂಲಕ ನೇಮಕಗೊಂಡ ಯಾವುದೇ ನಿಕಾಯ ಅಥವಾ ಸಮಿತಿಯ ಎಲ್ಲಾ ಸಭೆಗಳ ನಡವಳಿಗಳನ್ನು ಇಟ್ಟುಕೊಳ್ಳುವುದು;

(vi) ಕುಲಪತಿ ಅಥವಾ ಯುಕ್ತವಾಗಿ ಅಧಿಕೃತಗೊಳಿಸಲಾದ ಅಧಿಕಾರಿಯು ಕಾರ್ಯನಿರ್ವಹಿಸದಿದ್ದಾಗ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯನ್ನು ಕರೆಯುವುದು ಮತ್ತು ವಿಶ್ವವಿದ್ಯಾನಿಲಯದ ಕೆಲಸವನ್ನು ಕಾರ್ಯಗತಗೊಳಿಸಲು ಅದರ ನಿರ್ದೇಶನಗಳನ್ನು ಕೈಗೊಳ್ಳುವುದು;

(vii) ಆತನ ಕರ್ತವ್ಯಗಳು ಮತ್ತು ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಕುಲಪತಿಗೆ ನೇರವಾಗಿ ಜವಾಬ್ದಾರನಾಗಿರುವುದು;

(viii) ಕಾರ್ಯನಿರ್ವಾಹಕ ಪರಿಷತ್ತು ಅಥವಾ ಕುಲಪತಿಯು ಕಾಲಕಾಲಕ್ಕೆ ವಹಿಸಬಹುದಾದ ಅಂಥ ಇತರ ಕರ್ತವ್ಯಗಳನ್ನು ನೆರವೇರಿಸುವುದು.

(6) ರಿಜಿಸ್ಟ್ರಾರನು ಆರ್ಡಿನೆನ್ಸ್‌ಗಳು ಅಥವಾ ಪರಿನಿಯಮಗಳು, ಉಪಬಂಧಿಸಬಹುದಾದಂಥ ಮತ್ತು ಕುಲಪತಿಯು ಕಾಲಕಾಲಕ್ಕೆ ಹಂಚಿಕೆ ಮಾಡಬಹುದಾದ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**17. ಪರೀಕ್ಷೆಗಳ ನಿಯಂತ್ರಕ.-** (1) ಪರೀಕ್ಷಾ ನಿಯಂತ್ರಕನನ್ನು, ವಿಶ್ವವಿದ್ಯಾನಿಲಯದ ವ್ಯವಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕನಾಗಿ ಕನಿಷ್ಠ ಏಳು ವರ್ಷಗಳ ಅನುಭವವನ್ನು ಮತ್ತು ಡಾಕ್ಟರ್ ಡಿಗ್ರಿಯನ್ನು ಹೊಂದಿರುವ ಸಹಾಯಕ ಪ್ರಾಧ್ಯಾಪಕರ ಪೈಕಿಯಿಂದ ಒಬ್ಬರನ್ನು ಮೂರು ವರ್ಷಗಳ ಅವಧಿಗಾಗಿ ರಾಜ್ಯ ಸರ್ಕಾರವು ನೇಮಕಮಾಡತಕ್ಕದ್ದು.

(2) ಪರೀಕ್ಷಾ ನಿಯಂತ್ರಕನು ವಿಶ್ವವಿದ್ಯಾನಿಲಯದ ಸಂಬಂಧಪಟ್ಟ ವಿದ್ಯಾವಿಷಯಕ ಪರಿಷತ್ತಿನ ಸದಸ್ಯನಾಗಿರತಕ್ಕದ್ದು. ಆತನು ಅಗತ್ಯವಿದ್ದಾಗಲೆಲ್ಲ ಕಾಯನಿರ್ವಾಹಕ ಪರಿಷತ್ತಿನ ಮತ್ತು ಹಣಕಾಸು ಸಮಿತಿಯ ಸಭೆಗಳಿಗೆ ಆಹ್ವಾನಿತನಾಗಿರತಕ್ಕದ್ದು.

(3) ಪರೀಕ್ಷಾ ನಿಯಂತ್ರಕನು ಪರೀಕ್ಷೆಯನ್ನು ನಡೆಸುವ ಮತ್ತು ಅದಕ್ಕೆ ಪ್ರಾಸಂಗಿಕವಾದ ಹಾಗೂ ಅದಕ್ಕೆ ಪೂರಕವಾಗಿರುವ ಎಲ್ಲಾ ಇತರ ವಿಷಯಗಳ ಪ್ರಭಾರಿಯಾಗಿರತಕ್ಕದ್ದು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ಉಪಬಂಧಿಸಬಹುದಾದ ಅಥವಾ ಕುಲಪತಿಯು ಆತನಿಗೆ ಹಂಚಿಕೆ ಮಾಡಬಹುದಾದ ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು. ಪರೀಕ್ಷಾ ನಿಯಂತ್ರಕನಿಗೆ ವಿಶ್ವವಿದ್ಯಾಲಯದ ಚಟುವಟಿಕೆಗಳ ಗಾತ್ರ ಮತ್ತು ಮಿತಿಯ ಆಧಾರದ ಮೇಲೆ ಉಪ/ಸಹಾಯಕ ಪರೀಕ್ಷಾ ನಿಯಂತ್ರಕರ ಹಂತದಲ್ಲಿ ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳು ಸಹಾಯಕರಾಗಿರಬಹುದು.

**18. ಹಣಕಾಸು ಅಧಿಕಾರಿ.-** (1) ಹಣಕಾಸು ಅಧಿಕಾರಿಯನ್ನು ರಾಜ್ಯಲೆಕ್ಕಪತ್ರಗಳ ಇಲಾಖೆಯ ಅಧಿಕಾರಿಗಳ ಪೈಕಿಯಿಂದ ರಾಜ್ಯ ಸರ್ಕಾರವು ನೇಮಕ ಮಾಡತಕ್ಕದ್ದು.

(2) ಹಣಕಾಸು ಅಧಿಕಾರಿಯ ನೇಮಕದ ಪದಾವಧಿಯು ಮೂರು ವರ್ಷಗಳಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯ ಉಪಲಬ್ಧಿಗಳು ಹಾಗೂ ನೇಮಕಾತಿಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ಪರಿನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ನಿಯಂತ್ರಣಕ್ಕೊಳಪಟ್ಟು, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಥವಾ ಕುಲಪತಿಯು ಕಾಲ ಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ಮತ್ತು ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು. ಆತನು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ-ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಅಗತ್ಯವಿರಬಹುದಾದಂತೆ ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳ ಅಥವಾ ನಿಕಾಯಗಳ ಸಭೆಗಳಲ್ಲಿ ಆಹ್ವಾನಿತನಾಗಿರತಕ್ಕದ್ದು.

(4) ವಿಶ್ವವಿದ್ಯಾಲಯದ ಚಟುವಟಿಕೆಗಳ ಗಾತ್ರ ಮತ್ತು ಮಿತಿಗಳ ಆಧಾರದ ಮೇಲೆ ಹಣಕಾಸು ಅಧಿಕಾರಿಯು, ಉಪ ಹಣಕಾಸು ಅಧಿಕಾರಿ ಮತ್ತು ಸಹಾಯಕ ಹಣಕಾಸು ಅಧಿಕಾರಿಗಳ ಹಂತದ ಒಬ್ಬರು ಅಥವಾ ಹೆಚ್ಚಿನ ವ್ಯಕ್ತಿಗಳಿಂದ ನೇರವನ್ನು ಪಡೆಯಬಹುದು.

**19. ಡೀನ್.-** (1) ವಿಶ್ವವಿದ್ಯಾಲಯದ ಪ್ರತಿಯೊಂದು ವ್ಯಾಸಂಗ ವಿಭಾಗಕ್ಕೂ ಒಬ್ಬ ಡೀನ್ ಇರತಕ್ಕದ್ದು, ಆತನು ಸಂಬಂಧಪಟ್ಟ ವ್ಯಾಸಂಗ ವಿಭಾಗದ ಮುಖ್ಯ ಶೈಕ್ಷಣಿಕ ಅಧಿಕಾರಿಯಾಗಿರತಕ್ಕದ್ದು.

(2) ಆತನು ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳ ಪೈಕಿ ಕುಲಪತಿಯ ಮೂಲಕ ನೇಮಕಗೊಳ್ಳತಕ್ಕದ್ದು.

(3) ಡೀನ್‌ನ ನೇಮಕಾತಿ ಪ್ರಕ್ರಿಯೆ, ಆತನ ಪದಾವಧಿ ಮತ್ತು ಆತನ ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಪರಿನಿಯಮಗಳಲ್ಲಿ ಉಪಬಂಧಿಸಿದಂತೆ ಇರತಕ್ಕದ್ದು.

## ಅಧ್ಯಾಯ-IV
## ವಿಶ್ವವಿದ್ಯಾಲಯದ ಪ್ರಾಧಿಕಾರಗಳು

**20. ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳು.-** ಈ ಮುಂದಿನ ನಿಕಾಯಗಳು ಪ್ರತಿಯೊಂದು ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳಾಗಿರತಕ್ಕದ್ದು, ಎಂದರೆ:-

(1) ಕಾಯನಿರ್ವಾಹಕ ಪರಿಷತ್ತು;
(2) ವಿದ್ಯಾವಿಷಯಕ ಪರಿಷತ್ತು;
(3) ಅಧ್ಯಯನಗಳ ಮಂಡಲಿ;
(4) ಸಂಶೋಧನಾ ಪರಿಷತ್ತು;
(5) ಹಣಕಾಸು ಸಮಿತಿ;
(6) ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳೆಂದು ಪರಿನಿಯಮಗಳ ಮೂಲಕ ಘೋಷಿಸಬಹುದಾದ ಅಂಥ ಇತರ ನಿಕಾಯಗಳು.

**21. ಕಾರ್ಯನಿರ್ವಾಹಕ ಪರಿಷತ್ತು.-** ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(1) ಕುಲಪತಿಯು ಅಧ್ಯಕ್ಷರಾಗಿರತಕ್ಕದ್ದು.

(2) ಬ್ಯಾಂಕಿಂಗ್, ಮಾಹಿತಿ ತಂತ್ರಜ್ಞಾನ, ಉದ್ಯಮ, ಕಾನೂನು ಮತ್ತು ಬಂಡವಾಳ ಮಾರುಕಟ್ಟೆ ವಲಯಗಳನ್ನು ಪ್ರತಿನಿಧಿಸುವ, ರಾಜ್ಯ ಸರ್ಕಾರದ ಮೂಲಕ ನಾಮನಿರ್ದೇಶನಗೊಂಡ ಐವರು ಶ್ರೇಷ್ಠ ವ್ಯಕ್ತಿಗಳು, ಅವರಲ್ಲಿ ಒಬ್ಬರು ಅನುಸೂಚಿತ ಜಾತಿಗಳಿಗೆ, ಒಬ್ಬರು ಅನುಸೂಚಿತ ಬುಡಕಟ್ಟುಗಳಿಗೆ, ಒಬ್ಬರು ಇತರ ಹಿಂದುಳಿದ ವರ್ಗಗಳಿಗೆ ಅಥವಾ

ಅಲ್ಪಸಂಖ್ಯಾತರಿಗೆ ಹಾಗೂ ಇಬ್ಬರು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿರತಕ್ಕದ್ದು. ಮೇಲಿನವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದ್ದು:

ಪರಂತು, ನಾಮನಿರ್ದೇಶನಗೊಂಡ ಸದಸ್ಯರು ಅರ್ಥಶಾಸ್ತ್ರಗಳ ಅಥವಾ ಯಾವುದೇ ಸಮಾಜ ವಿಜ್ಞಾನಗಳ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನ ಅಥವಾ ವೃತ್ತಿಪರ ಕೋರ್ಸುಗಳಲ್ಲಿ ಪದವಿಯನ್ನು ಕನಿಷ್ಠ ವಿದ್ಯಾರ್ಹತೆಯನ್ನಾಗಿ ಹೊಂದಿರತಕ್ಕದ್ದು.

(3) ಇಬ್ಬರು ವ್ಯಕ್ತಿಗಳು, ಇವರಲ್ಲಿ, ಮೂರು ವರ್ಷಗಳವರೆಗೆ ಅಥವಾ ಸಂಬಂಧಿಸಿದ ಸದನಗಳ ಸದಸ್ಯರಾಗಿ ಮುಂದುವರೆಯುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಸಭಾಧ್ಯಕ್ಷರು ನಾಮನಿರ್ದೇಶಿಸಿದ ವಿಧಾನಸಭೆಯ ಸದಸ್ಯರಾಗಿರತಕ್ಕ ಒಬ್ಬರು ಹಾಗೂ ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರು ನಾಮನಿರ್ದೇಶಿಸಿದ ವಿಧಾನಪರಿಷತ್ತಿನ ಸದಸ್ಯರಾಗಿರತಕ್ಕ ಮತ್ತೊಬ್ಬರು.

(4) ಉನ್ನತ ಶಿಕ್ಷಣ, ಹಣಕಾಸು ಮತ್ತು ಸಮಾಜ ಕಲ್ಯಾಣ ಈ ಪ್ರತಿಯೊಂದು ಇಲಾಖೆಗಳಿಂದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ ಹಂತದ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುವ ಮೂವರು ಅಧಿಕಾರಿಗಳು ಅಥವಾ ಉಪ ಕಾರ್ಯದರ್ಶಿ ದರ್ಜೆಗೆ ಕಡಿಮೆಯಲ್ಲದ ಅವರ ನಾಮನಿರ್ದೇಶಿತರು.

(5) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಅಥವಾ ಕಾರ್ಯನಿರ್ವಾಹಕ ನಿರ್ದೇಶಕ.

(6) ಕುಲಪತಿಗಳು ವಿಶ್ವವಿದ್ಯಾಲಯದಲ್ಲಿ ಜೇಷ್ಠತೆಯ ಆಧಾರದಲ್ಲಿ ಸರದಿಯ ಮೇರೆಗೆ ನಾಮನಿರ್ದೇಶಿಸಿದ ವ್ಯಾಸಂಗ ವಿಭಾಗದ ಡೀನ್.

(7) ಕುಲಪತಿಗಳು ಪ್ರತಿ ಒಂದು ವರ್ಷದ ಅವಧಿಯವರೆಗೆ ವಿಶ್ವವಿದ್ಯಾಲಯದಲ್ಲಿ ಜೇಷ್ಠತೆಯ ಆಧಾರದಲ್ಲಿ ಸರದಿಯ ಮೇರೆಗೆ ನಾಮನಿರ್ದೇಶಿಸಿದ ಇಬ್ಬರು ಪ್ರಾಧ್ಯಾಪಕರು.

(8) ಕುಲಸಚಿವರು ಕಾರ್ಯದರ್ಶಿಯಾಗಿರತಕ್ಕದ್ದು.

**22. ಕಾರ್ಯನಿರ್ವಾಹಕ ಪರಿಷತ್ತಿನ ಪದಾವಧಿ.–** (1) ಯಾವೊಬ್ಬ ವ್ಯಕ್ತಿಯು, ಆತನು ಹೊಂದಿರುವ ಪದ ಅಥವಾ ನೇಮಕಾತಿಯ ಕಾರಣದ ಮೂಲಕ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯನಾಗಿದ್ದರೆ, ಆತನು ಹೊಂದಿದ ಪದ ಅಥವಾ ನೇಮಕಾತಿಯು ಮುಕ್ತಾಯಗೊಂಡಲ್ಲಿ, ಆತನ ಸದಸ್ಯತ್ವವು ಕೊನೆಗೊಳ್ಳತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತಿನ ಅಧಿಕಾರೇತರ ಸದಸ್ಯನು ರಾಜೀನಾಮೆಯನ್ನು ನೀಡಿದ್ದಲ್ಲಿ ಅಥವಾ ಅಸ್ವಸ್ಥ ಚಿತ್ತನಾಗಿದ್ದರೆ ಅಥವಾ ಅವಿಮುಕ್ತ ದಿವಾಳಿಯಾಗಿದ್ದರೆ ಅಥವಾ ನೈತಿಕ ಅದಪತನವುಳ್ಳ ಅಪರಾಧ ಪ್ರಕರಣದಲ್ಲಿ ಅಪರಾಧ ನಿರ್ಣೀತನಾಗಿದ್ದರೆ ಕುಲಪತಿ, ಡೀನ್ ಅಥವಾ ಪ್ರಾಧ್ಯಾಪಕನ ಹೊರತಾಗಿ ವಿಶ್ವವಿದ್ಯಾಲಯದಲ್ಲಿ ಪೂರ್ಣಾವಧಿ ನೇಮಕಾತಿಯನ್ನು ಒಪ್ಪಿಕೊಂಡ ಸದಸ್ಯನಾಗಿದ್ದಲ್ಲಿ ಅಥವಾ ಕಾರ್ಯನಿರ್ವಾಹಕ ಪರಿಷತ್ತಿನ ಅಧ್ಯಕ್ಷರಿಂದ ರಜೆಯ ಒಪ್ಪಿಗೆಯನ್ನು ಪಡೆಯದೆ ಕಾರ್ಯನಿರ್ವಾಹಕ ಪರಿಷತ್ತಿನ ಮೂರು ನಿರಂತರ ಸಭೆಗಳಿಗೆ ಗೈರುಹಾಜರಾದಲ್ಲಿ ಅವನ ಸದಸ್ಯತ್ವವು ನಿಂತುಹೋಗತಕ್ಕದ್ದು.

(3) ಮೇಲಿನ ಉಪಖಂಡಗಳಲ್ಲಿ ಉಪಬಂಧಿಸಲಾದಂತೆ ಕಾರ್ಯನಿರ್ವಾಹಕ ಪರಿಷತ್ತಿನ ಅವರ ಸದಸ್ಯತ್ವವನ್ನು ಈ ಹಿಂದೆಯೇ ಕೊನೆಗೊಳಿಸಿದ್ದ ಹೊರತು, ಅವರು ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾದ ದಿನಾಂಕದಿಂದ ಮೂರು ವರ್ಷಗಳು ಮುಗಿದ ನಂತರ ತಮ್ಮ ಸದಸ್ಯತ್ವವನ್ನು ತ್ಯಜಿಸತಕ್ಕದ್ದು. ಆದರೆ ಅವರು ಸಂದರ್ಭಾನುಸಾರ ಪುನರ್ ನಾಮನಿರ್ದೇಶನಕ್ಕೆ ಅಥವಾ ಪುನರ್ ನೇಮಕಾತಿಗೆ ಅರ್ಹರಾಗಿರತಕ್ಕದ್ದು.

(4) ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಕಾರ್ಯನಿರ್ವಾಹಕ ಪರಿಷತ್ತಿನ ಒಬ್ಬ ಅಧಿಕಾರೇತರ ಸದಸ್ಯನು, ಕಾರ್ಯನಿರ್ವಾಹಕ ಪರಿಷತ್ತಿನ ಅಧ್ಯಕ್ಷನಿಗೆ ಪತ್ರ ಬರೆದು ತನ್ನ ಪದಕ್ಕೆ ರಾಜೀನಾಮೆ ನೀಡಬಹುದು ಮತ್ತು ಅಧ್ಯಕ್ಷನು ಅಂಥ ರಾಜೀನಾಮೆಯನ್ನು ಅಂಗೀಕರಿಸಿದ ಕೂಡಲೇ ಅದು ಜಾರಿಗೆ ಬರತಕ್ಕದ್ದು.

(5) ಕಾರ್ಯನಿರ್ವಾಹಕ ಪರಿಷತ್ತಿನ ಯಾವುದೇ ಖಾಲಿ ಸ್ಥಾನವನ್ನು ಸಂದರ್ಭಾನುಸಾರ ನೇಮಕಾತಿಯ ಮೂಲಕ ಅಥವಾ ನಾಮನಿರ್ದೇಶನದ ಮೂಲಕ ಅದನ್ನು ಮಾಡಲು ಹಕ್ಕು ಹೊಂದಿರುವ ಸಂಬಂಧಪಟ್ಟ ಪ್ರಾಧಿಕಾರವು ಭರ್ತಿ ಮಾಡತಕ್ಕದ್ದು ಮತ್ತು ಖಾಲಿ ಸ್ಥಾನದ ಅವಧಿಯು ಮುಗಿದ ನಂತರ ಅಂಥ ನೇಮಕಾತಿ ಅಥವಾ ನಾಮನಿರ್ದೇಶನವು ಜಾರಿಯಲ್ಲಿರುವುದು ನಿಂತು ಹೋಗತಕ್ಕದ್ದು.

**23. ಕಾರ್ಯನಿರ್ವಾಹಕ ಪರಿಷತ್ತಿನ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಕಾರ್ಯನಿರ್ವಾಹಕ ಪರಿಷತ್ತು, ವಿಶ್ವವಿದ್ಯಾನಿಲಯದ ಪ್ರಧಾನ ಕಾರ್ಯನಿರ್ವಾಹಕ ನಿಕಾಯವಾಗತಕ್ಕದ್ದು. ಕಾರ್ಯನಿರ್ವಾಹಕ ಪರಿಷತ್ತು ವಿಶ್ವವಿದ್ಯಾನಿಲಯದ ವ್ಯವಹಾರಗಳ ನಿರ್ವಹಣೆಯ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ಕ್ರಮಬದ್ಧ ಪ್ರಕಾರ್ಯ ನಿರ್ವಹಣೆಗೆ ಹೊಣೆಯಾಗಿರತಕ್ಕದ್ದು.

(2) ಹಿಂದೆ ಹೇಳಿದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಕಾರ್ಯನಿರ್ವಾಹಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:–

(i) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಸ್ವತ್ತುಗಳನ್ನು ಸ್ವೀಕರಿಸುವುದು, ಆರ್ಜಿಸುವುದು, ಧಾರಣ ಮಾಡುವುದು, ನಿಯಂತ್ರಿಸುವುದು, ಆಡಳಿತ ನಡೆಸುವುದು, ನಿರ್ವಹಿಸುವುದು ಮತ್ತು ವಿನಿಯಮಿಸುವುದು ಹಾಗೂ ಆ ಉದ್ದೇಶಕ್ಕಾಗಿ ಅದು ಅವಶ್ಯಕ ಮತ್ತು ಸೂಕ್ತವೆಂದು ಭಾವಿಸಬಹುದಾದ ಅಂಥ ಏಜಂಟರನ್ನು ನೇಮಕ ಮಾಡುವುದು;

(ii) ವಿಶ್ವವಿದ್ಯಾನಿಲಯದ ಸ್ವತ್ತುಗಳು ಮತ್ತು ನಿಧಿಗಳ ಸೂಕ್ತ ದಾಖಲೆಗಳನ್ನು ನಿರ್ವಹಿಸುವಂತೆ ಮಾಡುವುದು ಮತ್ತು ರಾಜ್ಯ ಸರ್ಕಾರಕ್ಕೆ ಅವುಗಳ ಮೇಲೆ ಶಿಫಾರಸುಗಳನ್ನು ಮಾಡುವ ಮೊದಲು ಹಣಕಾಸು ಸಮಿತಿಯು ಮಂಡಿಸಿದಂತೆ, ಕಳೆದ ವರ್ಷಕ್ಕಾಗಿ ಅದರ ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನಾ ವರದಿಯನ್ನು ಹಾಗೂ ಮುಂಬರುವ ವರ್ಷಕ್ಕೆ ಅದರ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸುವುದು:

ಪರಂತು, ಕಾರ್ಯನಿರ್ವಾಹಕ ಪರಿಷತ್ತು, ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಒಂದು ವರ್ಷದೊಳಗಾಗಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂತೆ ಸಾರ್ವಜನಿಕ ಹಣಕಾಸು ವ್ಯವಸ್ಥಾಪನಾ ವ್ಯವಸ್ಥೆಯನ್ನು (PFMS) ಅಳವಡಿಸಿಕೊಳ್ಳುವಂತೆ ಮಾಡತಕ್ಕದ್ದು.

(iii) ವಿಶ್ವವಿದ್ಯಾನಿಲಯದ ಪರವಾಗಿ ಒಪ್ಪಂದಗಳನ್ನು ಮಾಡಿಕೊಳ್ಳುವುದು, ಮಾರ್ಪಡಿಸುವುದು ಮತ್ತು ರದ್ದುಗೊಳಿಸುವುದು;

(iv) ವಿಶ್ವವಿದ್ಯಾನಿಲಯವು ಸ್ಥಾಪಿಸಿದ ಅಥವಾ ನಿರ್ವಹಿಸುತ್ತಿರುವ ಕಾಲೇಜುಗಳು, ವಿದ್ಯಾರ್ಥಿನಿಲಯಗಳು, ಗ್ರಂಥಾಲಯಗಳು, ಪ್ರಯೋಗ ಶಾಲೆಗಳು, ವಸ್ತು ಸಂಗ್ರಹಾಲಯಗಳು ಮತ್ತು ಇತರ ಸಂಸ್ಥೆಗಳ ಆಡಳಿತ ಮತ್ತು ನಿಯಂತ್ರಣ ಕೈಗೊಳ್ಳುವುದು;

(v) ಕ್ಯಾಂಪಸ್‌ನೊಳಗೆ ಹಾಗೂ ಅದರ ಅನೆಕ್ಸ್‌ಗಳೊಳಗೆ ಮತ್ತು ಎಲ್ಲಿಯಾದರೂ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತನ್ನು ಗುರುತಿಸುವುದು, ವಿನಿಯಮಿಸುವುದು, ಮೇಲ್ವಿಚಾರಣೆ ಮಾಡುವುದು ಮತ್ತು ನಿಯಂತ್ರಿಸುವುದು ಹಾಗೂ ಅವರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಉತ್ತೇಜನ ನೀಡಲು ವ್ಯವಸ್ಥೆ ಮಾಡುವುದು;

(vi) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸುಗಳನ್ನಾಧರಿಸಿ ಮತ್ತು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಉಪಬಂಧಿಸಬಹುದಾದಂತೆ ಗೌರವ ಅಥವಾ ವಿಶ್ರಾಂತ ಮಹೋಪಾಧ್ಯಾಯ (ಇಮೆರಿಟಿಸ್) ಅಥವಾ ಹಂಗಾಮಿ ಪ್ರಾಧ್ಯಾಪಕರುಗಳನ್ನು ಒಳಗೊಂಡಂತೆ ಪ್ರಾಧ್ಯಾಪಕರು ಅಥವಾ ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರಂಥ ಬೋಧಕ ಮತ್ತು ವಿದ್ಯಾವಿಷಯಕ ಹುದ್ದೆಗಳನ್ನು ಮತ್ತು ಯಾವುವೇ ಇತರ ಹುದ್ದೆಗಳನ್ನು ಸೃಜಿಸುವುದು ಹಾಗೂ ಅಂಥ ಹುದ್ದೆಗಳ ಸಂಖ್ಯೆಯನ್ನು ನಿರ್ಧರಿಸುವುದು, ಅವರ ಕರ್ತವ್ಯಗಳು ಮತ್ತು ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು ಮತ್ತು ಅವಶ್ಯವಿದ್ದಂತೆ ಮತ್ತು ಅವಶ್ಯವಿದ್ದಾಗಲೆಲ್ಲಾ ಅವರನ್ನು ನೇಮಿಸಿಕೊಳ್ಳಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು;

(vii) ರಾಜ್ಯ ಸರ್ಕಾರದ ಅನುಮೋದನೆಗೆ ಒಳಪಟ್ಟು, ಆಡಳಿತಾತ್ಮಕ, ಲಿಪಿಕ, ಇತರ ಅವಶ್ಯಕ ಹುದ್ದೆಗಳನ್ನು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಉಪಬಂಧಿಸಬಹುದಾದಂಥ ರೀತಿಯಲ್ಲಿ ಸೃಜಿಸುವುದು ಮತ್ತು ಅವುಗಳಿಗೆ ನೇಮಕಾತಿಗಳನ್ನು ಮಾಡುವುದು;

(viii) ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಫೆಲೋಶಿಪ್‌ಗಳು, ಸಂಚಾರಿ ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು;

(ix) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಕ್ಯಾಂಪಸ್‌ನ ಒಳಗೆ ಮತ್ತು ಹೊರಗೆ ಎಲ್ಲಾ ಪ್ರವರ್ಗಗಳ ಬೋಧಕರು, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ವಿನಿಯಮಿಸುವುದು ಮತ್ತು ಜಾರಿಗೊಳಿಸುವುದು;

(x) ಪಾಠ (ಟ್ಯೂಷನ್), ಸಂಶೋಧನೆ, ಪರೀಕ್ಷೆ, ತಪಾಸಣೆ ಮತ್ತು ಇತರ ಕಾರ್ಯಗಳ ಸಂಬಂಧದಲ್ಲಿ, ಪರಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಶುಲ್ಕ ಸ್ವರೂಪವನ್ನು ಕಾಲಕಾಲಕ್ಕೆ ವಿಧಿಸುವುದು ಮತ್ತು ಪರಿಷ್ಕರಿಸುವುದು;

(xi) ಆರ್ಡಿನೆನ್ಸುಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಪರೀಕ್ಷೆಗಳನ್ನು ನಡೆಸುವುದು;

(xii) ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಪರೀಕ್ಷಕರು ಮತ್ತು ಮಾಡರೇಟರುಗಳನ್ನು ನೇಮಕಮಾಡುವುದು ಮತ್ತು ಅವಶ್ಯವೆನಿಸಿದರೆ ಅವರನ್ನು ಬದಲಾಯಿಸುವುದು ಅಥವಾ ತೆಗೆದುಹಾಕುವುದು ಹಾಗೂ ಅವರ ಫೀಜುಗಳು, ಉಪಲಬ್ಧಿಗಳು ಮತ್ತು ಪ್ರವಾಸ ಮತ್ತು ಇತರ ಭತ್ಯೆಗಳನ್ನು ಸಹ ನಿಗದಿಪಡಿಸುವುದು;

(xiii) ಗೌರವ ಪದವಿಗಳು, ಬಿರುದುಗಳು ಅಥವಾ ಇತರೆ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದಕ್ಕೆ ಸಂಬಂಧಿಸಿದಂತೆ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸುಗಳನ್ನು ಪರಿಗಣಿಸುವುದು ಮತ್ತು ಅದರ ತೀರ್ಮಾನವನ್ನು ಕುಲಾಧಿಪತಿಗೆ ಕಳುಹಿಸುವುದು;

(xiv) ವಿದ್ಯಾರ್ಥಿಗಳ ತರಬೇತಿ ಮತ್ತು ನಿಯೋಜನೆ, ಪ್ರಕಟಣೆಗಳು ಮತ್ತು ಮಾಹಿತಿ, ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆ, ಬೌದ್ಧಿಕ ಸ್ವತ್ತು ಹಕ್ಕುಗಳ, ಶಿಕ್ಷಣ ಮುಂದುವರಿಕೆ ಮತ್ತು ಇತರ ನಾವಿನ್ಯತಾ ಚಟುವಟಿಕೆಗಳ ಕಾರ್ಯನಿರ್ವಹಣೆಗಾಗಿ ಕೇಂದ್ರಗಳನ್ನು ರಚಿಸುವುದು, ಅವುಗಳ ಆಡಳಿತವನ್ನು ನಡೆಸುವುದು, ಅವುಗಳನ್ನು ನಿರ್ವಹಿಸುವುದು ಮತ್ತು ನಿಯಂತ್ರಿಸುವುದು;

(xv) ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಅಂಥ ತನ್ನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಕುಲಪತಿಗೆ ಪ್ರತ್ಯಾಯೋಜಿಸುವುದು;

(xvi) ವಿಶ್ವವಿದ್ಯಾನಿಲಯಕ್ಕಾಗಿ ಸಾಮಾನ್ಯ ಮುದ್ರೆಯನ್ನು ಆಯ್ಕೆ ಮಾಡುವುದು ಮತ್ತು ಅದರ ಅಭಿರಕ್ಷೆ ಮತ್ತು ಉಪಯೋಗಕ್ಕಾಗಿ ಉಪಬಂಧ ಕಲ್ಪಿಸುವುದು;

(xvii) ವಿಶ್ವವಿದ್ಯಾನಿಲಯದಿಂದ ಅಥವಾ ಅದರ ವಿರುದ್ಧ ಕಾನೂನು ವ್ಯವಹರಣೆ ನಡೆಸಲು ವ್ಯವಸ್ಥೆ ಮಾಡುವುದು;

(xviii) ಪರಿನಿಯಮಗಳನ್ನು, ಆರ್ಡಿನೆನ್ಸ್‌ಗಳನ್ನು ಮತ್ತು ವಿನಿಯಮಗಳನ್ನು ರಚಿಸುವುದು, ಅಧಿನಿಯಮಿತಗೊಳಿಸುವುದು, ಅವುಗಳ ತಿದ್ದುಪಡಿ ಮಾಡುವುದು ಮತ್ತು ನಿರಸನಗೊಳಿಸುವುದು;

(3) ಈ ಅಧಿನಿಯಮ, ಅನುಸೂಚಿ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಮೂಲಕ ತನಗೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವುದು:

ಪರಂತು, (2)ನೇ ಉಪಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಯಾವುದೇ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುವೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ಪ್ರದಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ:

**24. ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳು.–** (1) ಕಾರ್ಯನಿರ್ವಾಹಕ ಪರಿಷತ್ತು ಕಡೇ ಪಕ್ಷ ವರ್ಷದಲ್ಲಿ ನಾಲ್ಕು ಬಾರಿಯಾದರೂ ಸಭೆ ಸೇರತಕ್ಕದ್ದು ಮತ್ತು ಅಂಥ ಸಭೆಗೆ ಹದಿನೈದು ದಿನಗಳಿಗಿಂತ ಕಡಿಮೆ ಇರದಂತೆ ಮುಂಚಿತವಾಗಿ ನೋಟೀಸನ್ನು ನೀಡತಕ್ಕದ್ದು. ಎರಡು ನಿಕಟ ಸಭೆಗಳ /ಅವಧಿಯ ನಡುವಿನ ಸಾಮಾನ್ಯವಾಗಿ ಹದಿನೈದು ವಾರಗಳನ್ನು ಮೀರತಕ್ಕದ್ದಲ್ಲ.

(2) ಕಾರ್ಯನಿರ್ವಾಹಕ ಪರಿಷತ್ತಿನ ಆರು ಜನ ಸದಸ್ಯರು ಅದರ ಯಾವುದೇ ಸಭೆಗೆ ಕೋರಂ ಆಗಿರತಕ್ಕದ್ದು.

(3) ಸದಸ್ಯರ ನಡುವೆ ಅಭಿಪ್ರಾಯಭೇದ ಉಂಟಾದ ಸಂದರ್ಭದಲ್ಲಿ ಬಹುಮತದ ಅಭಿಪ್ರಾಯವು ಮಾನ್ಯತೆ ಪಡೆಯತಕ್ಕದ್ದು.

(4) ಕಾರ್ಯನಿರ್ವಾಹಕ ಪರಿಷತ್ತಿನ ಪ್ರತಿಯೊಬ್ಬ ಸದಸ್ಯರು ಒಂದು ಮತವನ್ನು ಹೊಂದಿರತಕ್ಕದ್ದು ಮತ್ತು ಕಾರ್ಯನಿರ್ವಾಹಕ ಪರಿಷತ್ತು ನಿರ್ಧರಿಸಬೇಕಾಗಿರುವ ಯಾವುದೇ ಪ್ರಶ್ನೆಗೆ ಸಂಬಂಧಿಸಿದಂತೆ ಮತಗಳು ಸಮವಾಗಿ ಬಂದಿದ್ದರೆ ಕಾರ್ಯನಿರ್ವಾಹಕ ಪರಿಷತ್ತಿನ ಅಧ್ಯಕ್ಷನು ಅಥವಾ ಸಂದರ್ಭಾನುಸಾರವಾಗಿ ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಸದಸ್ಯನು ಹೆಚ್ಚುವರಿಯಾಗಿ ಒಂದು ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(5) ಕಾರ್ಯನಿರ್ವಾಹಕ ಪರಿಷತ್ತಿನ ಪ್ರತಿಯೊಂದು ಸಭೆಗೆ ಕುಲಪತಿಯು ಅಧ್ಯಕ್ಷತೆಯನ್ನು ವಹಿಸತಕ್ಕದ್ದು ಮತ್ತು ಆತನ ಗೈರುಹಾಜರಿಯಲ್ಲಿ, ಹಾಜರಿರುವ ಸದಸ್ಯರು ಆ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸುವುದಕ್ಕಾಗಿ ಆಯ್ಕೆ ಮಾಡಿದ ಒಬ್ಬ ಸದಸ್ಯನು ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

(6) ಕಾರ್ಯನಿರ್ವಾಹಕ ಪರಿಷತ್ತು ತುರ್ತು ಕ್ರಮ ಕೈಗೊಳ್ಳುವ ಅಗತ್ಯತೆ ಉಂಟಾದರೆ, ಕಾರ್ಯನಿವಾಹಕ ಪರಿಷತ್ತಿನ ಸದಸ್ಯರಿಗೆ ಪತ್ರಗಳನ್ನು ಪರಿಚಲನೆ ಮಾಡುವ ಮೂಲಕ ಕಾರ್ಯಕಲಾಪವನ್ನು ನಡೆಸಲು ಕುಲಪತಿಯು ಅನುಮತಿಯನ್ನು ನೀಡಬಹುದು. ಕೈಗೊಳ್ಳಲು ಉದ್ದೇಶಿಸಿದ ಕ್ರಮವನ್ನು, ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರ ಬಹುಮತದ ಮೂಲಕ ಒಪ್ಪಿಗೆ ದೊರೆತ ಹೊರತು ಕೈಗೊಳ್ಳತಕ್ಕದ್ದಲ್ಲ. ಹಾಗೆ ಕೈಗೊಂಡ ಕ್ರಮವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಎಲ್ಲ ಸದಸ್ಯರಿಗೆ ಕೂಡಲೇ ತಿಳಿಸತಕ್ಕದ್ದು. ಸ್ಥಿರೀಕರಣಕ್ಕಾಗಿ ಕಾಗದಪತ್ರಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು.

**25. ವಿದ್ಯಾವಿಷಯಕ ಪರಿಷತ್ತು.–** (1) ವಿದ್ಯಾವಿಷಯಕ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಶೈಕ್ಷಣಿಕ ನಿಕಾಯಯಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಸಂಯೋಜನೆಯನ್ನು ಒಳಗೊಂಡಿರತಕ್ಕದ್ದು, ಎಂದರೆ:–

| | | | |
|---|---|---|---|
| (ಎ) | ಕುಲಪತಿ | – | ಅಧ್ಯಕ್ಷ |
| (ಬಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ | – | ಸದಸ್ಯ |

| | | | |
|---|---|---|---|
| | ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ಆತನ ನಾಮನಿರ್ದೇಶಿತ | | |
| (ಸಿ) | ಕುಲಾಧಿಪತಿಯವರು ಮೂರು ವರ್ಷಗಳ ಅವಧಿಗಾಗಿ ನಾಮನಿರ್ದೇಶಿಸಿದ, ಸಂಶೋಧನಾ ಮತ್ತು ಅಭಿವೃದ್ಧಿ, ಉದ್ಯಮ, ವಾಣಿಜ್ಯ, ಬ್ಯಾಂಕಿಂಗ್ ಇವುಗಳಲ್ಲಿ ಡಾಕ್ಟೋರಲ್ ಪದವಿಯನ್ನು ಹೊಂದಿರುವ ಇಬ್ಬರು ಶ್ರೇಷ್ಠ ಮತ್ತು ಅನುಭವಿ ವ್ಯಕ್ತಿಗಳು. | – | ಸದಸ್ಯರು |
| (ಡಿ) | ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಐವರು ವ್ಯಕ್ತಿಗಳು, ಅವರಲ್ಲಿ ಇಬ್ಬರು ನಿವೃತ್ತ ಕುಲಪತಿಗಳು/ಪ್ರಾಧ್ಯಾಪಕರು ಹಾಗೂ ಸಂಶೋಧನಾ ಮತ್ತು ಅಭಿವೃದ್ಧಿ, ಉದ್ಯಮ, ಬ್ಯಾಂಕಿಂಗ್ ಇವುಗಳಲ್ಲಿ ಡಾಕ್ಟೋರಲ್ ಪದವಿಯನ್ನು ಹೊಂದಿರುವ ಮೂವರು ವ್ಯಕ್ತಿಗಳು. ಅವರಲ್ಲಿ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡಗಳಿಗೆ ಸೇರಿದ ಒಬ್ಬರು, ಹಿಂದುಳಿದ ವರ್ಗಗಳಿಗೆ/ಅಲ್ಪಸಂಖ್ಯಾತರುಗಳಿಗೆ ಸೇರಿದ ಒಬ್ಬರು ಇರತಕ್ಕದ್ದು ಮತ್ತು ಉಳಿದ ಮೂವರು ಸಾಮಾನ್ಯ ವರ್ಗಕ್ಕೆ ಸೇರಿದ್ದು, ಅವರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರತಕ್ಕದ್ದು. | – | ಸದಸ್ಯರು |
| (ಇ) | ವಿಶ್ವವಿದ್ಯಾಲಯದ ಡೀನ್ (ಡೀನರುಗಳು) | – | ಸದಸ್ಯ |
| (ಎಫ್) | ಕುಲಪತಿಯವರು ಸರದಿಯ ಮೇರೆಗೆ ಜೇಷ್ಠತೆ ಆಧಾರದಲ್ಲಿ ಒಂದು ವರ್ಷದ ಅವಧಿಗಾಗಿ ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಇಬ್ಬರು ಪ್ರಾಧ್ಯಾಪಕರು, ಅವರಲ್ಲಿ ಒಬ್ಬರು ಆದ್ಯತಾನುಸಾರ ಮಹಿಳೆಯಾಗಿರತಕ್ಕದ್ದು: | – | ಸದಸ್ಯರು |
| | ಪರಂತು, ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಯಾವುದೇ ಸಾಮರ್ಥ್ಯದಲ್ಲಿ ಉದ್ಯೋಗದಲ್ಲಿರುವ ಯಾವೊಬ್ಬ ವ್ಯಕ್ತಿಯು ಈ ಪ್ರಕರಣದ (ಸಿ) ಮತ್ತು (ಡಿ) ಖಂಡಗಳ ಅಡಿಯಲ್ಲಿ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ. | | |
| (ಜಿ) | ವಿಶ್ವವಿದ್ಯಾಲಯ ಗ್ರಂಥಪಾಲಕರು | – | ಸದಸ್ಯ |
| (ಹೆಚ್) | ವಿದ್ಯಾರ್ಥಿ ಕಲ್ಯಾಣದ ಗ್ರಂಥಪಾಲಕರು | – | ಸದಸ್ಯ |
| (ಐ) | ತರಬೇತಿ ಮತ್ತು ಉದ್ಯೋಗದಾಯಿ ಕೇಂದ್ರದ ನಿರ್ದೇಶಕರು | – | ಸದಸ್ಯ |
| (ಜೆ) | ದೈಹಿಕ ಶಿಕ್ಷಣ ನಿರ್ದೇಶಕರು | – | ಸದಸ್ಯ |
| (ಕೆ) | ಪರೀಕ್ಷೆಗಳ ನಿಯಂತ್ರಕರು | – | ಸದಸ್ಯ |
| (ಎಲ್) | ಕುಲಸಚಿವರು | – | ಕಾರ್ಯದರ್ಶಿ |
| (ಎಂ) | ಹಣಕಾಸು ಅಧಿಕಾರಿ | – | ಆಹ್ವಾನಿತ |

(2) ಒಂದು ಶೈಕ್ಷಣಿಕ ವರ್ಷದಲ್ಲಿ ವಿದ್ಯಾವಿಷಯಕ ಪರಿಷತ್ತು ಸಾಮಾನ್ಯವಾಗಿ ಮೂರು ಬಾರಿಯಾದರೂ ಸಭೆ ಸೇರತಕ್ಕದ್ದು ಮತ್ತು ಎರಡು ನಿಕಟ ಸಭೆಗಳ ನಡುವಿನ ಅವಧಿಯು ಇಪ್ಪತ್ತು ವಾರಗಳನ್ನು ಮೀರತಕ್ಕದ್ದಲ್ಲ:

ಪರಂತು, ಕುಲಪತಿಯು ವಿದ್ಯಾವಿಷಯಕ ಪರಿಷತ್ತಿನ ಪರವಾಗಿ ನಿರ್ಧರಿಸಬೇಕಾದ ಯಾವುದೇ ತುರ್ತು ವಿಷಯಕ್ಕೆ ಸಂಬಂಧಿಸಿದಂತೆ ತಾತ್ಕಾಲಿಕ (ಅಡ್-ಹಾಕ್) ಸಮಿತಿಯನ್ನು ರಚಿಸಬಹುದು:

ಮತ್ತು ಪರಂತು, ಅಂಥ ತಾತ್ಕಾಲಿಕ ಸಮಿತಿಯು ತೆಗೆದುಕೊಂಡ ತೀರ್ಮಾನಗಳನ್ನು ಒಳಗೊಂಡ ಸಭೆಗಳ ನಡವಳಿಗಳ ಸ್ಥಿರೀಕರಣಕ್ಕಾಗಿ ವಿದ್ಯಾವಿಷಯಕ ಪರಿಷತ್ತಿನ ಮುಂದಿನ ನಿಕಟ ಸಭೆಗಳ ಮುಂದಿಡತಕ್ಕದ್ದು.

(3) ತುರ್ತು ಸಂದರ್ಭದಲ್ಲಿ, ಕುಲಪತಿಯು ವಿದ್ಯಾವಿಷಯಕ ಪರಿಷತ್ತಿನ ವಿಶೇಷ ಸಭೆಗಳನ್ನು ಕರೆಯಬಹುದು.

(4) ವಿದ್ಯಾವಿಷಯಕ ಪರಿಷತ್ತಿನ ಮತ್ತು ತಾತ್ಕಾಲಿಕ (ಅಡ್-ಹಾಕ್) ಸಮಿತಿಯ ಸಭೆಗಳನ್ನು ನಡೆಸುವ ಕಾರ್ಯವಿಧಾನ ಮತ್ತು ನಿಯಮಗಳನ್ನು ಪರಿನಿಯಮಗಳ ಮೂಲಕ ಉಪಬಂಧಿಸಬಹುದು.

(5) ಕುಲಾಧಿಪತಿ ಅಥವಾ ರಾಜ್ಯ ಸರ್ಕಾರವು, ನಿರ್ದಿಷ್ಟಪಡಿಸಬಹುದಾದ ಅಂಥ ಪರಿಶೀಲನಾಂಶಗಳನ್ನು ಕುರಿತು ಚರ್ಚಿಸಲು ವಿದ್ಯಾವಿಷಯಕ ಪರಿಷತ್ತಿನ ಸಭೆಗಳನ್ನು ನಡೆಸುವಂತೆ ವಿಶ್ವವಿದ್ಯಾಲಯಕ್ಕೆ ಆದೇಶದ ಮೂಲಕ ನಿರ್ದೇಶಿಸಬಹುದು ಮತ್ತು ಕುಲಪತಿಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು.

**26. ವಿದ್ಯಾವಿಷಯಕ ಪರಿಷತ್ತಿನ ಅಧಿಕಾರಗಳು.-** (1) ವಿದ್ಯಾವಿಷಯಕ ಪರಿಷತ್ತು, ವಿಶ್ವವಿದ್ಯಾನಿಲಯದ ಬೋಧನೆ, ಶಿಕ್ಷಣ ಮತ್ತು ಪರೀಕ್ಷೆಗಳ ನಿಯಂತ್ರಣ ಹಾಗೂ ಸಾಮಾನ್ಯ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ಅದು ವಿದ್ಯಾವಿಷಯಕ ವಿಷಯಗಳ ಮೇಲೆ ವಿಶ್ವವಿದ್ಯಾನಿಲಯಕ್ಕೆ ಸಾಮಾನ್ಯವಾಗಿ ಸಲಹೆ ನೀಡುವ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(2) ಹಿಂದೆ ಹೇಳಿದವುಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಹಾಗೂ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅದರ ಅಡಿಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ವಿದ್ಯಾವಿಷಯಕ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ಹಾಗೂ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(ಎ) ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಆರ್ಡಿನೆನ್ಸ್‌ಗಳನ್ನು ಹೊರಡಿಸಲು ಪ್ರಸ್ತಾವನೆಗಳನ್ನು ಸಲ್ಲಿಸುವುದು;

(ಬಿ) ಅಧ್ಯಯನ ವ್ಯಾಸಂಗ ಕ್ರಮಗಳು, ಅನುಮೋದಿತ ವ್ಯಾಸಂಗ ಕ್ರಮಗಳಿಂದ ವಿನಾಯಿತಿಗಳನ್ನು ನೀಡುವುದು, ಯಾವ ಷರತ್ತುಗಳಿಗೆ ಒಳಪಟ್ಟು ವಿದ್ಯಾರ್ಥಿಗಳಿಗೆ ಪ್ರವೇಶ ಕೊಡತಕ್ಕದ್ದೋ ಅಂಥ ಷರತ್ತುಗಳನ್ನು ಒಳಗೊಂಡಂತೆ ಪರೀಕ್ಷಾ ಸ್ಕೀಂಗಳ, ತತ್ಸಮಾನವಾದ ಪರೀಕ್ಷೆಗಳ, ಪರೀಕ್ಷೆಗಳ ಫಲಿತಾಂಶಗಳ ಘೋಷಣೆ ಹಾಗೂ ಪದವಿಗಳ, ಡಿಪ್ಲೊಮಾಗಳ, ಪ್ರಮಾಣಪತ್ರಗಳ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಸಂಬಂಧದಲ್ಲಿ, ಅವುಗಳಿಗೆ ಆರ್ಡಿನೆನ್ಸ್‌ಗಳಲ್ಲಿ ಒಳಗೊಳ್ಳದಿರುವಷ್ಟರಮಟ್ಟಿಗೆ, ವಿನಿಯಮಗಳನ್ನು ರಚಿಸುವುದು;

(ಸಿ) ಸಂಶೋಧನಾ ಮತ್ತು ವಿಶೇಷ ಅಧ್ಯಯನಗಳ ವಿಭಾಗಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(ಡಿ) ಕಾಲೇಜುಗಳಲ್ಲಿ ಮತ್ತು ಮನ್ನಣೆ ಪಡೆದ ಸಂಸ್ಥೆಗಳಲ್ಲಿ, ಅಧ್ಯಯನ ಹಾಗೂ ಬೋಧನೆ-ಕಲಿಕೆಯ ಸಮನ್ವಯತೆಗಾಗಿ ವ್ಯವಸ್ಥೆ ಮಾಡುವುದು;

(ಇ) ವಿಶ್ವವಿದ್ಯಾಲಯದ ಒಳಗೆ, ಅದರ ಸಂಯೋಜಿತ ಕಾಲೇಜುಗಳಲ್ಲಿ ಮತ್ತು ಮನ್ನಣೆ ನೀಡಲಾದ ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಇತರ ವಿಶೇಷ ಅಧ್ಯಯನಗಳಿಗೆ ಹಾಗೂ ಕಾರ್ಯಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಲು ಸ್ಕೀಂಗಳನ್ನು ರೂಪಿಸುವುದು ಮತ್ತು ಇದನ್ನು ಕೈಗೊಳ್ಳಲು ಸೂಕ್ತ ಉಪಬಂಧಗಳನ್ನು ಕಲ್ಪಿಸುವುದು ಅಷ್ಟೇ ಅಲ್ಲದೆ ಅದರ ಫಲಿತಾಂಶವನ್ನು ಪ್ರಸಾರ ಮಾಡುವುದು;

(ಎಫ್) ವ್ಯಾಸಂಗ ವಿಭಾಗಗಳಿಗೆ ವಿಷಯಗಳನ್ನು ಹಂಚಿಕೆ ಮಾಡಲು ಮತ್ತು ವ್ಯಾಸಂಗ ವಿಭಾಗಗಳಿಗೆ ತನ್ನದೇ ಆದ ಸದಸ್ಯರುಗಳನ್ನು ನೇಮಿಸುವುದಕ್ಕೆ ಪ್ರಸ್ತಾವನೆಗಳನ್ನು ಮಾಡುವುದು;

(ಜಿ) ವಿಶ್ವವಿದ್ಯಾಲಯಕ್ಕೆ ಅಗತ್ಯವಿರುವ ಪ್ರಾಧ್ಯಾಪಕರುಗಳ, ಸಹ ಪ್ರಾಧ್ಯಾಪಕರುಗಳ ಅಥವಾ ಸಹಾಯಕ ಪ್ರಾಧ್ಯಾಪಕರುಗಳ ಅಥವಾ ಉಪನ್ಯಾಸಕರ ಮತ್ತು ಇತರ ಬೋಧಕರ ಹುದ್ದೆಗಳನ್ನು ಸ್ಥಾಪನೆ ಮಾಡುವುದಕ್ಕಾಗಿ ಮತ್ತು ಅಂಥ ಹುದ್ದೆಗಳ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(ಎಚ್) ಫೆಲೋಷಿಪ್‌ಗಳು, ಸಂಚಾರಿ ಫೆಲೋಷಿಪ್‌ಗಳು, ವಿದ್ಯಾರ್ಥಿ ವೇತನ, ಶಿಷ್ಯ ವೇತನ ಅಥವಾ ಪ್ರವೇತನಗಳನ್ನು ಸ್ಥಾಪಿಸಿಸುವುದಕ್ಕಾಗಿ ಮತ್ತು ಅವುಗಳನ್ನು ನೀಡುವುದಕ್ಕಾಗಿ ಪ್ರಸ್ತಾವನೆಗಳನ್ನು ಮಾಡುವುದು;

(ಐ) ಸಮಗ್ರವಾದ (broad) ಶೈಕ್ಷಣಿಕ ನೀತಿಗಳನ್ನು ಮತ್ತು ವಿಶ್ವವಿದ್ಯಾಲಯದ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪರಿಶೀಲಿಸಲು ಹಾಗೂ ಅವುಗಳನ್ನು ಮತ್ತಷ್ಟು ಸುಧಾರಣೆಗೊಳಿಸಲು ಮತ್ತು ಅಭಿವೃದ್ಧಿಪಡಿಸಲು ಕ್ರಮಗಳನ್ನು ಸೂಚಿಸುವುದು;

(ಜೆ) ಯಾವುದೇ ವಿನಿಯಮವನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು; ಮತ್ತು

(ಕೆ) ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳಿಗೆ ಸದಸ್ಯರುಗಳನ್ನು ನಾಮನಿರ್ದೇಶಿಸುವುದು ಮತ್ತು ಈ ಅಧಿನಿಯಮ ಅಥವಾ ಅದರ ಅಡಿಯಲ್ಲಿ ರಚಿಸಿದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳಿಂದ ಅದಕ್ಕೆ ಪ್ರದಾನ ಮಾಡಬಹುದಾದ ಅಂಥ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅದರ ಮೇಲೆ ವಿಧಿಸಬಹುದಾದ ಅಂಥ ಇತರ ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು.

**27. ಹಣಕಾಸು ಸಮಿತಿ.-** (1) ವಿಶ್ವವಿದ್ಯಾಲಯವು ಈ ಮುಂದಿನ ಸದಸ್ಯರನ್ನು ಒಳಗೊಂಡ ಒಂದು ಹಣಕಾಸು ಸಮಿತಿಯನ್ನು ಹೊಂದಿರತಕ್ಕದ್ದು, ಎಂದರೆ:-

| | | | |
|---|---|---|---|
| (ಎ) | ಕುಲಪತಿ | - | ಅಧ್ಯಕ್ಷ |
| (ಬಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಥವಾ ಉಪಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ | - | ಸದಸ್ಯರು |
| (ಸಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಅಥವಾ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆತನ ನಾಮನಿರ್ದೇಶಿತ | - | ಸದಸ್ಯರು |
| (ಡಿ) | ಕುಲಪತಿಯು ಸಲ್ಲಿಸಿದ ಪಟ್ಟಿಯಿಂದ ಕುಲಾಧಿಪತಿಯು ನಾಮನಿರ್ದೇಶಿಸಿದ | - | ಸದಸ್ಯರು |

ವಿಶ್ವವಿದ್ಯಾನಿಲಯದ ಹಣಕಾಸು ಅಥವಾ ಲೆಕ್ಕಪತ್ರಗಳ ಸೇವೆಯಲ್ಲಿರುವ ಒಬ್ಬ ಪರಿಣಿತ

(ಇ) ಕುಲಪತಿಯು ನಾಮನಿರ್ದೇಶಿಸಿದ ಕಾರ್ಯನಿರ್ವಾಹಕ ಪರಿಷತ್ತಿನ ಒಬ್ಬ ಸದಸ್ಯ – ಸದಸ್ಯರು

(ಎಫ್) ಕುಲಸಚಿವರು – ಸದಸ್ಯರು

(ಜಿ) ಹಣಕಾಸು ಅಧಿಕಾರಿ – ಕಾರ್ಯದರ್ಶಿ

(2) ವಿಶ್ವವಿದ್ಯಾಲಯದ ಹಣಕಾಸು ಸುಸ್ಥಿತಿ ಮತ್ತು ಶಿಸ್ತನ್ನು ನಿರ್ವಹಿಸುವ ಜವಾಬ್ದಾರಿಯು ಹಣಕಾಸು ಸಮಿತಿಯದ್ದಾಗಿರತಕ್ಕದ್ದು.

(3) ಹಣಕಾಸು ಸಮಿತಿಯು, ಶೈಕ್ಷಣಿಕ ವರ್ಷದಲ್ಲಿ ಕನಿಷ್ಠಪಕ್ಷ ನಾಲ್ಕು ಬಾರಿ ಸಭೆ ಸೇರತಕ್ಕದ್ದು ಮತ್ತು ಎರಡು ನಿರಂತರ ಸಭೆಗಳ ನಡುವಿನ ಅವಧಿಯು ಹದಿನೈದು ವಾರಗಳನ್ನು ಮೀರತಕ್ಕದ್ದಲ್ಲ.

(4) ಹಣಕಾಸು ಸಮಿತಿಯು ಈ ಮುಂದಿನ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ವಿಶ್ವವಿದ್ಯಾನಿಲಯದ ವಾರ್ಷಿಕ ಬಜೆಟ್ ಅಂದಾಜುಗಳನ್ನು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸುವುದು, ವಾರ್ಷಿಕ ಲೆಕ್ಕಪರಿಶೋಧನೆಯ ವರದಿಗಳನ್ನು ಪುನರವಲೋಕಿಸುವುದು ಮತ್ತು ಅದರ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಬಿ) ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳ ಸೃಜನೆ, ಮೇಲ್ದರ್ಜೆಗೇರಿಸುವುದು ಮತ್ತು ರದ್ದಿಯಾತಿಯೂ ಒಳಗೊಂಡಂತೆ, ಬಜೆಟ್‌ನಲ್ಲಿ ಅವಕಾಶವನ್ನು ಒದಗಿಸಿಲ್ಲದ ಮತ್ತು ಬಜೆಟ್‌ನಲ್ಲಿ ಒದಗಿಸಿದ ಮೊಬಲಗಿಗಿಂತ ಹೆಚ್ಚುವರಿ ವೆಚ್ಚವನ್ನು ಒಳಗೊಂಡ ವಿಶ್ವವಿದ್ಯಾನಿಲಯದ ಎಲ್ಲ ಪ್ರಸ್ತಾವಗಳನ್ನು ಪರಿಶೀಲಿಸುವುದು ಮತ್ತು ಅವುಗಳ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಸಿ) ವಿಶ್ವವಿದ್ಯಾನಿಲಯಕ್ಕೆ ನಿಧಿಗಳನ್ನು ಸಂಗ್ರಹಿಸುವುದಕ್ಕಾಗಿ ಪ್ರಾಯೋಗಿಕ ಮತ್ತು ಅನುಷ್ಠಾನಸಾಧ್ಯವಿರುವ ಕಾರ್ಯತಂತ್ರಗಳನ್ನು ಯೋಜಿಸುವುದು ಮತ್ತು ವಿಶ್ವವಿದ್ಯಾನಿಲಯದ ವಶದಲ್ಲಿರುವ ಹೆಚ್ಚುವರಿ ನಿಧಿಗಳ ಹೂಡಿಕೆಗೆ ಸೂಕ್ತ ಯೋಜನೆಗಳನ್ನು ಸಿದ್ಧಪಡಿಸುವುದು ಹಾಗೂ ಅದರ ಮೇಲೆ ಶಿಫಾರಸ್ಸುಗಳನ್ನು ಮಾಡುವುದು;

(ಡಿ) ವಿಶ್ವವಿದ್ಯಾಲಯವು ಭರಿಸಬೇಕಾದ ಪ್ರಸ್ತಾವನೆಗಳುಳ್ಳ ಎಲ್ಲಾ ವೆಚ್ಚಗಳನ್ನು ಪರಿಶೀಲಿಸುವುದು ಮತ್ತು ಅನುಮೋದಿಸುವುದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ (2000ರ ಕರ್ನಾಟಕ ಅಧಿನಿಯಮ 29) ಅಡಿಯಲ್ಲಿ ನಿಯಮಿಸಲಾದ ನಿಯಮಗಳೊಂದಿಗೆ ಕೈಗೊಳ್ಳಲಾಗಿದೆಯೇ ಎಂಬುದನ್ನು ಸಹ ಖಚಿತಪಡಿಸಿಕೊಳ್ಳುವುದು;

(ಇ) ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಇತರ ಪ್ರಕಾರ್ಯಗಳು:

ಪರಂತು, ಮೇಲಿನ ಶಿಫಾರಸುಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗಳಲ್ಲಿ ಅದರ ಪರಿಶೀಲನೆಗಾಗಿ ಮಂಡಿಸತಕ್ಕದ್ದು.

(5) (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಕುಲಪತಿಯು, ತುರ್ತು ಸಂದರ್ಭಗಳಲ್ಲಿ ಮತ್ತು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ಹಣಕಾಸು ಸಮಿತಿಯ ಒಪ್ಪಿಗೆ ಇಲ್ಲದೆ, ಬಜೆಟ್ಟಿನಲ್ಲಿ ಹಣ ಒದಗಿಸಿಲ್ಲದ ಅಥವಾ ಬಜೆಟ್ಟಿನಲ್ಲಿ ಒದಗಿಸಿದ ಹಣಕ್ಕಿಂತ ಹೆಚ್ಚುವರಿಯಾದ ಯಾವುದೇ ಒಂದು ಸಂದರ್ಭದಲ್ಲಿ, ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಮಿತಿಯವರೆಗೆ ಯಾವುದೇ ವೆಚ್ಚವನ್ನು ಭರಿಸಬಹುದು:

ಪರಂತು, ಅಂಥ ವೆಚ್ಚವನ್ನು ಸ್ಥಿರೀಕರಣಕ್ಕಾಗಿ ಹಣಕಾಸು ಸಮಿತಿಯ ಮುಂದಿನ ಸಭೆಯಲ್ಲಿ ಮಂಡಿಸತಕ್ಕದ್ದು:

ಮತ್ತು ಪರಂತು, ಕುಲಪತಿಯವರ ಮೂಲಕ ಆದ ವೆಚ್ಚದ ಭರಿಸುವಿಕೆಯು ತೃಪ್ತಿಕರವಾಗಿಲ್ಲದಿದ್ದಲ್ಲಿ, ಹಣಕಾಸು ಸಮಿತಿಯು ಅದನ್ನು ಕುಲಾಧಿಪತಿಯವರಿಗೆ ಉಲ್ಲೇಖಿಸಬಹುದು, ಈ ವಿಷಯದಲ್ಲಿ ಅವರ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**28. ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿ.-** (1) ರಾಜ್ಯ ಸರ್ಕಾರವು ಕಾಲಬದ್ಧ ವಿಧಾನದಲ್ಲಿ ರಚಿಸಿದ ಅಂಥ ನಿಯಮಗಳಿಗೆ ಒಳಪಟ್ಟು ವಿಶ್ವವಿದ್ಯಾನಿಲಯದ ಸಣ್ಣ ಮತ್ತು ದೊಡ್ಡ ಮೂಲಸೌಕರ್ಯ ಅಭಿವೃದ್ಧಿಯನ್ನು ಮತ್ತು ಖರೀದಿಗಳು/ನಿರ್ವಹಣಾ ಚಟುವಟಿಕೆಗಳನ್ನು (ವಾಹನಗಳ ಖರೀದಿ, ಗ್ಯಾಡ್ಜೆಟ್‌ಗಳು, ಉಪಕರಣಗಳು, ಪೀಠೋಪಕರಣ ಅಥವಾ ಯಾವುದೇ ಇತರ ನಿರ್ವಹಣಾ ಸಾಮಗ್ರಿಗಳು) ದಕ್ಷತೆಯಿಂದ ಕೈಗೊಳ್ಳಲು ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿಯನ್ನು ರಚಿಸತಕ್ಕದ್ದು.

(2) ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕುಲಪತಿ – ಅಧ್ಯಕ್ಷ

(ಬಿ) ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ

ಅಥವಾ ಆತನ ನಾಮನಿರ್ದೇಶಿತ – ಸದಸ್ಯ

(ಸಿ) ವಿಶ್ವವಿದ್ಯಾನಿಲಯವು ಇರುವ ಪ್ರದೇಶದ ಪ್ರಭಾರದಲ್ಲಿರುವ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್ ಅಥವಾ ಆ ಪ್ರದೇಶದ ಕಾರ್ಯಪಾಲಕ ಇಂಜಿನಿಯರ್ ದರ್ಜೆಗೆ ಕಡಿಮೆಯಿಲ್ಲದ ಆತನ ನಾಮನಿರ್ದೇಶಿತ – ಸದಸ್ಯ

(ಡಿ) ಖಾಸಗಿ ವಲಯದಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಒಬ್ಬ ಸುಪ್ರಸಿದ್ಧ ಸಿವಿಲ್ ಇಂಜಿನಿಯರ್ – ಸದಸ್ಯ

(ಇ) ರಾಜ್ಯದ ಮುಖ್ಯ ವಾಸ್ತುಶಿಲ್ಪಿ ಅಥವಾ ಆತನ ನಾಮನಿರ್ದೇಶಿತ – ಸದಸ್ಯ

(ಎಫ್) ಖಾಸಗಿ ವಲಯದಿಂದ ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಒಬ್ಬ ಸುಪ್ರಸಿದ್ಧ ವಾಸ್ತುಶಿಲ್ಪಿ – ಸದಸ್ಯ

(ಜಿ) ಕುಲಸಚಿವ – ಸದಸ್ಯ

(ಎಚ್) ಹಣಕಾಸು ಅಧಿಕಾರಿ – ಸದಸ್ಯ

(ಐ) ವಿಶ್ವವಿದ್ಯಾನಿಲಯದ ಇಂಜಿನಿಯರ್ – ಕಾರ್ಯದರ್ಶಿ

(3) ಪದನಿಮಿತ್ತ ಸದಸ್ಯರುಗಳನ್ನು ಹೊರತುಪಡಿಸಿ, ಸಮಿತಿಯ ಎಲ್ಲಾ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು ಮತ್ತು ಎರಡನೇ ಅವಧಿಯ ಸದಸ್ಯತ್ವಕ್ಕಾಗಿ ಅರ್ಹರಾಗಿರತಕ್ಕದ್ದಲ್ಲ.

(4) ಮೂಲಸೌಕರ್ಯ ಅಭಿವೃದ್ಧಿ ಮತ್ತು ಖರೀದಿ ಸಮಿತಿಯ ಕಾರ್ಯನಿರ್ವಹಣೆಗಾಗಿ ನಿಯಮಗಳು ಮತ್ತು ಕಾರ್ಯವಿಧಾನವು ರಾಜ್ಯ ಸರ್ಕಾರವು ನಿಯಮಗಳ ಮೂಲಕ ನಿಯಮಿಸಿದಂತೆ ಇರತಕ್ಕದ್ದು (ವಿಶ್ವವಿದ್ಯಾನಿಲಯವು ಕೈಗೊಳ್ಳುವ ಕಟ್ಟಡಗಳು, ರಸ್ತೆಗಳು ಅಥವಾ ಯಾವುದೇ ಇತರ ಮೂಲಸೌಕರ್ಯದ ಅಂದಾಜುಗಳನ್ನು ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯ ಗುಣಮಟ್ಟ ದರಗಳಿಗೆ ಹೊಂದಿಕೆಯಾಗುವ ದರಗಳಲ್ಲಿ ಸಿದ್ಧಪಡಿಸತಕ್ಕದ್ದು).

(5) ಸಮಿತಿಯು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 (2000ರ ಕರ್ನಾಟಕ ಅಧಿನಿಯಮ 29) ಮತ್ತು ರಾಜ್ಯ ಸರ್ಕಾರವು ಈ ಸಂಬಂಧದಲ್ಲಿ ಕಾಲಕಾಲಕ್ಕೆ ರಚಿಸುವ ನಿಯಮಗಳಿಗೆ ಒಳಪಡತಕ್ಕದ್ದು.

**29. ಇತರ ಮಂಡಲಿಗಳು, ಸಮಿತಿಗಳು ಮತ್ತು ಪರಿಷತ್ತುಗಳು.**– ವಿಶ್ವವಿದ್ಯಾನಿಲಯವು, ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಮಂಡಲಿಗಳನ್ನು, ಸಮಿತಿಗಳನ್ನು ಮತ್ತು ಪರಿಷತ್ತುಗಳನ್ನು ಸ್ಥಾಪಿಸಬಹುದು.

## ಅಧ್ಯಾಯ V

### ಪರಿನಿಯಮಗಳು, ಆರ್ಡಿನೆನ್ಸ್‌ಗಳು, ವಿನಿಯಮಗಳು ಮತ್ತು ನಿಯಮಗಳು

**30. ಪರಿನಿಯಮಗಳು.**– (1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಪರಿನಿಯಮಗಳು, ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗೆ ಉಪಬಂಧಿಸಬಹುದು, ಎಂದರೆ:–

(i) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಕಾಲಕಾಲಕ್ಕೆ ಘೋಷಿಸಬಹುದಾದ ಅಂಥ ಇತರ ನಿಕಾಯಗಳ ರಚನೆ, ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳು;

(ii) ಮೊದಲಿನ ಸದಸ್ಯರು ಪದದಲ್ಲಿ ಮುಂದುವರಿಯುವುದು ಒಳಗೊಂಡಂತೆ ಸದರಿ ಪ್ರಾಧಿಕಾರಗಳ ಅಥವಾ ನಿಕಾಯಗಳ ಸದಸ್ಯರ ನೇಮಕಾತಿ, ಅವರು ಪದದಲ್ಲಿ ಮುಂದುವರೆಯುವಿಕೆ ಅಥವಾ ಹಿಂದೆ ಪಡೆಯುವುದು ಅಥವಾ ತೆಗೆದು ಹಾಕುವುದು ಮತ್ತು ಸದಸ್ಯರ ಖಾಲಿ ಸ್ಥಾನಗಳನ್ನು ತುಂಬುವುದು ಹಾಗೂ ಪ್ರಾಧಿಕಾರಗಳಿಗೆ ಅಥವಾ ನಿಕಾಯಗಳಿಗೆ ಸಂಬಂಧಪಟ್ಟಂತೆ ಯಾವ ವಿಷಯಗಳಿಗೆ ಉಪಬಂಧಿಸುವುದು ಅವಶ್ಯವಾಗಬಹುದೋ ಅಥವಾ ಅಪೇಕ್ಷಣೀಯವಾಗಬಹುದೋ ಆ ಎಲ್ಲ ಇತರ ವಿಷಯಗಳ ಬಗ್ಗೆ ಉಪಬಂಧಿಸುವುದು;

(iii) ಗೌರವ ಪದವಿಗಳನ್ನು ಪ್ರದಾನ ಮಾಡುವುದು;

(iv) ಪದವಿ ಮತ್ತು ಡಿಪ್ಲೋಮಾಗಳನ್ನು ಪ್ರದಾನ ಮಾಡಲು ಘಟಿಕೋತ್ಸವಗಳನ್ನು ನಡೆಸುವುದು ಮತ್ತು ತುರ್ತು ಸಂದರ್ಭದಲ್ಲಿ ಘಟಿಕೋತ್ಸವಕ್ಕೆ ಮೊದಲು ಪದವಿ ಪ್ರಮಾಣಪತ್ರಗಳನ್ನು ನೀಡುವುದು;

(v) ಪದವಿಗಳ, ಡಿಪ್ಲೋಮಾಗಳ, ಸರ್ಟಿಫಿಕೇಟ್‌ಗಳ ಹಾಗೂ ಇತರ ಶೈಕ್ಷಣಿಕ ಮನ್ನಣೆಗಳನ್ನು ಹಿಂತೆಗೆದುಕೊಳ್ಳುವುದು;

(vi) ವ್ಯಾಸಂಗ ವಿಭಾಗಗಳು, ವಿಭಾಗಗಳು, ವಿದ್ಯಾರ್ಥಿ ನಿಲಯಗಳ ಸ್ಥಾಪನೆ, ನಿರ್ವಹಣೆ ಮತ್ತು ಅವುಗಳನ್ನು ರದ್ದುಪಡಿಸುವುದು;

(vii) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳ ಸ್ಥಾಪನೆ;

(viii) ವಿಶ್ವವಿದ್ಯಾನಿಲಯ ವಿಭಾಗಗಳು ಮತ್ತು ಘಟಕ ಕಾಲೇಜುಗಳ ಗೌರವ ಅಥವಾ ವಿಶ್ರಾಂತ ಅಥವಾ ಹಂಗಾಮಿ (adjunct) ಪ್ರಾಧ್ಯಾಪಕರನ್ನೊಳಗೊಂಡ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಉಪನ್ಯಾಸಕರು ಮತ್ತು ಇತರ ಲಿಪಿಕ ಮತ್ತು ಬೋಧಕೇತರ ಹುದ್ದೆಗಳ ಸೃಜನೆ, ಅಮಾನತ್ತು ಅಥವಾ ರದ್ದತಿ;

(ix) ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರ ನೇಮಕಾತಿಯ ವಿಧಾನ:

ಪರಂತು, ವಿಶ್ವವಿದ್ಯಾನಿಲಯ ಅನುದಾನ ಆಯೋಗದ ವೇತನ ಶ್ರೇಣಿಗಳನ್ನು ಪಡೆಯುತ್ತಿರುವವರನ್ನು ಹೊರತುಪಡಿಸಿ, ನೌಕರರ ವೇತನ ಶ್ರೇಣಿಗಳು, ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗುವ ವೇತನ ಶ್ರೇಣಿಗಳಿಗೆ ಅನುಗುಣವಾಗಿರತಕ್ಕದ್ದು.

(x) ಮರಣ ಶಾಸನ ಮೂಲಕದ ಸ್ವತ್ತಿನ, ದೇಣಿಗೆಗಳ ಮತ್ತು ದತ್ತಿಗಳ ಸ್ವೀಕಾರ ಮತ್ತು ನಿರ್ವಹಣೆ;

(xi) ವಿಶ್ವವಿದ್ಯಾನಿಲಯದಲ್ಲಿ ಪ್ರವೇಶ ಮತ್ತು ಶುಲ್ಕ ಸ್ವರೂಪ ಹಾಗೂ ವಿಶ್ವವಿದ್ಯಾನಿಲಯದ ಪರೀಕ್ಷೆಗಳು, ಪದವಿಗಳು ಮತ್ತು ಡಿಪ್ಲೋಮಾಗಳ ಪ್ರವೇಶಗಳಿಗಾಗಿ ನಿಯಂತ್ರಣ;

(xii) ವಿಶ್ವವಿದ್ಯಾನಿಲಯವು ಸಲ್ಲಿಸಿದ ಸೇವೆಗಳಿಗಾಗಿ ವಿಧಿಸಬೇಕಾದ ಶುಲ್ಕಗಳು;

(xiii) ವಿಶ್ವವಿದ್ಯಾನಿಲಯದ ಪ್ರಾಯೋಜಿತ ಸಂಶೋಧನೆ, ಸಮಾಲೋಚನೆ, ಪೇಟೆಂಟುಗಳು ಮತ್ತು ಬೌದ್ಧಿಕ ಸ್ವತ್ತು ಹಕ್ಕುಗಳು, ಮುಂದುವರಿಕೆ ಶಿಕ್ಷಣ ಹಾಗೂ ಇತರ ವಿಸ್ತರಣಾ ಸೇವೆಗಳ ವಿಧಾನ ಮತ್ತು ನಿರ್ವಹಣೆ;

(xiv) ಉಪಲಬ್ಧಿಗಳನ್ನು ಒಳಗೊಂಡಂತೆ ವಿಶ್ವವಿದ್ಯಾನಿಲಯದ ನೌಕರರ ಜೇಷ್ಠತೆಯ ನಿರ್ಧರಣೆಯನ್ನು ಒಳಗೊಂಡ ಸೇವಾ ಷರತ್ತುಗಳು; ಮತ್ತು

(xv) ಈ ಅಧಿನಿಯಮದ ಮೂಲಕ ಅಥವಾ ಪರಿನಿಯಮಗಳ ಮೂಲಕ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಎಲ್ಲ ಇತರ ವಿಷಯಗಳು.

(2) ಪರಿನಿಯಮಗಳು, ಕುಲಾಧಿಪತಿಯವರ ಅನುಮೋದನೆಯ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದ ಇತರ ಅಂಥ ದಿನಾಂಕದಿಂದ ಮಾತ್ರ ಜಾರಿಗೆ ಬರತಕ್ಕದ್ದು.

(3) ಉಪಲಬ್ಧಿಗಳು ಒಳಗೊಂಡಂತೆ ನೌಕರರ ಸೇವಾಷರತ್ತುಗಳನ್ನು ನಿಯಂತ್ರಿಸುವುದನ್ನು ಒಳಗೊಂಡ ಪರಿನಿಯಮಗಳು ರಾಜ್ಯ ಸರ್ಕಾರದ ಕಾರ್ಯನೀತಿಗೆ ಸುಸಂಗತವಾಗಿರತಕ್ಕದ್ದು.

**31. ಪರಿನಿಯಮಗಳ ರಚನೆ ಮತ್ತು ಅವುಗಳ ಅಧಿನಿಯಮಿತಿ.–** (1) ಕಾರ್ಯನಿರ್ವಾಹಕ ಪರಿಷತ್ತು ಕಾಲಕಾಲಕ್ಕೆ ಹೊಸ ಅಥವಾ ಹೆಚ್ಚುವರಿ ಪರಿನಿಯಮಗಳನ್ನು ರಚಿಸಬಹುದು ಅಥವಾ ಮೇಲೆ ಉಲ್ಲೇಖಿಸಿದಂತೆ ಪರಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು:

ಪರಂತು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸ್ಥಾನಮಾನ, ಅಧಿಕಾರಗಳು ಅಥವಾ ಸ್ಥಾಪನೆಗೆ ಪರಿಣಾಮ ಬೀರುವ ಯಾವುದೇ ಪರಿನಿಯಮಗಳನ್ನು ಅಂಥ ಪ್ರಾಧಿಕಾರಕ್ಕೆ ಉದ್ದೇಶಿತ ಬದಲಾವಣೆಗಳ ಮೇಲೆ ಅಭಿಪ್ರಾಯವನ್ನು ಲಿಖಿತದಲ್ಲಿ ಹೇಳಿಕೊಳ್ಳುವ ಅವಕಾಶವನ್ನು ನೀಡಿದ ಹೊರತು ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮಗಳ ರಚನೆ, ತಿದ್ದುಪಡಿ ಅಥವಾ ನಿರಸನವನ್ನು ಮಾಡತಕ್ಕದ್ದಲ್ಲ ಮತ್ತು ಹಾಗೆ ನೀಡಿದ ಯಾವುದೇ ಅಭಿಪ್ರಾಯವನ್ನು ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮದ ಕರಡನ್ನು ತಾನಾಗಿಯೇ ಅಥವಾ ವಿದ್ಯಾವಿಷಯಕ ಪರಿಷತ್ತು ಮಾಡಿರುವ ಪ್ರಸ್ತಾವನೆಯ ಮೇರೆಗೆ ಪರಿಗಣನೆಗೆ ತೆಗೆದುಕೊಳ್ಳಬಹುದು. ವಿದ್ಯಾವಿಷಯಕ ಪರಿಷತ್ತು ಕರಡಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸದಿದ್ದಾಗ, ಅದನ್ನು ಪರಿಗಣಿಸುವ ಮೊದಲು ಕಾರ್ಯನಿರ್ವಾಹಕ ಪರಿಷತ್ತು ವಿದ್ಯಾವಿಷಯಕ ಪರಿಷತ್ತಿನ ಅಭಿಪ್ರಾಯವನ್ನು ಪಡೆಯತಕ್ಕದ್ದು.

(3) ಹಣಕಾಸು ತೊಡಕುಗಳನ್ನು ಒಳಗೊಂಡ ಅಂಥ ಪರಿನಿಯಮಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಕಾರ್ಯನಿರ್ವಾಹಕ ಪರಿಷತ್ತು ಪಡೆಯತಕ್ಕದ್ದು.

(4) ಕಾರ್ಯನಿರ್ವಾಹಕ ಪರಿಷತ್ತು ಪರಿನಿಯಮದ ಕರಡನ್ನು ಪರಿಗಣನೆಗಾಗಿ ತೆಗೆದುಕೊಳ್ಳುವಾಗ ಅದು ಅಗತ್ಯವೆಂದು ಭಾವಿಸಿದರೆ ವಿಶ್ವವಿದ್ಯಾನಿಲಯದ ಯಾವುದೇ ಅಧಿಕಾರಿ, ಪ್ರಾಧಿಕಾರ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದಾಗಿದೆ.

(5) ಪ್ರತಿಯೊಂದು ಹೊಸ ಪರಿನಿಯಮ ಅಥವಾ ಪರಿನಿಯಮಗಳಿಗೆ ಹೆಚ್ಚುವರಿ ಸೇರಿಸುವಿಕೆ ಅಥವಾ ಪರಿನಿಯಮಕ್ಕೆ ಮಾಡಿದ ಯಾವುದೇ ತಿದ್ದುಪಡಿಯನ್ನು ಅಥವಾ ಅದರ ನಿರಸನವನ್ನು ಕಾರ್ಯನಿರ್ವಾಹಕ ಪರಿಷತ್ತು ಕುಲಾಧಿಪತಿಯವರಿಗೆ ಅವರ ಒಪ್ಪಿಗೆಗಾಗಿ ಸಲ್ಲಿಸತಕ್ಕದ್ದು. ಅವರು ಒಪ್ಪಿಗೆಯನ್ನು ನೀಡಬಹುದು ಅಥವಾ ಒಪ್ಪಿಗೆಯನ್ನು ಕಾಯ್ದಿರಿಸಬಹುದು ಅಥವಾ ಎರಡು ತಿಂಗಳೊಳಗಾಗಿ ಮರುಪರಿಗಣನೆಗೆ ಕಾರ್ಯನಿರ್ವಾಹಕ ಪರಿಷತ್ತಿಗೆ ಹಿಂದಿರುಗಿಸಬಹುದು.

(6) ಕುಲಾಧಿಪತಿಯು ಒಪ್ಪಿಗೆ ನೀಡದ ಹೊರತು ಯಾವುದೇ ಪರಿನಿಯಮವು ಸಿಂಧುವಾಗತಕ್ಕದ್ದಲ್ಲ.

**32. ಆರ್ಡಿನೆನ್ಸ್‌ಗಳು.–** (1) ಈ ಅಧಿನಿಯಮದ ಮತ್ತು ಪರಿನಿಯಮಗಳ ಉಪಬಂಧಗಳಿಗೊಳಪಟ್ಟು, ಆರ್ಡಿನೆನ್ಸ್‌ಗಳು ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾನಿಲಯಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು;

(ಬಿ) ವಿಶ್ವವಿದ್ಯಾನಿಲಯದ ಎಲ್ಲ ಪದವಿಗಳ, ಡಿಪ್ಲೊಮಾಗಳ ಮತ್ತು ಪ್ರಮಾಣಪತ್ರಗಳ ಬಗ್ಗೆ ವ್ಯಾಸಂಗ ಕ್ರಮಗಳು;

(ಸಿ) ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಅಳೆಯಲು ಸೆಮಿಸ್ಟರ್ ವ್ಯವಸ್ಥೆ, ಆಯ್ಕೆ ಆಧಾರಿತ ಶ್ರೇಣಿ ವ್ಯವಸ್ಥೆ, ಆಧುನಿಕ ಶ್ರೇಣಿ ನೀಡಿಕೆ ಪದ್ಧತಿಗಳು ಮತ್ತು ಇತರ ನಾವಿನ್ಯತೆಗಳನ್ನು ಜಾರಿಗೊಳಿಸುವುದು.

(ಡಿ) ಪದವಿಗಳು, ಡಿಪ್ಲೊಮಾಗಳು ಮತ್ತು ಪ್ರಮಾಣಪತ್ರಗಳು ಹಾಗೂ ಅವುಗಳಿಗಾಗಿ ಇತರ ಅಗತ್ಯತೆಗಳು ಮತ್ತು ಅವುಗಳನ್ನು ನೀಡುವುದಕ್ಕೆ ಮತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಬೇಕಾದ ಕ್ರಮಗಳು;

(ಇ) ಫೆಲೋಶಿಪ್‌ಗಳು, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ಪ್ರವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ನೀಡುವುದಕ್ಕೆ ಸಂಬಂಧಿಸಿದ ಷರತ್ತುಗಳು;

(ಎಫ್) ಪರೀಕ್ಷಾ ನಿಕಾಯಗಳು, ಪರೀಕ್ಷಕರು, ಮತ್ತು ಮಾಡರೇಟರುಗಳ ಪದಾವಧಿ ಹಾಗೂ ಕರ್ತವ್ಯಗಳು ಸೇರಿದಂತೆ, ಪರೀಕ್ಷೆಗಳನ್ನು ನಡೆಸುವುದು;

(ಜಿ) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸದ ಬಗ್ಗೆ ಷರತ್ತುಗಳು;

(ಹೆಚ್) ವಿದ್ಯಾರ್ಥಿನಿಯರ ಮತ್ತು ವಿಕಲ ಚೇತನ ವಿದ್ಯಾರ್ಥಿಗಳ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ಮಾಡಬಹುದಾದ ವಿಶೇಷ ವ್ಯವಸ್ಥೆಗಳು, ಏನಾದರೂ ಇದ್ದರೆ, ಅವುಗಳನ್ನು ಮತ್ತು ಅವಶ್ಯವಿರುವಲ್ಲಿ ಅವರಿಗಾಗಿ ವಿಶೇಷ ವ್ಯಾಸಂಗ ಕ್ರಮಗಳನ್ನು ನಿಯಮಿಸುವುದು;

(ಜೆ) ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ವಿದ್ಯಾರ್ಥಿನಿಲಯಗಳ ಮನ್ನಣೆಗಾಗಿ ಷರತ್ತುಗಳು;

(ಕೆ) ವಿಶ್ವವಿದ್ಯಾಲಯದಲ್ಲಿ ಇರುವ ವಿದ್ಯಾರ್ಥಿಗಳ ಆರೋಗ್ಯ ಮತ್ತು ಶಿಸ್ತು ಹಾಗೂ ಅವರ ವಿರುದ್ಧ ಶಿಸ್ತು ವ್ಯವಹರಣೆಗಳು;

(ಎಲ್) ಈ ಅಧಿನಿಯಮದ ಅಥವಾ ಪರಿನಿಯಮಗಳ ಮೂಲಕ, ಆರ್ಡಿನೆನ್ಸ್‌ಗಳಿಂದ ಉಪಬಂಧಿಸಬೇಕಾದ ಅಥವಾ ಉಪಬಂಧಿಸಬಹುದಾದ ಇತರ ಎಲ್ಲ ವಿಷಯಗಳು.

(2) ಜಾರಿಯಲ್ಲಿರುವ ವಿನಿಯಮಗಳ ಅಥವಾ ಪರಿನಿಯಮಗಳ ತಿದ್ದುಪಡಿಗಾಗಿ ಯಾವುದೇ ಆರ್ಡಿನೆನ್ಸನ್ನು ರಚಿಸತಕ್ಕದ್ದಲ್ಲ.

**33. ಆರ್ಡಿನೆನ್ಸ್‌ಗಳ ರಚನೆಯ ಕಾರ್ಯವಿಧಾನ.–** (1) ಕಾರ್ಯನಿರ್ವಾಹಕ ಪರಿಷತ್ತು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ ರೀತಿಯಲ್ಲಿ ಆರ್ಡಿನೆನ್ಸ್‌ಗಳನ್ನು ರಚಿಸಬಹುದು.

(2) ಆರ್ಡಿನೆನ್ಸುಗಳನ್ನು ರಚಿಸುವಲ್ಲಿ ಕಾರ್ಯನಿರ್ವಾಹಕ ಪರಿಷತ್ತು,–

(i) ಪರೀಕ್ಷಕರ ಕರ್ತವ್ಯಗಳ ಮೇಲೆ ಅಂಥ ಆರ್ಡಿನೆನ್ಸುಗಳು ಪರಿಣಾಮ ಬೀರುವಲ್ಲಿ, ಸಂಬಂಧಪಟ್ಟ ಮಂಡಲಿಗಳೊಡನೆ; ಮತ್ತು

(ii) ವ್ಯಾಸಂಗ ಕ್ರಮಗಳು, ಸೆಮಿಸ್ಟರ್ ಸ್ಕೀಮು ಅಥವಾ ಕ್ರೆಡಿಟ್ ಪದ್ಧತಿ, ಪರೀಕ್ಷೆಗಳನ್ನು ನಡೆಸುವುದು ಅಥವಾ ಅವುಗಳ ಗುಣಮಟ್ಟ ಅಥವಾ ವಿದ್ಯಾರ್ಥಿಗಳ ನಿವಾಸದ ಷರತ್ತುಗಳ ಮೇಲೆ ಅಂಥ ಆರ್ಡಿನೆನ್ಸ್‌ಗಳು ಪರಿಣಾಮ ಬೀರುವಲ್ಲಿ ವಿದ್ಯಾವಿಷಯಕ ಪರಿಷತ್ತಿನೊಡನೆ,

– ಸಮಾಲೋಚಿಸತಕ್ಕದ್ದು.

(3) ವಿದ್ಯಾವಿಷಯಕ ಪರಿಷತ್ತು ಪ್ರಸ್ತಾಪಿಸಿದ ಯಾವುದೇ ಆರ್ಡಿನೆನ್ಸಿನ ಕರಡನ್ನು ತಿದ್ದುಪಡಿ ಮಾಡಲು ಕಾರ್ಯನಿರ್ವಾಹಕ ಪರಿಷತ್ತಿಗೆ ಅಧಿಕಾರವಿರತಕ್ಕದ್ದಲ್ಲ. ಆದರೆ, ಅದು ಪ್ರಸ್ತಾವವನ್ನು ತಿರಸ್ಕರಿಸಬಹುದು ಅಥವಾ ಕಾರ್ಯನಿರ್ವಾಹಕ ಪರಿಷತ್ತು ಸೂಚಿಸಬಹುದಾದ ಅಂಥ ತಿದ್ದುಪಡಿಗಳೊಂದಿಗೆ, ಸಂಪೂರ್ಣವಾಗಿ ಅಥವಾ ಭಾಗಶ: ಮರುಪರಿಶೀಲನೆಗಾಗಿ ಕರಡನ್ನು ವಿದ್ಯಾವಿಷಯಕ ಪರಿಷತ್ತಿಗೆ ಹಿಂದಿರುಗಿಸಬಹುದು.

(4) ಕಾರ್ಯನಿರ್ವಾಹಕ ಪರಿಷತ್ತು ರಚಿಸಿದ ಎಲ್ಲಾ ಆರ್ಡಿನೆನ್ಸ್‌ಗಳು ಅದು ನಿರ್ದೇಶಿಸಬಹುದಾದ ಅಂಥ ದಿನಾಂಕದಿಂದ ಪರಿಣಾಮಕಾರಿಯಾಗಿರತಕ್ಕದ್ದು. ಎಲ್ಲಾ ಆರ್ಡಿನೆನ್ಸ್‌ಗಳು ಭವಿಷ್ಯವರ್ತಿಯಾಗಿ ಮಾತ್ರ ಜಾರಿಗೆ ಬರತಕ್ಕದ್ದು:

ಪರಂತು, ಹಣಕಾಸು ತೊಡಕುಗಳುಳ್ಳ ಪ್ರಸ್ತಾವನೆಯನ್ನು ಒಳಗೊಂಡ ಆರ್ಡಿನೆನ್ಸ್ ಸಂಬಂಧದಲ್ಲಿ, ವಿಶ್ವವಿದ್ಯಾಲಯವು ಕುಲಾಧಿಪತಿಯವರ ಅನುಮೋದನೆಯನ್ನು ಪಡೆಯತಕ್ಕದ್ದು.

(5) ವಿದ್ಯಾವಿಷಯಕ ಪರಿಷತ್ತು ಪ್ರಸ್ತಾವಿಸಿದ ಆರ್ಡಿನೆನ್ಸಿನ ಕರಡನ್ನು ಕಾರ್ಯನಿರ್ವಾಹಕ ಪರಿಷತ್ತು ತಿರಸ್ಕರಿಸಿದಲ್ಲಿ, ವಿದ್ಯಾವಿಷಯಕ ಪರಿಷತ್ತು, ಕುಲಾಧಿಪತಿಯವರಿಗೆ ಮೇಲ್ಮನವಿಯನ್ನು ಮಾಡಿಕೊಳ್ಳಬಹುದು.

(6) ಕುಲಾಧಿಪತಿಯವರು, ಕಾರ್ಯನಿರ್ವಾಹಕ ಪರಿಷತ್ತಿನ ಟೀಕೆ-ಟಿಪ್ಪಣಿಗಳನ್ನು ಪಡೆದ ತರುವಾಯ, ಮೇಲ್ಮನವಿಯನ್ನು ತಿರಸ್ಕರಿಸಬಹುದು ಅಥವಾ ವಿದ್ಯಾವಿಷಯಕ ಪರಿಷತ್ತು ಪ್ರಸ್ತಾವಿಸಿದಂತೆ ಆರ್ಡಿನೆನ್ಸನ್ನು ಅನುಮೋದಿಸಬಹುದು. ಅನಂತರ ಆರ್ಡಿನೆನ್ಸನ್ನು ಕಾರ್ಯನಿರ್ವಾಹಕ ಪರಿಷತ್ತು ರಚಿಸಿದ್ದರೆ ಹೇಗೋ ಹಾಗೆ ಅದು ಪರಿಣಾಮಕಾರಿಯಾಗಿರತಕ್ಕದ್ದು.

(7) ಮೊದಲ ಆರ್ಡಿನೆನ್ಸನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪೂರ್ವಾನುಮೋದನೆಯೊಂದಿಗೆ ಕುಲಪತಿಯವರು ರಚಿಸತಕ್ಕದ್ದು ಮತ್ತು ಹಾಗೆ ರಚಿಸಲಾದ ಆರ್ಡಿನೆನ್ಸನ್ನು, ಪರಿನಿಯಮಗಳಲ್ಲಿ ಉಪಬಂಧಿಸಲಾದ ವಿಧಾನದಲ್ಲಿ ಕಾರ್ಯನಿರ್ವಾಹಕ ಪರಿಷತ್ತು ಯಾವುದೇ ಸಮಯದಲ್ಲಿ ತಿದ್ದುಪಡಿಯನ್ನು ಮಾಡಬಹುದು, ನಿರಸನಗೊಳಿಸಬಹುದು ಅಥವಾ ಸೇರಿಸಲೂಬಹುದು.

**34. ವಿನಿಯಮಗಳು.-** (1) ಈ ಅಧಿನಿಯಮದಲ್ಲಿ ನಮೂದಿಸಲಾದ ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಉಪಬಂಧಿಸಲಾದ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಈ ಅಧಿನಿಯಮ, ಪರಿನಿಯಮಗಳಿಗೆ ಮತ್ತು ಆರ್ಡಿನೆನ್ಸ್‌ಗಳಿಗೆ ಸುಸಂಗತವಾಗಿರುವ ವಿನಿಯಮಗಳನ್ನು ವಿದ್ಯಾವಿಷಯಕ ಪರಿಷತ್ತು ರಚಿಸಬಹುದು, ಎಂದರೆ:-

(i) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ii) ಇತರ ವಿಶ್ವವಿದ್ಯಾಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು ವಿಶ್ವವಿದ್ಯಾಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮಾನವಾದುವುಗಳೆಂದು ಮನ್ನಣೆ ನೀಡುವುದು;

(iii) ವಿಶ್ವವಿದ್ಯಾಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಹಾಗೂ ವಿಶ್ವವಿದ್ಯಾಲಯದ ಅಥವಾ ಇತರ ವಿಶ್ವವಿದ್ಯಾಲಯಗಳ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾನಿಲಯದ ಪರೀಕ್ಷೆಗಳು ಅಥವಾ ಪದವಿಗಳು, ಡಿಪ್ಲೊಮೋಗಳು ಮತ್ತು ಇತರ ಸರ್ಟಿಫಿಕೇಟುಗಳಿಗೆ ಸೇರಿಸಿಕೊಳ್ಳತಕ್ಕದ್ದೋ ಆ ಷರತ್ತುಗಳು; ಮತ್ತು

(iv) ವಿನಾಯಿತಿಗಳನ್ನು ನೀಡುವುದು.

(2) ವಿಶ್ವವಿದ್ಯಾಲಯವು ರಚಿಸಿದ ಎಲ್ಲಾ ವಿನಿಯಮಗಳು ಸಂಬಂಧಪಟ್ಟ ರಾಷ್ಟ್ರೀಯ ನಿಯಂತ್ರಕ ನಿಕಾಯಗಳು ಹೊರಡಿಸಿದ ನಿರ್ದೇಶನಗಳೊಂದಿಗೆ ಅನುರೂಪವಾಗಿರತಕ್ಕದ್ದು. ನಂತರ ಅವು, ರಾಜ್ಯ ಸರ್ಕಾರವು ಹೊರಡಿಸಿದ ಆದೇಶಗಳಿಗೆ ಹಾಗೂ ಕುಲಾಧಿಪತಿಯವರು ಅನುಮೋದಿಸಿದ ಪರಿನಿಯಮಗಳಿಗೆ ವಿರುದ್ಧವಾಗಿರತಕ್ಕದ್ದಲ್ಲ.

(3) ಪ್ರತಿಯೊಂದು ವಿನಿಯಮವು, ಕಾರ್ಯನಿರ್ವಾಹಕ ಪರಿಷತ್ತು ಅದನ್ನು ಅನುಮೋದಿಸಿದ ತಕ್ಷಣದಿಂದ ಜಾರಿಗೆ ಬರತಕ್ಕದ್ದು.

**35. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವಪ್ರಕಟಣೆಯ ತರುವಾಯ, ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಉಭಯ ಸದನಗಳು ಒಪ್ಪಿದರೆ ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು

ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

**36. ರಚನೆ, ರಿಕ್ತಸ್ಥಾನ, ಇತ್ಯಾದಿಗಳಲ್ಲಿನ ದೋಷದ ಆಧಾರದ ಮೇಲೆ ಮಾತ್ರವೇ ಕಾರ್ಯವು ಅಸಿಂಧುವಾಗತಕ್ಕದ್ದಲ್ಲ.-** (1) ವಿಶ್ವವಿದ್ಯಾನಿಲಯದ ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾವಿಷಯಕ ಪರಿಷತ್ತು ಅಥವಾ ಯಾವುದೇ ಇತರ ಪ್ರಾಧಿಕಾರ ಅಥವಾ ನಿಕಾಯವನ್ನು ಯುಕ್ತವಾಗಿ ರಚಿಸಿರದಿದ್ದರೆ ಅಥವಾ ಯಾವುದೇ ಕಾಲದಲ್ಲಿ ಅದರ ರಚನೆಯಲ್ಲಿ ಅಥವಾ ಪುನರ್‌ರಚನೆಯಲ್ಲಿ ಯಾವುದೇ ದೋಷವಿದ್ದರೆ ಮತ್ತು ಯಾವುದೇ ಅಂಥ ಪ್ರಾಧಿಕಾರದ ಸದಸ್ಯರ ಸ್ಥಾನವು ಖಾಲಿಯಿದ್ದರೆ, ಅಂಥ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು, ಅಂಥ ಯಾವುದೇ ಕಾರಣ ಅಥವಾ ಕಾರಣಗಳ ಆಧಾರದ ಮೇಲೆ ಅಸಿಂಧುವಾಗತಕ್ಕದ್ದಲ್ಲ.

(2) ಯಾವುದೇ ಸದಸ್ಯನಿಗೆ ತಿಳಿವಳಿಕೆ ಪತ್ರ ರವಾನಿಸುವುದಲ್ಲಿನ ಯಾವುದೇ ಅಕ್ರಮದ ನಿಮಿತ್ತ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಯಾವುದೇ ನಿರ್ಣಯವು ಅಸಿಂಧುವೆಂದು ಪರಿಭಾವಿಸತಕ್ಕದ್ದಲ್ಲ. ಆದರೆ, ಅಂತಹ ಪ್ರಾಧಿಕಾರ ಅಥವಾ ನಿಕಾಯದ ನಡವಳಿಗಳು ಅಂಥ ಅಕ್ರಮದಿಂದ ಪೂರ್ವಗ್ರಹವಾಗಿ ಬಾಧಿತವಾಗಿರುವಂತಿಲ್ಲ.

## ಅಧ್ಯಾಯ VI
## ಹಣಕಾಸು ಮತ್ತು ಲೆಕ್ಕಪತ್ರಗಳು

**37. ವಿಶ್ವವಿದ್ಯಾನಿಲಯದ ನಿಧಿಗಳು.-** (1) ಈ ಕೆಳಕಂಡ ಯಾವುವೇ ಮೂಲಗಳಿಂದ ಸ್ವೀಕರಿಸಿದ ಮೊಬಲಗುಗಳು ವಿಶ್ವವಿದ್ಯಾನಿಲಯದ ನಿಧಿಯ ಭಾಗವಾಗಿರತಕ್ಕದ್ದು:-

(i)ವಿಶ್ವವಿದ್ಯಾನಿಲಯದ ಅನುದಾನಗಳ ಆಯೋಗವು ಅಥವಾ ಕೇಂದ್ರ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(ii)ರಾಜ್ಯ ಸರ್ಕಾರವು ನೀಡಿದ ಯಾವುದೇ ವಂತಿಗೆ ಅಥವಾ ಅನುದಾನ;

(iii) ಖಾಸಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳು ನೀಡಿದ ಯಾವುದೇ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತುಗಳು, ದೇಣಿಗೆಗಳು, ದತ್ತಿಗಳು ಅಥವಾ ಇತರ ಅನುದಾನಗಳು;

(iv) ಶುಲ್ಕಗಳು ಮತ್ತು ಚಾರ್ಜುಗಳ ಮೂಲಕ ವಿಶ್ವವಿದ್ಯಾನಿಲಯವು ಸ್ವೀಕರಿಸಿದ ಆದಾಯ;

(v) ಕೈಗಾರಿಕೆಗಳು, ವ್ಯಾಪಾರಿಗಳು ಅಥವಾ ಉದ್ದಿಮೆದಾರರಿಂದ ಯಾವುದೇ ವಂತಿಗೆ ಅಥವಾ ಮರಣ ಶಾಸನ ಮೂಲಕವಾಗಿ ದೊರೆತ ಸ್ವತ್ತುಗಳ;

(vi) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿಗೆ ಒಳಪಟ್ಟು ವಿದೇಶಿ ಸರ್ಕಾರಗಳಿಂದ ಅಥವಾ ಯಾವುದೇ ವಿದೇಶಿ ಸಂಸ್ಥೆಗಳಿಂದ ಅಥವಾ ಕಂಪನಿಗಳಿಂದ ಸ್ವೀಕರಿಸಿದ ಯಾವುದೇ ವಂತಿಗೆ ಅಥವಾ ದತ್ತಿಗಳು, ಮತ್ತು

(vii) ಯಾವುದೇ ಇತರ ಮೂಲದಿಂದ ಸ್ವೀಕರಿಸಿದ ಮೊಬಲಗುಗಳು.

(2) ಕಾರ್ಯನಿರ್ವಾಹಕ ಪರಿಷತ್ತು ತೀರ್ಮಾನಿಸಬಹುದಾದಂತೆ ಸದರಿ ನಿಧಿಯನ್ನು, ಭಾರತದ ರಿಜರ್ವ್ ಬ್ಯಾಂಕ್ ಅಧಿನಿಯಮ, 1934ರಲ್ಲಿ ಪರಿಭಾಷಿಸಿದಂತೆ ಅನುಸೂಚಿತ ಬ್ಯಾಂಕಿನಲ್ಲಿ ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970ರ ಮೇರೆಗೆ ರಚಿತವಾದ ಹೊಸ ಸಂವಾದಿ ಬ್ಯಾಂಕಿನಲ್ಲಿ ಇಡತಕ್ಕದ್ದು.

(3) ವಿಶ್ವವಿದ್ಯಾನಿಲಯದ ನಿಧಿಗಳು ಮತ್ತು ಆದಾಯವನ್ನು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಮಾತ್ರವೇ ಉಪಯೋಗಿಸತಕ್ಕದ್ದು ಮತ್ತು ಲಾಭ, ಬಡ್ಡಿ ಅಥವಾ ಡಿವಿಡೆಂಡ್‌ಗಳು ಇತ್ಯಾದಿಯ ರೂಪದಲ್ಲಿ ಟ್ರಸ್ಟಿಗಳಿಗೆ ಅಥವಾ ಸದಸ್ಯರಿಗೆ ಯಾವುದೇ ಸಂದಾಯವನ್ನು ಮಾಡತಕ್ಕದ್ದಲ್ಲ.

(4) ಪರಿನಿಯಮಗಳ ಮೂಲಕ ಉಪಬಂಧಿಸಬಹುದಾದ ರೀತಿಯಲ್ಲಿ ವಿಶ್ವವಿದ್ಯಾನಿಲಯದ ಯಾವುವೇ ಉದ್ದೇಶಗಳಿಗಾಗಿ ಸದರಿ ನಿಧಿಯನ್ನು ವಿನಿಯೋಗಿಸಬಹುದು.

**38. ವಿಶ್ವವಿದ್ಯಾನಿಲಯದ ವಿಘಟನೆ ಅಥವಾ ಸಮಾಪ್ತಿ.-** ವಿಶ್ವವಿದ್ಯಾಲಯದ ವಿಘಟನೆ ಅಥವಾ ಸಮಾಪ್ತಿಯ ಸಂದರ್ಭದಲ್ಲಿ, ವಿಘಟನೆಯ ದಿನಾಂಕದಂದು ಉಳಿದ ಸ್ವತ್ತುಗಳನ್ನು ಯಾವುದೇ ಸನ್ನಿವೇಶಗಳಲ್ಲಿಯೂ, ಕಾರ್ಯನಿರ್ವಾಹಕ ಪರಿಷತ್ತಿನ ಅಥವಾ ಹಣಕಾಸು ಸಮಿತಿಯ ಸದಸ್ಯರ ಪೈಕಿ ಹಂಚಿಕೆ ಮಾಡತಕ್ಕದ್ದಲ್ಲ, ಆದರೆ ಅದನ್ನು, ಈ ವಿಶ್ವವಿದ್ಯಾಲಯಕ್ಕೆ ಸದೃಶವಾದ ಉದ್ದೇಶಗಳನ್ನು ಹೊಂದಿರುವ ಮತ್ತೊಂದು ವಿಶ್ವವಿದ್ಯಾಲಯಕ್ಕೆ ವರ್ಗಾವಣೆ ಮಾಡತಕ್ಕದ್ದು.

**39. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**- (1) ಕಾರ್ಯನಿರ್ವಾಹಕ ಪರಿಷತ್ತಿನ ನಿರ್ದೇಶನದ ಮೇರೆಗೆ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪತ್ರಗಳನ್ನು ತಯಾರಿಸತಕ್ಕದ್ದು.

(2) ಹಾಗೆ ತಯಾರಿಸಿದ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಸಮಿತಿಯು ತನ್ನ ಮುಂದಿನ ನಿಕಟ ಸಭೆಯಲ್ಲಿ ಪರಿಗಣಿಸತಕ್ಕದ್ದು. ಹಣಕಾಸು ಸಮಿತಿಯು ಆ ಸಂಬಂಧವಾಗಿ ಒಂದು ಗೊತ್ತುವಳಿಯನ್ನು ಅಂಗೀಕರಿಸಬಹುದು ಮತ್ತು ಅದನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ತಿಳಿಸತಕ್ಕದ್ದು. ಹಣಕಾಸು ಸಮಿತಿಯು ಮಾಡಿದ ಸಲಹೆಗಳನ್ನು ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು ಮತ್ತು ಅದರ ಮೇಲೆ ತಾನು ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು ಹಾಗೂ ತಾನು ಕೈಗೊಂಡ ಕ್ರಮದ ಬಗ್ಗೆ ಅಥವಾ ಕ್ರಮ ಕೈಗೊಳ್ಳದಿರಲು ಇರುವ ಕಾರಣಗಳನ್ನು ತನ್ನ ಮುಂದಿನ ಸಭೆಯಲ್ಲಿ ಹಣಕಾಸು ಸಮಿತಿಗೆ ತಿಳಿಸತಕ್ಕದ್ದು.

(3) ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳನ್ನು ವರ್ಷಕ್ಕೊಮ್ಮೆ, ಆದ್ಯತೆಯ ಮೇರೆಗೆ (preferably) ಏಪ್ರಿಲ್ ತಿಂಗಳಲ್ಲಿ ರಾಜ್ಯ ಲೆಕ್ಕಪತ್ರ ನಿಯಂತ್ರಕನು ಪರಿಶೋಧಿಸತಕ್ಕದ್ದು.

(4) ಹಾಗೆ ಪರಿಶೋಧಿಸಿದ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನಾ ವರದಿಯೊಡನೆ ಹಣಕಾಸು ಸಮಿತಿಯ ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಕೊನೆಯೊಳಗೆ ತನ್ನ ಆಕ್ಷೇಪಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಶೀಘ್ರದಲ್ಲಿ ಬರುವ ಮುಂದಿನ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

**40. ಹಣಕಾಸು ಅಂದಾಜುಗಳು.**- (1) ಕಾರ್ಯನಿರ್ವಾಹಕ ಪರಿಷತ್ತು, ಪರಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ದಿನಾಂಕದ ಮೊದಲು ಹಣಕಾಸು ಅಧಿಕಾರಿಯ ನೆರವಿನೊಂದಿಗೆ, ಮುಂಬರುವ ವರ್ಷಕ್ಕಾಗಿ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸತಕ್ಕದ್ದು ಮತ್ತು ಹಣಕಾಸು ಸಮಿತಿಯ ಮೂಲಕ ಅವುಗಳನ್ನು ಪರಿಶೀಲನೆ ಮಾಡಿಸತಕ್ಕದ್ದು ಹಾಗೂ ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಅದನ್ನು ಮಂಡಿಸತಕ್ಕದ್ದು.

(2) ಕಾರ್ಯನಿರ್ವಾಹಕ ಪರಿಷತ್ತು, ಬಜೆಟ್ಟಿನಲ್ಲಿ ಒದಗಿಸಲಾದ ಮೊಬಲಗಿಗಿಂತ ಹೆಚ್ಚಿನ ಖರ್ಚನ್ನು ವಹಿಸಬೇಕಾಗಿರುವಲ್ಲಿ ಅಥವಾ ಜರೂರು ಸಂದರ್ಭದಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಪರಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಅಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ವೆಚ್ಚವನ್ನು ವಹಿಸಬಹುದು. ಅಂಥ ಹೆಚ್ಚಿನ ವೆಚ್ಚಕ್ಕೆ ಸಂಬಂಧಿಸಿದಂತೆ, ಬಜೆಟ್ಟಿನಲ್ಲಿ ಯಾವುದೇ ಅವಕಾಶವನ್ನು ಮಾಡಿಲ್ಲದಿದ್ದರೆ, ಹಣಕಾಸು ಸಮಿತಿಗೆ ಅದರ ಪರಿಗಣನೆ ಮತ್ತು ಸಲಹೆಗಾಗಿ ಅದರ ಮುಂದಿನ ಸಭೆಯಲ್ಲಿ ವರದಿಯನ್ನು ಮಾಡತಕ್ಕದ್ದು.

(3) ವಿಶ್ವವಿದ್ಯಾನಿಲಯದ ಬಜೆಟ್ ಅಂದಾಜನ್ನು, ತನ್ನ ಸಂಪನ್ಮೂಲಗಳ ಸಂಗ್ರಹಣೆ ಮಾಡುವುದೂ ಒಳಗೊಂಡಂತೆ ರಾಜ್ಯ ಸರ್ಕಾರ ಮತ್ತು ಎಲ್ಲಾ ಇತರ ಮೂಲಗಳಿಂದ ನಿರೀಕ್ಷಿಸಲಾದ ಅನುದಾನಗಳನ್ನು ಗಮನದಲ್ಲಿಟ್ಟು ತಯಾರಿಸತಕ್ಕದ್ದು. ಆದಾಗ್ಯೂ, ಪೂರಕ ಬಜೆಟನ್ನು, ಹೆಚ್ಚಿನ ಅನುದಾನಗಳ ನಿರೀಕ್ಷೆಯಿಂದ ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ಕಾರ್ಯನಿರ್ವಾಹಕ ಪರಿಷತ್ತಿನ ಮುಂದೆ ಇಡಬಹುದು; ಆದರೆ, ಈ ಬಗ್ಗೆ ಯಾವುದೇ ವೆಚ್ಚವನ್ನು, ಅಂಥ ಹೆಚ್ಚಿನ ಅನುದಾನ ಸ್ವೀಕರಿಸಿದ ಹೊರತು ಭರಿಸತಕ್ಕದ್ದಲ್ಲ.

(4) ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ಪೂರ್ವಾನುಮೋದನೆಯಿಲ್ಲದೆ, ಮೀಸಲಿಟ್ಟ ನಿಧಿಗಳನ್ನು ಇತರ ಉದ್ದೇಶಗಳಿಗಾಗಿ ಪಲ್ಲಟ ಮಾಡತಕ್ಕದ್ದಲ್ಲ ಅಥವಾ ಅದರ ಸಿಬ್ಬಂದಿ ವರ್ಗದ ವೇತನ ಶ್ರೇಣಿಗಳನ್ನು ಪರಿಷ್ಕರಿಸತಕ್ಕದ್ದಲ್ಲ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಸರಿಸಮಾನ ವಂತಿಗೆಗಳನ್ನು ಒಳಗೊಳ್ಳುವಂಥ ಯಾವುವೇ ಯೋಜನೆಗಳನ್ನು ಅಥವಾ ಪ್ರಾಯೋಜಿತ ಪ್ರಾಧಿಕಾರಗಳಿಂದ ಸಹಾಯವು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವಂಥ ಯಾವುದೇ ಯೋಜನೆಯನ್ನು ಕಾರ್ಯಗತಗೊಳಿಸತಕ್ಕದ್ದಲ್ಲ:

ಪರಂತು, ವಿಶ್ವವಿದ್ಯಾಲಯದ ಮೇಲೆ ಆವರ್ತಕ ಹೊಣೆಗಾರಿಕೆಯನ್ನು ವಿಧಿಸುವ ಯೋಜನೆ ಅಥವಾ ಕಾರ್ಯಕ್ರಮಕ್ಕೆ, ಆದರೆ, ವಿಶ್ವವಿದ್ಯಾನಿಲಯ ಅನುದಾನ ಆಯೋಗ ಅಥವಾ ಕೇಂದ್ರ ಸರ್ಕಾರದಿಂದ ದತ್ತಿಯಾಗಿ ಬಂದ ಅಥವಾ ಖಾಸಗಿ ವಲಯ ಅಥವಾ ಉದ್ಯಮ ಅಥವಾ ವ್ಯಕ್ತಿಗಳು ಅಥವಾ ಸಂಸ್ಥೆಗಳು ಸೇರಿಸಿದ ಒಟ್ಟು ಮೊತ್ತದಲ್ಲಿ ಹುಟ್ಟಬಹುದಾದ ಬಡ್ಡಿ ಅಥವಾ ವಂತಿಗೆಯಿಂದ ಅಥವಾ ದೇಣಿಗೆಗಳ ಮೂಲಕ ಪ್ರಾಪ್ತವಾದುದಕ್ಕೆ ಪೂರ್ವಾನುಮೋದನೆಯ ಅವಶ್ಯಕತೆ ಇರುವುದಿಲ್ಲ ಹಾಗೂ ಅಂಥ ಆವರ್ತಕ ಹೊಣೆಗಾರಿಕೆಯು ರಾಜ್ಯ ಸರ್ಕಾರಕ್ಕೆ ಯಾವುದೇ ಹೊರೆಯಾಗುವುದಿಲ್ಲ ಮತ್ತು ಆ ಸಂಬಂಧದಲ್ಲಿ ಸಂಪೂರ್ಣ ವೆಚ್ಚವನ್ನು ವಿಶ್ವವಿದ್ಯಾನಿಲಯದ ನಿಧಿಯಿಂದ ಭರಿಸತಕ್ಕದ್ದು.

**41. ಲೆಕ್ಕಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.**- (1) ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಪರಿಶೋಧನೆ ಅವಶ್ಯವೆಂದು ಭಾವಿಸಿದಾಗಲೆಲ್ಲಾ ಅದು ನಿರ್ದಿಷ್ಟಪಡಿಸಬಹುದಾದಂತೆ ಅಂಥ ಲೆಕ್ಕಪರಿಶೋಧಕರಿಂದ ಲೆಕ್ಕ ಪರಿಶೋಧನೆಯಾಗಬೇಕೆಂದು ನಿರ್ದೇಶಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿರತಕ್ಕದ್ದು.

(2) ಮಹಾಲೇಖಪಾಲರಿಂದ ವಿಶ್ವವಿದ್ಯಾನಿಲಯದ ಲೆಕ್ಕಪತ್ರಗಳ ಪರಿಶೋಧನೆಯಾದಾಗ ಮತ್ತು ಪರಿಶೀಲನಾಂಶಗಳೊಡನೆ (observations) ವರದಿಯನ್ನು ಅಥವಾ ಸ್ಪಷ್ಟೀಕರಣಗಳಿಗಾಗಿ ತಡೆಹಿಡಿದ ಬಾಬುಗಳ ಸಂಬಂಧದಲ್ಲಿ ಹೆಚ್ಚಿನ ಆಕ್ಷೇಪಗಳು ಅಥವಾ ಷರಾಗಳಿಗಾಗಿ ವಿಶ್ವವಿದ್ಯಾನಿಲಯಕ್ಕೆ ಲಭ್ಯವಾಗುವಂತೆ ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ಅಂಥ ವರದಿಯನ್ನು ಸ್ವೀಕರಿಸಿದ ದಿನದಿಂದ ಮೂವತ್ತು ದಿನಗಳ ಒಳಗಾಗಿ ತನ್ನ ಆಕ್ಷೇಪಗಳನ್ನು ಅಥವಾ ಷರಾಗಳನ್ನು ರಾಜ್ಯ ಸರ್ಕಾರದ ಮೂಲಕ ಮಹಾಲೇಖಪಾಲರಿಗೆ ಕಳುಹಿಸತಕ್ಕದ್ದು.

**42. ವಾರ್ಷಿಕ ವರದಿ.-** (1) ಕಾರ್ಯನಿರ್ವಾಹಕ ಪರಿಷತ್ತು, ಪ್ರತಿ ಹಣಕಾಸು ವರ್ಷಕ್ಕೆ, ವಿಶ್ವವಿದ್ಯಾನಿಲಯದ ಚಟುವಟಿಕೆಗಳು, ಗುರಿ ಮತ್ತು ಸಾಧನೆಗಳನ್ನು ಸ್ಪಷ್ಟವಾಗಿ ವಿವರಿಸುವ ಎಲ್ಲಾ ವಿವರಗಳನ್ನು ಒಳಗೊಂಡ ಒಂದು ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಪ್ರತಿ ವರ್ಷ ಜೂನ್ 30ನೇ ದಿನಾಂಕದೊಳಗೆ ವಿದ್ಯಾವಿಷಯಕ ಪರಿಷತ್ತಿಗೆ ಸಲ್ಲಿಸತಕ್ಕದ್ದು. ವಿದ್ಯಾವಿಷಯಕ ಪರಿಷತ್ತು ಅದರ ಮೇಲೆ ಗೊತ್ತುವಳಿಗಳನ್ನು ಅಂಗೀಕರಿಸಬಹುದು ಮತ್ತು ಅದನ್ನು ಕಾರ್ಯನಿರ್ವಾಹಕ ಪರಿಷತ್ತಿಗೆ ಕಳುಹಿಸತಕ್ಕದ್ದು. ಕಾರ್ಯನಿರ್ವಾಹಕ ಪರಿಷತ್ತು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು. ಅದರ ಮೇಲೆ ಕೈಗೊಂಡ ಕ್ರಮದ ಬಗ್ಗೆ ವಿದ್ಯಾವಿಷಯಕ ಪರಿಷತ್ತಿಗೆ, ಅದರ ಮುಂಬರುವ ಸಭೆಯಲ್ಲಿ ತಿಳಿಸತಕ್ಕದ್ದು. ವಾರ್ಷಿಕ ವರದಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಕೂಡಾ ನಿಯತವಾಗಿ ಅಪಲೋಡ್ ಮಾಡತಕ್ಕದ್ದು.

(2) ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ತಿನ ಗೊತ್ತುವಳಿಗಳನ್ನು ಅಳವಡಿಸಿದ ವಾರ್ಷಿಕ ವರದಿಯ ಮತ್ತು ವಿದ್ಯಾವಿಷಯಕ ಪರಿಷತ್ತು ತೆಗೆದುಕೊಂಡ ಕ್ರಮಗಳ ವರದಿಯ ಪ್ರತಿಗಳನ್ನು ಪ್ರತಿ ವರ್ಷದ ಸೆಪ್ಟೆಂಬರ್ 30ನೇ ದಿನಾಂಕಕ್ಕೆ ಮೊದಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯ ಸರ್ಕಾರವು, ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ, ಅವುಗಳ ಮುಂಬರುವ ಅಧಿವೇಶನದಲ್ಲಿ ಮಂಡಿಸತಕ್ಕದ್ದು.

## ಅಧ್ಯಾಯ VII
## ಸಂಕೀರ್ಣ ಮತ್ತು ತಾತ್ಕಾಲಿಕ ಉಪಬಂಧಗಳು

**43. ಖರೀದಿಗಳ ಕಾರ್ಯಗತಗೊಳಿಸುವಿಕೆ.-** ವಿಶ್ವವಿದ್ಯಾಲಯದ ವ್ಯವಸ್ಥಾಪನೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ಖರೀದಿಗಳು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರಲ್ಲಿ (2000ರ ಕರ್ನಾಟಕ ಅಧಿನಿಯಮ 29) ನಿರ್ವಹಿಸುವಂತೆ ಇರತಕ್ಕದ್ದು.

**44. ತಾತ್ಕಾಲಿಕ ಉಪಬಂಧಗಳು.-** ಈ ಅಧಿನಿಯಮ ಮತ್ತು ಪರಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ,-

(i) ಮೊದಲ ಕುಲಪತಿಯನ್ನು ಸರ್ಕಾರವು ಸೂಕ್ತವೆಂದು ಭಾವಿಸಬಹುದಾದ ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳ ಮೇಲೆ ನೇಮಕ ಮಾಡತಕ್ಕದ್ದು;

(ii) ಮೊದಲ ಕುಲಸಚಿವ, ಮೊದಲ ಪರೀಕ್ಷೆಗಳ ನಿಯಂತ್ರಕ ಮತ್ತು ಮೊದಲ ಹಣಕಾಸು ಅಧಿಕಾರಿಯನ್ನು ಸರ್ಕಾರವು ನೇಮಕ ಮಾಡತಕ್ಕದ್ದು;

(iii) ಈ ಅಧಿನಿಯಮವು ಪ್ರಾರಂಭವಾದ ಮೇಲೆ, ಸೊಸೈಟಿಯ ಎಲ್ಲಾ ಬೋಧನಾ ಚಟುವಟಿಕೆಗಳು, ಮಾನವ ಸಂಪನ್ಮೂಲಗಳು, ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಈ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯಕ್ಕೆ ವರ್ಗಾವಣೆಗೊಳ್ಳತಕ್ಕದ್ದು; ಮತ್ತು

(iv) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳನ್ನು ಕುಲಪತಿಯು ಕುಲಾಧಿಪತಿಯ ಪೂರ್ವಾನುಮೋದನೆಯೊಂದಿಗೆ ಮತ್ತು ನಿಧಿಗಳ ಲಭ್ಯತೆಗೆ ಒಳಪಟ್ಟು, ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಉಪಬಂಧಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳ ಆಯಾ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರವು ಚಲಾಯಿಸಬೇಕಾದ ಅಥವಾ ನಿರ್ವಹಿಸಬೇಕಾದ ಯಾವುದೇ ಅಧಿಕಾರಗಳನ್ನು ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳ ಮತ್ತು ವಿನಿಯಮಗಳಲ್ಲಿ ಕಲ್ಪಿಸಲಾದಂತೆ ಅಸ್ತಿತ್ವಕ್ಕೆ ಬರುವವರೆಗೆ ಅಂಥ ಪ್ರಾಧಿಕಾರವು ಚಲಾಯಿಸಬಹುದು ಅಥವಾ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಬಹುದು.

**45. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಅಧಿಕಾರಿಗಳು ಹಾಗೂ ಇತರ ವಿಷಯಗಳು.–** ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ಅವುಗಳ ರಚನೆ, ಅಧಿಕಾರಗಳು, ಪ್ರಕಾರ್ಯಗಳು ಮತ್ತು ಅವುಗಳಿಗೆ ಸಂಬಂಧಿಸಿದ ಇತರ ವಿಷಯಗಳು, ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಅವರ ನೇಮಕಾತಿ, ಅಧಿಕಾರಗಳು, ಪ್ರಕಾರ್ಯಗಳು ಮತ್ತು ಅವರಿಗೆ ಸಂಬಂಧಿಸಿದ ಇತರ ವಿಷಯಗಳು ಹಾಗೂ ವಿಶ್ವವಿದ್ಯಾಲಯದ ಹಣಕಾಸು, ಅಧಿಕಾರಗಳು, ಬೋಧನೆ, ಆಡಳಿತ ಮತ್ತು ವ್ಯವಸ್ಥಾಪನೆಗೆ ಸಂಬಂಧಿಸಿದ ಎಲ್ಲ ಇತರ ವಿಷಯಗಳು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವಂತೆ ಅಥವಾ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ಉಪಬಂಧಿಸಬಹುದಾದಂತೆ ಇರತಕ್ಕದ್ದು.

**46. ನಷ್ಟಭರ್ತಿ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯದ ಸಂಬಂಧದಲ್ಲಿ ವಿಶ್ವವಿದ್ಯಾಲಯದ ಕುಲಪತಿಯ, ಪ್ರಾಧಿಕಾರಗಳ ಅಥವಾ ಅಧಿಕಾರಿಗಳ ಅಥವಾ ಇತರ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ ಮತ್ತು ಅವುಗಳಿಂದ/ ಅವರಿಂದ ಯಾವುದೇ ನಷ್ಟ ಪರಿಹಾರವನ್ನು ಕ್ಲೇಮು ಮಾಡತಕ್ಕದ್ದಲ್ಲ.

**47. ಅನುಸೂಚಿಯನ್ನು ತಿದ್ದುಪಡಿ ಮಾಡಲು ಅಧಿಕಾರ.–** (1) ಕಾರ್ಯನಿರ್ವಾಹಕ ಪರಿಷತ್ತು, ಕುಲಾಧಿಪತಿಯ ಮತ್ತು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಅಧಿಸೂಚನೆಯ ಮೂಲಕ ಅನುಸೂಚಿಯನ್ನು ತಿದ್ದುಪಡಿ ಮಾಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಅಧಿಸೂಚನೆಯ ಒಂದು ಪ್ರತಿಯನ್ನು, ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**48. ಪ್ರಾರಂಭದಲ್ಲಿ ತೊಂದರೆಗಳನ್ನು ನಿವಾರಿಸಲು ಅಧಿಕಾರ.–** (1) ವಿಶ್ವವಿದ್ಯಾನಿಲಯದ ಯಾವುದೇ ಪ್ರಾಧಿಕಾರದ ಪ್ರಥಮ ರಚನೆ ಅಥವಾ, ಪುನರ್ ರಚನೆಗೆ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು ಅಂಥ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅವಶ್ಯಕವೆಂದು ಅಥವಾ ಸೂಕ್ತವೆಂದು ತನಗೆ ಕಂಡುಬರಬಹುದಾದ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳ ಅವಧಿಯು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಮೂವತ್ತು ದಿನಗಳ ಒಟ್ಟು ಅವಧಿಯಲ್ಲಿ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ವಿಧಾನಮಂಡಲದ ಯಾವುದೇ ಸದನವು ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಮಾಡಬೇಕೆಂದು ಒಪ್ಪಿದರೆ ಅಥವಾ ಅಧಿಸೂಚನೆಯನ್ನು ಮಾಡಬಾರದೆಂದು ತೀರ್ಮಾನಿಸಿದರೆ ಮತ್ತು ಇನ್ನೊಂದು ಸದನವು ಅಂಥ ಮಾರ್ಪಾಟನ್ನು ಅಥವಾ ನಿರ್ದೇಶನವನ್ನು ಒಪ್ಪಿದರೆ ಆ ತರುವಾಯ ಅಂಥ ಅಧಿಸೂಚನೆಯು ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಅಡಿಯಲ್ಲಿ ಈ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗಿರತಕ್ಕದ್ದಲ್ಲ.

## ಅನುಸೂಚಿ
## (29ನೇ ಪ್ರಕರಣವನ್ನು ನೋಡಿ)

**1. ಸ್ಥಾಯಿ ಸಮಿತಿಯ ರಚನೆ ಮತ್ತು ಅಡ್-ಹಾಕ್ ಸಮಿತಿಗಳ ನೇಮಕಾತಿ.-** (1) ಈ ಅಧಿನಿಯಮದ ಮತ್ತು ಈ ಸಂಬಂಧದಲ್ಲಿ ರಚಿಸಲಾದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು, ಕಾರ್ಯನಿರ್ವಾಹಕ ಪರಿಷತ್ತು, ವಿದ್ಯಾಲಯದ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಅಥವಾ ವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸಲು, ವರದಿ ಮಾಡಲು ಅಥವಾ ಸಲಹೆ ನೀಡಲು ಕಾರ್ಯನಿರ್ವಾಹಕ ಪರಿಷತ್ತು ಸೂಕ್ತವೆಂದು ಆಲೋಚಿಸುವ ಅಂಥ ಉದ್ದೇಶಗಳಿಗಾಗಿ ಮತ್ತು ಅಂಥ ಅಧಿಕಾರಗಳೊಂದಿಗೆ ನಿರ್ಣಯದ ಮೂಲಕ ಅಂಥ ಸ್ಥಾಯಿ ಸಮಿತಿಗಳನ್ನು ರಚಿಸಬಹುದು ಅಥವಾ ಅಡ್- ಹಾಕ್ ಸಮಿತಿಗಳನ್ನು ನೇಮಕ ಮಾಡಬಹುದು.

(2) ಕಾರ್ಯನಿರ್ವಾಹಕ ಪರಿಷತ್ತು, ತಾನು ಸೂಕ್ತವೆಂದು ಪರಿಗಣಿಸುವಂಥ ವ್ಯಕ್ತಿಗಳನ್ನು ಸ್ಥಾಯಿ ಸಮಿತಿಗೆ ಅಥವಾ ಅಡ್-ಹಾಕ್ ಸಮಿತಿಗೆ ಸಹ-ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದು ಮತ್ತು ಕಾರ್ಯನಿರ್ವಾಹಕ ಪರಿಷತ್ತಿನ ಆಹ್ವಾನಿತರಾಗಿ ಸಭೆಗಳಿಗೆ ಹಾಜರಾಗಲು ಅವರಿಗೆ ಅನುಮತಿ ನೀಡಬಹುದು.

**2. ಆಯ್ಕೆ ಸಮಿತಿ.-** (1) ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು, ಬೋಧಕರು ಮತ್ತು ಇತರ ಬೋಧನಾ ಹುದ್ದೆಗಳ ನೇಮಕಾತಿಗಾಗಿ ಕಾರ್ಯನಿರ್ವಾಹಕ ಪರಿಷತ್ತಿಗೆ ಶಿಫಾರಸುಗಳನ್ನು ಮಾಡಲು ಕಾರ್ಯನಿರ್ವಾಹಕ ಪರಿಷತ್ತು ಆಯ್ಕೆ ಸಮಿತಿಯನ್ನು ರಚಿಸತಕ್ಕದ್ದು.

(2) ಆಯ್ಕೆ ಸಮಿತಿಯು ಈ ಮುಂದಿನ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | | |
|---|---|---|---|
| (ಎ) | ಕುಲಪತಿ | - | ಅಧ್ಯಕ್ಷ |
| (ಬಿ) | ವ್ಯಾಸಂಗ ವಿಭಾಗದ ಡೀನ್(ಗಳು) | - | ಸದಸ್ಯರು |
| (ಸಿ) | ಸಂಬಂಧಪಟ್ಟ ವಿಷಯದ ಪ್ರಾಧ್ಯಾಪಕ ಅಥವಾ ವಿಶ್ವವಿದ್ಯಾಲಯದಲ್ಲಿ ಲಭ್ಯವಿಲ್ಲದಿದ್ದರೆ ಕುಲಪತಿಯು ನಾಮನಿರ್ದೇಶಿಸಿದ ಇತರ ಪ್ರಾಧ್ಯಾಪಕ | - | ಸದಸ್ಯ |
| (ಡಿ) | ವಿದ್ಯಾವಿಷಯಕ ಪರಿಷತ್ತು ಶಿಫಾರಸ್ಸು ಮಾಡಿದ ಹೆಸರುಗಳ ಪಟ್ಟಿಯ ಪೈಕಿ ಕುಲಾಧಿಪತಿಯವರು ಕುಲಪತಿಯೊಂದಿಗೆ ಸಮಾಲೋಚಿಸಿ ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಹೊರಗಿನ ಮೂವರು ವಿಷಯ ತಜ್ಞರು | - | ಸದಸ್ಯರು |

(3) ಕುಲಸಚಿವನು ಆಯ್ಕೆ ಸಮಿತಿಯ ಸಭೆಗಳನ್ನು ಅಗತ್ಯವಿದ್ದಾಗಲೆಲ್ಲ ಕರೆಯತಕ್ಕದ್ದು.

**3. ಸಂಶೋಧನಾ ಪರಿಷತ್ತು.-** (1) ಸಂಶೋಧನಾ ಪರಿಷತ್ತು ವಿಶ್ವವಿದ್ಯಾಲಯದ ಪ್ರಧಾನ ಸಂಶೋಧನಾ ನಿಕಾಯವಾಗಿರತಕ್ಕದ್ದು ಮತ್ತು ಅದು ಈ ಮುಂದಿನ ಸಂಯೋಜನೆಯನ್ನು ಹೊಂದಿರತಕ್ಕದ್ದು, ಎಂದರೆ:-

| | | | |
|---|---|---|---|
| (ಎ) | ಕುಲಪತಿ | - | ಅಧ್ಯಕ್ಷ |
| (ಬಿ) | ರಾಜ್ಯ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ನಿರ್ದೇಶಕ, ಭಾರತೀಯ ಸಾಂಖ್ಯಿಕ ಸಂಸ್ಥೆಯ ನಿರ್ದೇಶಕ, ಭಾರತೀಯ ವ್ಯವಸ್ಥಾಪನಾ ಸಂಸ್ಥೆಯ ನಿರ್ದೇಶಕ | - | ಪದನಿಮಿತ್ತ-ಸದಸ್ಯ |
| (ಸಿ) | ಆರ್ಥಿಕ ತಜ್ಞರು, ಸಾಮಾಜಿಕ ವಿಜ್ಞಾನ ತಜ್ಞರು ಮತ್ತು ಸಂಬಂಧಿಸಿದ ಕ್ಷೇತ್ರಗಳ ಪೈಕಿ ಕುಲಪತಿಯು ನಾಮನಿರ್ದೇಶಿಸಿದ ಮೂವರು ಶ್ರೇಷ್ಠ ತಜ್ಞರು/ಸಂಶೋಧಕರು | - | ಸದಸ್ಯ |
| (ಡಿ) | ವ್ಯಾಸಂಗ ವಿಭಾಗದ ಡೀನ್‌ಗಳು | - | ಸದಸ್ಯ |
| (ಇ) | ಕುಲಪತಿಯು, ಅವರ ಸಂಶೋಧನಾ ಕೊಡುಗೆಗಳ ಆಧಾರದ ಮೇಲೆ ನಾಮನಿರ್ದೇಶಿಸಿದ ಮೂವರು ಪ್ರಾಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು | - | ಸದಸ್ಯ |
| (ಎಫ್) | ಪ್ರಾಯೋಜಿತ ಸಂಶೋಧನೆ ಮತ್ತು ಸಮಾಲೋಚನೆಯ ನಿರ್ದೇಶಕ | - | ಸದಸ್ಯ |
| (ಜಿ) | ಕುಲಸಚಿವ | - | ಕಾರ್ಯದರ್ಶಿ |
| (ಹೆಚ್) | ಸಂಶೋಧನಾ ಪರಿಷತ್ತಿನ ಸಭೆಗಳಲ್ಲಿ ಪರೀಕ್ಷೆಗಳ ನಿಯಂತ್ರಕ ಮತ್ತು ಹಣಕಾಸು ಅಧಿಕಾರಿಯು ಆಹ್ವಾನಿತರಾಗಿರಬಹುದು | - | ಆಹ್ವಾನಿತರು |

(2) ಸಂಶೋಧನಾ ಪರಿಷತ್ತು, ಒಂದು ಶೈಕ್ಷಣಿಕ ವರ್ಷದಲ್ಲಿ ಸಾಮಾನ್ಯವಾಗಿ ಮೂರು ಬಾರಿ ಸಭೆ ಸೇರತಕ್ಕದ್ದು ಮತ್ತು ಎರಡ ನಿಕಟ ಸಭೆಗಳ ನಡುವಿನ ಆ ಅವಧಿಯು ಇಪ್ಪತ್ತು ವಾರಗಳನ್ನು ಮೀರತಕ್ಕದ್ದಲ್ಲ.

(3) ತುರ್ತು ಸಂದರ್ಭದಲ್ಲಿ ಕುಲಪತಿಯು ಸಂಶೋಧನಾ ಪರಿಷತ್ತಿನ ವಿಶೇಷ ಸಭೆಯನ್ನು ಕರೆಯಬಹದು.

**4. ಸಂಶೋಧನಾ ಪರಿಷತ್ತಿನ ಅಧಿಕಾರಿಗಳು ಮತ್ತು ಪ್ರಕಾರ್ಯಗಳು.–** (1) ಈ ಅಧಿನಿಯಮದ, ಪರಿನಿಯಮಗಳ, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಸಂಶೋಧನಾ ಕಾರ್ಯ ಮತ್ತು ಕೊಡುಗೆಗಳ ಗುಣಮಟ್ಟ ಮತ್ತು ಮಾನಕಗಳ ನಿರ್ವಹಣೆಯ ನಿಯಂತ್ರಣ ಮತ್ತು ಪ್ರಧಾನ ನಿಯಂತ್ರಣದ ಅಧಿಕಾರಗಳನ್ನು ಹೊಂದಿರುವುದು ಮತ್ತು ಅದಕ್ಕೆ ಜವಾಬ್ದಾರಿಯಾಗಿರುವುದು.

(2) ವಿಶ್ವವಿದ್ಯಾಲಯದ ಸಂಶೋಧನಾ ಕಾರ್ಯ ಮತ್ತು ಕೊಡುಗೆಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲೆ ಕಾರ್ಯನಿರ್ವಾಹಕ ಪರಿಷತ್ತಿಗೆ ಸಲಹೆ ನೀಡುವ ಅಧಿಕಾರವನ್ನು ಸಂಶೋಧನಾ ಪರಿಷತ್ತು ಹೊಂದಿರತಕ್ಕದ್ದು.

(3) ಸಂಶೋಧನಾ ಪರಿಷತ್ತಿನ ರಚನೆ, ಕಾಲಾವಧಿ, ಅಧಿಕಾರಗಳು, ಪ್ರಕಾರ್ಯಗಳು, ಕರ್ತವ್ಯಗಳು ಮತ್ತು ಜವಾಬ್ದಾರಿಗಳು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(4) ಸಂಶೋಧನಾ ಪರಿಷತ್ತಿನ ಪ್ರಕಾರ್ಯಗಳು, ಈ ಮುಂದಿನವುಗಳನ್ನು ಒಳಗೊಂಡಿದ್ದು, ಆದರೆ ಈ ಮುಂದಿನ ಕ್ಷೇತ್ರಗಳಿಗೆ ಮಿತಿಗೊಳಿಸತಕ್ಕದ್ದಲ್ಲ,–

(i) ರಾಷ್ಟ್ರೀಯ ಮತ್ತು ದೇಶದಾದ್ಯಂತ ಶ್ರೇಷ್ಠ ಸಾರ್ವಜನಿಕರು ಮತ್ತು ವಿಶೇಷವಾಗಿ ಸಮಾಜ ವಿಜ್ಞಾನಗಳು ಮತ್ತು ಅರ್ಥಶಾಸ್ತ್ರಗಳ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುವ ಖಾಸಗಿ ಸಂಸ್ಥೆಗಳು ಮತ್ತು ಏಜೆನ್ಸಿಗಳೊಂದಿಗೆ ಅನುಭವಗಳು ಮತ್ತು ಪರಸ್ಪರ ಚರ್ಚೆಗಳ ಮೂಲಕ ಪುನರಾವಲೋಕನದ ಆಧಾರದ ಮೇಲೆ ಆದ್ಯತೆಯ ಸಂಶೋಧನಾ ಕ್ಷೇತ್ರಗಳನ್ನು ಗುರುತಿಸುವುದು;

(ii) ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಮತ್ತು ಪ್ರಸ್ತಾವಿತ ಸಂಶೋಧನಾ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳಿಗಾಗಿ ವಿಸ್ತೃತ ಮಾರ್ಗಸೂಚಿಗಳನ್ನು ರೂಪಿಸುವುದು ಹಾಗೂ ಅವುಗಳ ಸುಧಾರಣೆಗಾಗಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡುವುದು;

(iii) ರಾಷ್ಟ್ರೀಯ/ಅಂತರಾಷ್ಟ್ರೀಯ ಯೋಜನೆ ನಿಧಿನೀಡಿಕೆ ಏಜೆನ್ಸಿಗಳ ಮತ್ತು ವಿಶ್ವವಿದ್ಯಾಲಯದ ನಡುವೆ ಹೆಚ್ಚುವರಿ ಸಂಪನ್ಮೂಲಗಳನ್ನು ಕ್ರೋಢಿಕರಿಸಲು ನಿಕಟ ಸಂಬಂಧ ಮತ್ತು ಸಮನ್ವಯ ಶಕ್ತಿಯನ್ನು ಬೆಳೆಸುವಲ್ಲಿ ನೆರ ನೀಡುವುದು; ಮತ್ತು

(iv) ಅರ್ಥಶಾಸ್ತ್ರ ಶಿಕ್ಷಣ, ಸಂಶೋಧನೆ, ಸಮಾಲೋಚನೆ ಮತ್ತು ವಿಸ್ತರಣೆ ಸೇವೆಗಳಲ್ಲಿ ಶ್ರೇಷ್ಠ ಕೇಂದ್ರವಾಗಿಸುವುದಕ್ಕಾಗಿ ದೀರ್ಘಾವಧಿ ಸಂಶೋಧನಾ ನೀತಿ ಮತ್ತು ಕಾರ್ಯತಂತ್ರಗಳನ್ನು ರೂಪಿಸುವಲ್ಲಿ ವಿಶ್ವವಿದ್ಯಾಲಯವನ್ನು ಸಶಕ್ತಗೊಳಿಸುವುದು.

(5) ಸಂಶೋಧನಾ ಪರಿಷತ್ತಿನ ಸಭೆಗಳನ್ನು ನಡೆಸುವುದಕ್ಕಾಗಿ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಪರಿನಿಯಮಗಳಲ್ಲಿ ಉಪಬಂಧಿಸಬಹುದು.

(6) ಕುಲಾಧಿಪತಿ ಅಥವಾ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಉಲ್ಲೇಖದ ನಿಬಂಧನೆಗಳನ್ನು ಚರ್ಚಿಸಲು ಸಂಶೋಧನಾ ಪರಿಷತ್ತಿನ ಸಭೆಗಳನ್ನು ನಡೆಸಲು ನಿರ್ದೇಶಿಸಬಹುದು ಹಾಗೂ ಅಂಥ ನಿರ್ದೇಶನಗಳನ್ನು ಕುಲಪತಿಯು ಅನುಸರಿಸತಕ್ಕದ್ದು.

**5. ಅಧ್ಯಯನಗಳ ಮಂಡಲಿ.–** (1) ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಪ್ರತಿಯೊಂದು ವ್ಯಾಸಂಗ ವಿಷಯ ಅಥವಾ ವ್ಯಾಸಂಗ ವಿಷಯಗಳ ಸಮೂಹಕ್ಕಾಗಿ ಅಧ್ಯಯನಗಳ ಮಂಡಲಿಯು ಇರತಕ್ಕದ್ದು:

ಪರಂತು, ಕಾರ್ಯನಿರ್ವಾಹಕ ಪರಿಷತ್ತು ಅಗತ್ಯವಿದ್ದಾಗಲೆಲ್ಲಾ ಪ್ರತ್ಯೇಕ ಅಂತರ–ವಿಷಯ ಅಧ್ಯಯನಗಳ ಮಂಡಲಿಯನ್ನು ರಚಿಸಬಹುದು.

(2) ವಿಶ್ವವಿದ್ಯಾಲಯದ ಅಧ್ಯಯನಗಳ ಮಂಡಲಿಯು ಈ ಮುಂದಿನ ಸಂಯೋಜನೆಯನ್ನು ಹೊಂದಿರತಕ್ಕದ್ದು, ಎಂದರೆ:–

| | | | |
|---|---|---|---|
| (ಎ) | ಸಂಬಂಧಪಟ್ಟ ವ್ಯಾಸಂಗ ವಿಭಾಗದ ಡೀನ್ | – | ಅಧ್ಯಕ್ಷ |
| (ಬಿ) | ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರ ಪೈಕಿ ನಾಮನಿರ್ದೇಶಿಸಿದ ಐವರು | – | ಸದಸ್ಯರು |
| (ಸಿ) | ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ಸರದಿಯ ಆಧಾರದ ಮೇರೆಗೆ ನಾಮನಿರ್ದೇಶಿಸಿದ ವ್ಯಾಸಂಗ ಇಲಾಖೆಯ ಇಬ್ಬರು ಸಹಾಯಕ ಪ್ರಾಧ್ಯಾಪಕರು | – | ಸದಸ್ಯರು |
| (ಡಿ) | ಕುಲಪತಿಯು ಎರಡು ವರ್ಷಗಳ ಅವಧಿಗಾಗಿ ನಾಮನಿರ್ದೇಶಿಸಿದ ವಿಶ್ವವಿದ್ಯಾಲಯದ ಹೊರಗಿನ ಮೂವರು ತಜ್ಞರು | – | ಸದಸ್ಯರು |
| (ಇ) | ಕುಲಪತಿಯು ನಾಮನಿರ್ದೇಶಿಸಿದ ಸಂಬಂಧಪಟ್ಟ ವಿಷಯ ಪತ್ರಿಕೆಗಳ/ವ್ಯಾಸಂಗ ವಿಷಯಗಳ ಇಬ್ಬರು ಆಹ್ವಾನಿತರು | – | ಆಹ್ವಾನಿತರು |
| (ಎಫ್) | ಉಪ/ಸಹಾಯಕ ಕುಲಸಚಿವ | – | ಕಾರ್ಯದರ್ಶಿ |

(3) ಅಧ್ಯಯನಗಳ ಮಂಡಲಿಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು ಹಾಗೂ ಸಭೆಗಳ ಆವೃತ್ತಿಯು ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ನಿಯಮಿಸಿದಂತೆ ಇರತಕ್ಕದ್ದು.

**6. ಕಾರ್ಯನಿರ್ವಾಹಕ ಪರಿಷತ್ತು ಅಧಿಕಾರಗಳನ್ನು ಪ್ರತ್ಯಾಯೋಜಿಸುವುದು.–** ಕಾರ್ಯನಿರ್ವಾಹಕ ಪರಿಷತ್ತು ತಾನು ಸೂಕ್ತವೆಂದು ಭಾವಿಸುವ ಅಂಥ ತನ್ನ ಅಧಿಕಾರಗಳನ್ನು, ಹಾಗೆ ಪ್ರತ್ಯಾಯೋಜಿಸಲಾಗುವ ಅಧಿಕಾರಗಳನ್ನು ಚಲಾಯಿಸುವಲ್ಲಿ ಕುಲಪತಿಯು ಅಥವಾ ಅಂಥ ಸಮಿತಿಯು ಕೈಗೊಂಡ ಕ್ರಮಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮುಂದಿನ ಸಭೆಯಲ್ಲಿ ವರದಿ ಮಾಡತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ನಿರ್ಣಯದ ಮೂಲಕ ಕುಲಪತಿಗೆ ಅಥವಾ ಸಮಿತಿಗೆ ಪ್ರತ್ಯಾಯೋಜಿಸಬಹುದು.

**7. ಇತರ ಅಧಿಕಾರಿಗಳು ಮತ್ತು ನೌಕರರು.–** ಸೇವಾ ಷರತ್ತುಗಳ ಉದ್ದೇಶಕ್ಕಾಗಿ ಮಾಡಲಾದ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಿಗೆ ಒಳಪಟ್ಟು, ವಿಶ್ವವಿದ್ಯಾಲಯದ ಪ್ರತಿಯೊಬ್ಬ ಇತರ ಅಧಿಕಾರಿ ಅಥವಾ ನೌಕರನು, ವಿನಿಯಮಗಳ ಮೂಲಕ ನಿಯಮಿಸಲಾದಂತೆ ಸೇವಾ ಷರತ್ತುಗಳನ್ನು ನಿರೂಪಿಸುವ ಲಿಖಿತ ಕರಾರಿನ ಮೇರೆಗೆ ನೇಮಕ ಮಾಡಿಕೊಳ್ಳತಕ್ಕದ್ದು ಮತ್ತು ಆ ಲಿಖಿತ ಕರಾರನ್ನು ವಿಶ್ವವಿದ್ಯಾಲಯದಲ್ಲಿ ಇಡತಕ್ಕದ್ದು ಮತ್ತು ಸಂಬಂಧಪಟ್ಟ ಅಧಿಕಾರಿಗೆ ಅಥವಾ ನೌಕರನಿಗೆ ಅದರ ಒಂದು ಪ್ರತಿಯನ್ನು ಒದಗಿಸತಕ್ಕದ್ದು.

**8. ಭವಿಷ್ಯನಿಧಿ, ಉಪದಾನ, ನಿವೃತ್ತಿ ವೇತನ ಮತ್ತು ಇತರ ಯಾವುದೇ ಲಾಭಕರ ಯೋಜನೆ.–** ಕಾರ್ಯನಿರ್ವಾಹಕ ಪರಿಷತ್ ಈ ನಿಟ್ಟಿನಲ್ಲಿ ರಚಿಸಬಹುದಾದ ಅಂಥ ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಅನುಸಾರವಾಗಿ ವಿಶ್ವವಿದ್ಯಾಲಯದ ಎಲ್ಲಾ ಖಾಯಂ ನೌಕರರು ನಿವೃತ್ತಿ ವೇತನ, ಭವಿಷ್ಯನಿಧಿ ಮತ್ತು ಉಪದಾನದ ಪ್ರಯೋಜನ ಪಡೆಯಲು ಅರ್ಹರಾಗಿರತಕ್ಕದ್ದು.

**9. ವಿದ್ಯಾರ್ಥಿಗಳ ವಾಸಸ್ಥಳ.–** ವಿಶ್ವವಿದ್ಯಾಲಯದ ಪ್ರತಿಯೊಬ್ಬ ವಿದ್ಯಾರ್ಥಿಯು, ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಮಾನ್ಯತೆ ನೀಡಿರುವ ವಿದ್ಯಾರ್ಥಿ ನಿಲಯದಲ್ಲಿ ಅಥವಾ ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದ ಅಂಥ ಷರತ್ತುಗಳ ಮೇರೆಗೆ ವಾಸಿಸತಕ್ಕದ್ದು.

**10. ಪದವಿ ಅಥವಾ ಡಿಪ್ಲೊಮಾಗಳನ್ನು ಹಿಂತೆಗೆದುಕೊಳ್ಳುವುದು.–** (1) ಯಾವೊಬ್ಬ ವ್ಯಕ್ತಿಯು, ಒಂದು ಅಪರಾಧಕ್ಕಾಗಿ, ಕಾನೂನುಬದ್ಧ ನ್ಯಾಯಾಲಯದ ಮೂಲಕ ಅಪರಾಧ ನಿರ್ಣೀತನಾಗಿದ್ದಲ್ಲಿ, ಕಾರ್ಯನಿರ್ವಾಹಕ ಪರಿಷತ್ತಿನ ಅಭಿಪ್ರಾಯದಲ್ಲಿ ನೈತಿಕ ಅಧ:ಪತನವನ್ನು ಒಳಗೊಂಡಿದ್ದು ಅಥವಾ ಅತಿ ದುರ್ನಡತೆಯ ತಪ್ಪಿತಸ್ಥರೆಂದು ಕಂಡುಬಂದಲ್ಲಿ, ಕಾರ್ಯನಿರ್ವಾಹಕ ಪರಿಷತ್ತಿನ ಒಟ್ಟು ಸದಸ್ಯರ ಬಹುಮತದಿಂದ ಮತ್ತು ಆ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಮೂರನೆಯ ಎರಡು ಅಂಶಕ್ಕಿಂತ ಕಡಿಮೆಯಿಲ್ಲದ ಸದಸ್ಯರ ಬಹುಮತದಿಂದ ಅಂಗೀಕೃತವಾದ ನಿರ್ಣಯದ ಮೂಲಕ ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸಿನ ಮೇಲೆ ಕಾರ್ಯನಿರ್ವಾಹಕ ಪರಿಷತ್ತು, ಅಂಥ ಯಾವೊಬ್ಬ ವ್ಯಕ್ತಿಗೆ ಪ್ರದಾನ ಮಾಡಲಾಗಿದ್ದ ಅಥವಾ ಕೊಡಲಾಗಿದ್ದ ಅಂಥ ಯಾವುದೇ ಪ್ರಶಸ್ತಿ, ಪದವಿ, ಡಿಪ್ಲೊಮಾ ಅಥವಾ ವಿಶೇಷಾಧಿಕಾರವನ್ನು ಹಿಂತೆಗೆದುಕೊಳ್ಳಬಹುದು.

(2) ಕಾರ್ಯನಿರ್ವಾಹಕ ಪರಿಷತ್ತು ಅಂಗೀಕರಿಸುವ ನಿರ್ಣಯವು, ಈ ವಿಷಯದ ಮೇಲೆ ಕ್ರಮಕೈಗೊಳ್ಳುವ ಮೊದಲು ಕುಲಾಧಿಪತಿಯವರು ಅನುಮೋದಿಸಿರತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ, ಕೈಗೊಳ್ಳಬೇಕೆಂದು ಪ್ರಸ್ತಾವಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಅವಕಾಶವನ್ನು ಕೊಟ್ಟ ಹೊರತು, ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(4) ಕಾರ್ಯನಿರ್ವಾಹಕ ಪರಿಷತ್ತು ಅಂಗೀಕರಿಸಿದ ನಿರ್ಣಯದ ಪ್ರತಿಯೊಂದನ್ನು ಸಂಬಂಧಪಟ್ಟ ವ್ಯಕ್ತಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಕೂಡಲೇ ಕಳುಹಿಸತಕ್ಕದ್ದು.

**11. ಶಿಸ್ತು.-** (1) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಶಿಸ್ತನ್ನು ಕಾಯ್ದುಕೊಂಡು ಬರುವ ಅಂತಿಮ ಪ್ರಾಧಿಕಾರಿಯು ಕುಲಪತಿಯಾಗಿರತಕ್ಕದ್ದು. ಈ ಸಂಬಂಧದಲ್ಲಿ ಅವನ ನಿರ್ದೇಶನಗಳನ್ನು ವಿಭಾಗಗಳ ಮುಖ್ಯಸ್ಥರು ಮತ್ತು ವಿದ್ಯಾರ್ಥಿನಿಲಯಗಳು ಕಾರ್ಯಗತಗೊಳಿಸತಕ್ಕದ್ದು.

(2) (1)ನೇ ಉಪ ಪ್ರಕರಣಲ್ಲಿ ಏನೇ ಒಳಗೊಂಡಿದ್ದರೂ, ಪರೀಕ್ಷೆಯ ಹಾಜರಾತಿಯಿಂದ ಒಬ್ಬ ವಿದ್ಯಾರ್ಥಿಯನ್ನು ಡಿಬಾರ್ ಮಾಡುವ ಅಥವಾ ವಿಶ್ವವಿದ್ಯಾಲಯದಿಂದ ಹೊರಹಾಕುವ ಶಿಕ್ಷೆಯನ್ನು ಕುಲಪತಿಯ ವರದಿಯ ಆಧಾರದ ಮೇಲೆ ಕಾರ್ಯನಿರ್ವಾಹಕ ಪರಿಷತ್ತು ಪರಿಗಣಿಸತಕ್ಕದ್ದು ಮತ್ತು ವಿಧಿಸತಕ್ಕದ್ದು:

ಪರಂತು, ಸಂಬಂಧಪಟ್ಟ ವಿದ್ಯಾರ್ಥಿಗೆ ಆತನ ವಿರುದ್ಧ ಕೈಗೊಳ್ಳಬೇಕಾದ ಪ್ರಸ್ತಾವಿತ ಕ್ರಮದ ಪ್ರತಿಯಾಗಿ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಶಿಕ್ಷೆಯನ್ನು ವಿಧಿಸತಕ್ಕದ್ದಲ್ಲ.

**12. ಪ್ರಾಯೋಜಿತ ಯೋಜನೆಗಳು.-** ಈ ಅಧಿನಿಯಮದ, ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳಲ್ಲಿ ಏನೇ ಒಳಗೊಂಡಿದ್ದರೂ, ವಿಶ್ವವಿದ್ಯಾಲಯದಿಂದ ಜಾರಿಗೊಳಿಸಬೇಕಿರುವ ಪ್ರಾಯೋಜಿತ ಯೋಜನೆಗೆ ಯಾವುದೇ ಸರ್ಕಾರದಿಂದ, ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ಅಥವಾ ಇತರ ಏಜೆನ್ಸಿಗಳಿಂದ ನಿಧಿಗಳನ್ನು ವಿಶ್ವವಿದ್ಯಾಲಯವು ಸ್ವೀಕರಿಸಿದಾಗಲೆಲ್ಲಾ,-

(i) ವಿಶ್ವವಿದ್ಯಾಲಯವು ಸ್ವೀಕರಿಸಿದ ಮೊಬಲಗನ್ನು ವಿಶ್ವವಿದ್ಯಾಲಯ ನಿಧಿಯಿಂದ ಪ್ರತ್ಯೇಕವಾಗಿಡತಕ್ಕದ್ದು ಮತ್ತು ಸ್ಕೀಮಿನ ಉದ್ದೇಶಕ್ಕಾಗಿ ಮಾತ್ರ ವಿನಿಯೋಗಿಸತಕ್ಕದ್ದು:

(ii) ಸ್ಕೀಮನ್ನು ಕಾರ್ಯಗತಗೊಳಿಸಲು ಅವಶ್ಯಕವಿರುವ ಸಿಬ್ಬಂದಿಯನ್ನು ನೇಮಿಸಿಕೊಳ್ಳತಕ್ಕದ್ದು ಮತ್ತು ಸ್ಕೀಮಿನಲ್ಲಿ ಮಾಡಬೇಕಾದ ಕೆಲಸದ ಮೇಲೆ ಭರಿಸುವ ವೆಚ್ಚವು, ಪ್ರಾಯೋಜಿತ ಸಂಸ್ಥೆಯು ಗೊತ್ತುಪಡಿಸಿದ ನಿಬಂಧನೆಗಳು ಮತ್ತು ಷರತ್ತುಗಳ ಅನುಸಾರವಾಗಿ ಇರತಕ್ಕದ್ದು.

**13. ವಿಶ್ವವಿದ್ಯಾಲಯದ ಬೋಧನೆ ಮತ್ತು ಸಂಶೋಧನೆ.-** (1) ವಿಶ್ವವಿದ್ಯಾಲಯದ ಪದವಿಗಳು, ಡಿಪ್ಲೋಮಾಗಳು ಮತ್ತು ಸರ್ಟಿಫಿಕೇಟ್‌ಗಳಿಗೆ ಸಂಬಂಧಿಸಿದ ಎಲ್ಲಾ ಮಾನ್ಯತೆ ಪಡೆದ ಬೋಧನೆಯನ್ನು ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಿದ ಪಠ್ಯಕ್ರಮದ ಅನುಸಾರವಾಗಿ, ವಿದ್ಯಾವಿಷಯಕ ಪರಿಷತ್ತಿನ ನಿಯಂತ್ರದ ಅಡಿಯಲ್ಲಿ ವಿಶ್ವವಿದ್ಯಾಲಯದ ಬೋಧಕರು ನಿರ್ವಹಿಸತಕ್ಕದ್ದು.

(2) ಕೋರ್ಸುಗಳು ಮತ್ತು ಪಠ್ಯವಿಷಯಗಳು ಹಾಗೂ ಅಂಥ ಬೋಧನೆಯನ್ನು ಆಯೋಜಿಸುವುದಕ್ಕಾಗಿ ಜವಾಬ್ದಾರರಾಗಿರುವ ಪ್ರಾಧಿಕಾರಗಳು ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

(3) ವಿಶ್ವವಿದ್ಯಾಲಯದ ಬೋಧಕರು, ಜ್ಞಾನಾಭಿವೃದ್ಧಿ ಉದಯದ ಜೊತೆಜೊತೆಗೆ ನಡೆಯಲು ವಿಶ್ವವಿದ್ಯಾಲಯ ಮತ್ತು ಇತರ ಏಜೆನ್ಸಿಗಳಿಂದ ನಿಧಿನೀಡಿಕೆಯೊಂದಿಗೆ ಅಥವಾ ನಿಧಿನೀಡಿಕೆ ಇಲ್ಲದೆ ಸಂಶೋಧನೆ ನಡೆಸತಕ್ಕದ್ದು ಮತ್ತು ಮಾರ್ಗದರ್ಶನ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ,

**ಕೆ. ದ್ವಾರಕನಾಥ್ ಬಾಬು**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ.

ಸಂಖ್ಯೆ: ಇಡಿ 41 ಯುಬಿವಿ 2018(ಭಾಗ-2)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 30.10.2019

**ಅಧಿಸೂಚನೆ**

ಬೆಂಗಳೂರು ಡಾ: ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ, 2018 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ:20)ರ 1ನೇ ಪ್ರಕರಣದ (2)ನೇ ಉಪ-ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ದಿನಾಂಕ: 30.10.2019ರಂದು ಜಾರಿಗೆ ಬರತಕ್ಕದ್ದೆಂದು ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಹೇಶ ಆರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ
(ವಿಶ್ವವಿದ್ಯಾಲಯಗಳು-2)

**2021ರ ಕರ್ನಾಟಕ ಅಧಿನಿಯಮ ಸಂಖ್ಯೆ:05**

(2021 ರ ಫೆಬ್ರುವರಿ ತಿಂಗಳ 19ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2021**

(2021ರ ಫೆಬ್ರುವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮೋದನೆಯನ್ನು ಪಡೆಯಲಾಗಿದೆ)

ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ, 2018ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ, 2018ನ್ನು (2019ರ ಕರ್ನಾಟಕ ಅಧಿನಿಯಮ 20) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಶೀರ್ಷಿಕೆ, ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯ ತಿದ್ದುಪಡಿ.-** ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಅಧಿನಿಯಮ, 2018ರಲ್ಲಿ (2019ರ ಕರ್ನಾಟಕ ಅಧಿನಿಯಮ 20) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ),

(i) ಶೀರ್ಷಿಕೆಯಲ್ಲಿ, ``ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ" ಎಂಬ ಪದಗಳು ಮತ್ತು ಅಕ್ಷರಗಳಿಗೆ ``ಡಾ. ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು" ಎಂಬ ಪದಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು;

(ii) ದೀರ್ಘ ಶೀರ್ಷಿಕೆ ಮತ್ತು ಪ್ರಸ್ತಾವನೆಯಲ್ಲಿ "ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ" ಎಂಬ ಪದಗಳು ಮತ್ತು ಅಕ್ಷರಗಳು ಬರುವೆಡೆಗಳಲ್ಲೆಲ್ಲಾ ``ಡಾ. ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು" ಎಂಬ ಪದಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು;

**3. 1ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 1ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ``ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ" ಎಂಬ ಪದಗಳು ಮತ್ತು ಅಕ್ಷರಗಳಿಗೆ ``ಡಾ. ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು" ಎಂಬ ಪದಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

**4. 2ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 2ನೇ ಪ್ರಕರಣದ (13)ನೇ ಖಂಡದಲ್ಲಿ ``ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, (BASE) ವಿದ್ಯಾಲಯ ವಿಶ್ವವಿದ್ಯಾಲಯ" ಎಂಬ ಪದಗಳು, ಅಕ್ಷರಗಳು, ಆವರಣ ಚಿಹ್ನೆಗಳಿಗೆ ``ಡಾ. ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು" ಎಂಬ ಪದಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

**5. 3ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ``ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯ" ಎಂಬ ಪದಗಳು ಮತ್ತು ಅಕ್ಷರಗಳಿಗೆ ``ಡಾ. ಬಿ. ಆರ್. ಅಂಬೇಡ್ಕರ್ ಅರ್ಥಶಾಸ್ತ್ರ, ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು" ಎಂಬ ಪದಗಳು ಮತ್ತು ಅಕ್ಷರಗಳನ್ನು ಪ್ರತಿಯೋಜಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ.ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ